11 March 2026 Wednesday
SINCE 1957
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ
ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಬೇರು ಆಳಕ್ಕೆ ಇಳಿಯುತ್ತಾ ಬಂದಂತೆ ಮರ ಗಟ್ಟಿಯಾಗುತ್ತಾ ಬರುತ್ತದೆ! ಹಾಗೆಯೇ ಬದುಕಿನ ಅನುಭವಗಳು ಪ್ರಬುದ್ಧತೆಯನ್ನು ಕೊಡುತ್ತಾ ಬರುತ್ತವೆ!

-ಸ್ನೇಹಾ ಆನಂದ್


ಸಾಮೂಹಿಕ ವಿವಾಹಕ್ಕೆ ಸಾಕ್ಷಿಯಾದ ಸೌಮ್ಯ ಅನಿಲ್ ಚಿಕ್ಕಮಾದು ಪುಟ ಸಂ. 2


ನಗರಸಭೆವತಿಯಿಂದ ಎಪಿಎಂಸಿ ಮಾರುಕಟ್ಟೆಯಲ್ಲಿ ಬಟ್ಟೆ ಬ್ಯಾಗ್ ವಿತರಣಾ ಯಂತ್ರ ಪುಟ ಸಂ. 3


ಮಹಿಳೆಯೆಂದರೆ ಶಕ್ತಿ, ಧೈರ್ಯ, ಕಾಳಜಿ: ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ ಪುಟ ಸಂ. 4

info.varthaman@gmail.com
9742504916

ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು
ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್
VARTHAMAN Volume: 69 Issue: 119 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

# ದೇವೇಗೌಡರಿಂದಲೇ ಹಣಕಾಸು ಸಚಿವ ಸ್ಥಾನ ಸಿಕ್ಕಿದ್ದು: ಸಿಎಂ ಸಿದ್ದರಾಮಯ್ಯ

**ಬೆಂಗಳೂರು:** ದೇವೇಗೌಡರು ಮುಖ್ಯಮಂತ್ರಿ ಆಗಿದ್ದಾಗ ನನಗೆ ನಂಬಿಕಸ್ಥ ಬೇಕು. ಅದಕ್ಕಾಗಿ ನೀನೇ ಹಣಕಾಸು ಸಚಿವನಾಗಬೇಕು ಎಂದು ಬಲವಂತ ಮಾಡಿ ಮೊದಲ ಬಾರಿಗೆ ನನ್ನನ್ನು ಹಣಕಾಸು ಸಚಿವನಾಗಿ ಮಾಡಿದರು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿವೇಶನದಲ್ಲಿ ತಿಳಿಸಿದರು.

ವಿಧಾನಸಭೆಯಲ್ಲಿ ಮಂಗಳವಾರ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಮಾತನಾಡಿ, ಸಿದ್ದರಾಮಯ್ಯನವರೇ ತಾವು ದಾಖಲೆಯ ಬಜೆಟ್ ಮಂಡಿಸಿದ್ದೀರಿ. ತಮಗೆ ಅಭಿನಂದನೆಗಳು. ನೂರು ಕುರಿಗಳನ್ನು ಲೆಕ್ಕ ಹಾಕಲು ಬಾರದವ ಬಜೆಟ್ ಏನು ಮಂಡಿಸುತ್ತಾನೆ ಎಂದು ಆರಂಭದಲ್ಲಿ ನಿಂದಿಸಿದರು ಎಂದು ನೀವೇ ಹೇಳಿದ್ದಿರಿ. ಆದರೂ ದೇವೇಗೌಡರು ನಿಮ್ಮನ್ನು ಫೈನಾನ್ಸ್ ಮಿನಿಸ್ಟರ್ ಮಾಡಿದರಂತೆ ಹೌದೇ ಎಂದು ಪ್ರಶ್ನಿಸಿದರು. ಆಗ ಸದನದಲ್ಲಿ ಎದ್ದು ನಿಂತು ಮಾತನಾಡಿದ ಸಿದ್ದರಾಮಯ್ಯ ಪುಟ 2ಕ್ಕೆ



## ಡಿಕೆಶಿಗೆ ಉಜ್ವಲ ಭವಿಷ್ಯ!



**ಬೆಂಗಳೂರು:** ಕೆಪಿಸಿಸಿ ಅಧ್ಯಕ್ಷರಾಗಿ 6 ವರ್ಷ ಯಶಸ್ವಿಯಾಗಿ ಪೂರೈಸಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿನಂದಿಸಿದ್ದಾರೆ. ಶಿವಕುಮಾರ್ ಅವರ ಸಂಘಟನಾ ಚಾತುರ್ಯ, ಸೈದ್ಧಾಂತಿಕ ಬದ್ಧತೆ ಮತ್ತು ಕಠಿಣ ಶ್ರಮ ನಮ್ಮ ಪಕ್ಷದ ಎಲ್ಲ ಯುವನಾಯಕರಿಗೆ ಮಾದರಿ ಎಂದಿದ್ದಾರೆ.

ವಿರೋಧ ಪಕ್ಷವಾದ ಬಿಜೆಪಿ ಸುಳ್ಳು ಕೇಸ್ ಗಳನ್ನು ಹಾಕಿ ಬಗೆಬಗೆಯ ಕಿರುಕಳ ನೀಡಿದರೂ ಶಿವಕುಮಾರ್ ಅವರು ಮಣಿಯದೆ ಪಕ್ಷಕ್ಕೆ ನಿಷ್ಠರಾಗಿ ಉಳಿದಿರುವುದು ಕಾಂಗ್ರೆಸ್ ಪಕ್ಷದ ಬಗ್ಗೆ ಅವರಲ್ಲಿರುವ ರಾಜಿಯಿಲ್ಲದ ನಿಷ್ಠೆಗೆ ಸಾಕ್ಷಿಯಾಗಿದೆ. ಇದು ಕಾಂಗ್ರೆಸ್ ಪಕ್ಷದ ಲಕ್ಷಾಂತರ ಕಾರ್ಯಕರ್ತರಿಗೆ ಸ್ಫೂರ್ತಿದಾಯಕ ನಡವಳಿಕೆ ಆಗಿದೆ ಎಂದು ಶ್ಲಾಘಿಸಿದ್ದಾರೆ.

ನನಗಿಂತ ಕಿರಿಯರಾದ ಶಿವಕುಮಾರ್ ಅವರಿಗೆ ಉಜ್ವಲವಾದ ರಾಜಕೀಯ ಭವಿಷ್ಯವಿದೆ. 2028ರಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಬೇಕು ಎನ್ನುವುದು ನಮ್ಮೆಲ್ಲರ ಬಯಕೆಯಾಗಿದೆ. ಇದಕ್ಕಾಗಿ ನಡೆಯುವ ಪಕ್ಷದ ಸಂಘಟನೆ ಮತ್ತು ಹೋರಾಟದಲ್ಲಿ ಪುಟ 2ಕ್ಕೆ

## ಸಹಪಾಠಿಗಳ ಮೇಲೆ ಹಲ್ಲೆ, ಕೊಲೆ: ಬಾಲಕನ ಬಂಧನ

**ಬಳ್ಳಾರಿ:** ಬಳ್ಳಾರಿಯ ಖಾಸಗಿ ವಸತಿ ಶಾಲೆಯಲ್ಲಿ ಮಲಗಿದ್ದ ತನ್ನ ಸಹಪಾಠಿಗಳ ಮೇಲೆ ಮನಸೋ ಇಚ್ಛೆ ಹಲ್ಲೆ ನಡೆಸಿ ಒಬ್ಬ ಬಾಲಕನ ಸಾವಿಗೆ ಕಾರಣನಾಗಿದ್ದ ಬಾಲಕನನ್ನು ಪೊಲೀಸರು ಬಂಧಿಸಿದ್ದಾರೆ.

ಘಟನೆ ನಂತರ ಮಾರ್ಚ್ 7ರ ರಾತ್ರಿಯಿಂದ ನಾಪತ್ತೆಯಾಗಿದ್ದ ಬಾಲಕನ ಪತ್ತೆಗಾಗಿ ಬಳ್ಳಾರಿ ಪೊಲೀಸರು ಪ್ರತ್ಯೇಕ ಏಳು ತಂಡ ರಚನೆ ಮಾಡಿದ್ದರು. ಬಳ್ಳಾರಿ ನಗರದ ಸುಮಾರು 7 ಸಾವಿರ ಸಿಸಿಟಿವಿ ಪರಿಶೀಲಿಸಿದ ಪೊಲೀಸರು, ಖಚಿತ ಮಾಹಿತಿ ಮೇರೆಗೆ ಬಾಲಕನನ್ನು ಪತ್ತೆ ಹಚ್ಚಿದ್ದಾರೆ.

ಕೊಲೆ ಆರೋಪಿ ಬಾಲಕನಿಗೆ ವೈದ್ಯರ ಮೂಲಕ ಕೌನ್ಸಿಲಿಂಗ್ ಮಾಡಿಸಿ, ಘಟನೆಗೆ ಕಾರಣ ಹುಡುಕುವ ಪ್ರಯತ್ನವನ್ನು ಪೊಲೀಸರು ಮಾಡುತ್ತಿದ್ದಾರೆ. ನಿಯಮಾನುಸಾರ ವೈದ್ಯರ ತಂಡ ವೈದ್ಯಕೀಯ ಪರೀಕ್ಷೆ ಪುಟ 2ಕ್ಕೆ

## ಮೈಸೂರಿಗೆ ಮಾ.13ರಂದು ಸಿಎಂ ಸಿದ್ದರಾಮಯ್ಯ ಭೇಟಿ

**ಮೈಸೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಮಾರ್ಚ್ 13ರಂದು ಮೈಸೂರು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ. ಶುಕ್ರವಾರ ಬೆಳಗ್ಗೆ 11 ಗಂಟೆಗೆ ವಿಶೇಷ ವಿಮಾನದ ಮೂಲಕ ಬೆಂಗಳೂರಿನಿಂದ ಮೈಸೂರು ಜಿಲ್ಲೆಯ ವರುಣಾ ಹೋಬಳಿ ವರಕೂಡು ಗ್ರಾಮದ ಹೆಲಿಪ್ಯಾಡ್‌ಗೆ ಆಗಮಿಸಲಿದ್ದಾರೆ



ಶ್ರೀ ಬೀರೇಶ್ವರಸ್ವಾಮಿ ದೇವಸ್ಥಾನದ ಸಂಪ್ರೋಕ್ಷಣ, ಪುನರ್ ಪ್ರತಿಷ್ಠಾಪನೆ, ಕುಂಭಾಭಿಷೇಕ ಹಾಗೂ ಮಹಾದ್ವಾರ ಪೂಜಾ ಮಹೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ನಂತರ ಮೈಸೂರು ಜಿಲ್ಲೆಯ ಜಿಲ್ಲಾಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸಲಿದ್ದಾರೆ. ಮಧ್ಯಾಹ್ನ 2 ಘಂಟೆಗೆ ವರಕೂಡು ಗ್ರಾಮದ ಹೆಲಿಪ್ಯಾಡ್‌ನಿಂದ ಬೆಂಗಳೂರಿಗೆ ವಾಪಸ್ ತೆರಳಲಿದ್ದಾರೆ.

# ಕೊಲ್ಲಿ ಕಾಳಗ: ಗ್ಯಾಸ್ ಟ್ರಬಲ್

## ವಾಣಿಜ್ಯ ಗ್ಯಾಸ್ ಪೂರೈಕೆ ವ್ಯತ್ಯಯ | ಹೋಟೆಲ್ ಉದ್ಯಮಕ್ಕೆ ಆತಂಕ

**ಬೆಂಗಳೂರು:** ಇರಾನ್ ಮತ್ತು ಇಸ್ರೇಲ್ ನಡುವಿನ ಯುದ್ಧ ತೀವ್ರಗೊಂಡಿರುವ ಹಿನ್ನೆಲೆಯಲ್ಲಿ ಪ್ರಮುಖ ನಗರಗಳ ಹೋಟೆಲ್ ಉದ್ಯಮ ಬಂದ್ ಆಗುವ ಆತಂಕ ಎದುರಿಸುತ್ತಿವೆ.

ಬೆಂಗಳೂರಿನಲ್ಲಿ ಮಂಗಳವಾರ ವಾಣಿಜ್ಯ ಅನಿಲ ಸಿಲಿಂಡರ್ ಪೂರೈಕೆ ಇಲ್ಲದಿರುವುದರಿಂದ ಒತ್ತಡದಲ್ಲಿ ಕಾರ್ಯನಿರ್ವಹಿಸುತ್ತಿವೆ. ಸ್ಟಾಕ್ ಖಾಲಿಯಾದ ನಂತರ ಅವುಗಳನ್ನು ಮುಚ್ಚಬೇಕಾಗುತ್ತದೆ ಎಂದು ಸಿಬ್ಬಂದಿ ತಿಳಿಸಿದ್ದಾರೆ. ಗ್ಯಾಸ್ ಪೂರೈಕೆ ನಿಂತಿರುವುದರಿಂದ ಹೋಟೆಲ್‌ಗಳನ್ನು ಮುಚ್ಚುವುದು ಅನಿವಾರ್ಯ ಆಗಬಹುದು ಎಂದು ಸಂಘ ತಿಳಿಸಿದೆ. ಕೆಲವು ಹೋಟೆಲ್‌ಗಳು ಇಂಧನವನ್ನು ಉಳಿಸಲು ಮತ್ತು ತಮ್ಮ ಸ್ಟಾಕ್ ಅನ್ನು ದೀರ್ಘ ಕಾಲದವರೆಗೆ ವಿಸ್ತರಿಸಲು ಹೆಚ್ಚಿನ ಅನಿಲ ಬಳಸುವ ಕೆಲವು ತಿನಿಸುಗಳ ತಯಾರಿಕೆಯನ್ನೇ ನಿಲ್ಲಿಸಿವೆ. ಈ ಸಮಸ್ಯೆ ಶೀಘ್ರದಲ್ಲೇ ಬಗೆಹರಿಯುತ್ತದೆ ಎಂಬ ವಿಶ್ವಾಸವಿದೆ. ಏಕೆಂದರೆ ಇದು ಕೇವಲ ರಾಜ್ಯಕ್ಕೆ ಸಂಬಂಧಿಸಿದ ವಿಷಯವಲ್ಲ. ಇಡೀ ದೇಶಕ್ಕೆ ಸಂಬಂಧಿಸಿದ ವಿಷಯ. ಅದಕ್ಕಾಗಿಯೇ ಇದನ್ನು ಪರಿಹರಿಸಬೇಕು ಬೆಂಗಳೂರು ಹೋಟೆಲ್‌ಗಳ ಸಂಘದ ಗೌರವಾಧ್ಯಕ್ಷ ಪಿ.ಸಿ ರಾವ್ ತಿಳಿಸಿದ್ದಾರೆ.

ಅನಿಲ ಪೂರೈಕೆ ಸಾಮಾನ್ಯ ಸ್ಥಿತಿಗೆ ಬರುವವರೆಗೆ ನಮ್ಮ ಹೋಟೆಲ್ ಉದ್ಯಮ ಸಹ ತೊಂದರೆಗಳನ್ನು ಎದುರಿಸಬೇಕಾಗುತ್ತದೆ. ತೈಲ ಕಂಪನಿಗಳು 70 ದಿನಗಳವರೆಗೆ ನಿರಂತರ ಅನಿಲ ಪೂರೈಕೆಯನ್ನು ಖಾತರಿಪಡಿಸಿವೆ. ಇದರಿಂದಾಗಿ ಹಠಾತ್ ನಿಲುಗಡೆ ಹೋಟೆಲ್ ಉದ್ಯಮಕ್ಕೆ ದೊಡ್ಡ ಹೊಡೆತವಾಗಿದೆ ಎಂದು ಸಂಘ ತಿಳಿಸಿದೆ.





### ಶೇ.20ರಷ್ಟು ಹೋಟೆಲ್ ಬಂದ್

**ಮುಂಬೈ:** ವಾಣಿಜ್ಯ ಎಲ್‌ಪಿಜಿ ಪೂರೈಕೆಯ ಕೊರತೆಯಿಂದ ಮುಂಬೈನ ಸುಮಾರು ಶೇ.20ರಷ್ಟು ಹೋಟೆಲ್‌ಗಳು ಮತ್ತು ರೆಸ್ಟೋರೆಂಟ್‌ಗಳು ಬಂದ್ ಆಗಿವೆ ಎಂದು ಹೋಟೆಲ್ ಮತ್ತು ರೆಸ್ಟೋರೆಂಟ್ ಸಂಘ ತಿಳಿಸಿದೆ. ಅನಿಲ ಪೂರೈಕೆ ಪರಿಸ್ಥಿತಿ ಸುಧಾರಿಸದಿದ್ದರೆ ಮುಂದಿನ ಎರಡು ದಿನಗಳಲ್ಲಿ ನಗರದ ಶೇ.50ರಷ್ಟು ಹೋಟೆಲ್‌ಗಳು ಮುಚ್ಚುವ ಸಾಧ್ಯತೆಗಳಿವೆ. ಕಾರ್ಯನಿರ್ವಹಿಸುತ್ತಿರುವ ರೆಸ್ಟೋರೆಂಟ್‌ಗಳ ಸಂಖ್ಯೆ ಗ್ಯಾಸ್ ಸಿಲಿಂಡರ್ ಸ್ಟಾಕ್ ಎಷ್ಟು ಹೊಂದಿವೆ ಎಂಬುದರ ಆಧಾರದ ಮೇಲೆ ಅವಲಂಬಿತವಾಗಿವೆ. ಪರಿಸ್ಥಿತಿ ಹೀಗೆಯೇ ಮುಂದುವರಿದರೆ ಮುಂಬರುವ ದಿನಗಳಲ್ಲಿ ಮುಂಬೈನ ಅರ್ಧದಷ್ಟು ಹೋಟೆಲ್‌ಗಳು ಮುಚ್ಚುವ ಸಾಧ್ಯತೆಗಳಿವೆ ಎಂದು ಸಂಘ ಹೇಳಿದೆ.

### ಕೇಂದ್ರ ಸಚಿವರಿಗೆ ಸಿಎಂ ಪತ್ರ

**ಬೆಂಗಳೂರು:** ವಾಣಿಜ್ಯ ಬಳಕೆ ಸಿಲಿಂಡರ್‌ಗಳ ಪೂರೈಕೆ ಸ್ಥಗಿತಗೊಂಡಿದ್ದರಿಂದ ಬೆಂಗಳೂರಿನ ಹೋಟೆಲ್, ರೆಸ್ಟೋರೆಂಟ್ ಗಳಿಗೆ ತೊಂದರೆಯಾಗುತ್ತಿದೆ ಎಂದು ಕೇಂದ್ರ ಪೆಟ್ರೋಲಿಯಂ ಸಚಿವ ಹರ್ದೀಪ್ ಸಿಂಗ್ ಪುರಿ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ರ ಬರೆದು ಕಳವಳ ವ್ಯಕ್ತಪಡಿಸಿದ್ದಾರೆ.

ತೈಲ ಮಾರುಕಟ್ಟೆ ಕಂಪನಿಗಳು ಪೂರೈಸುವ ಎಲ್‌ಪಿಜಿಯನ್ನು ಕೇವಲ ಗೃಹ ಬಳಕೆದಾರರಿಗೆ ಮಾತ್ರ ಮಾರಾಟ ಮಾಡಬೇಕೆಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ ಆದೇಶಿಸಿದೆ. ದೇಶದ ಪ್ರತಿ ಮನೆಗಳಿಗೆ ಅಡೆತಡೆಯಿಲ್ಲದೆ ಅಡುಗೆ ಅನಿಲ ಪೂರೈಕೆ ಮಾಡಬೇಕೆಂಬುದು ಈ ಆದೇಶದ ಹಿಂದಿನ ಉದ್ದೇಶವಾದರೂ, ಇದರ ಅನುಷ್ಠಾನದಿಂದಾಗಿ ಬೆಂಗಳೂರಿನಲ್ಲಿ ವಾಣಿಜ್ಯ ಬಳಕೆಯ ಸಿಲಿಂಡರ್‌ಗಳ ಕೊರತೆಯಾಗಿದೆ ಎಂದು ಪುಟ 2ಕ್ಕೆ

## ಇಂಧನ ಕೊರತೆ: ಮೋದಿ ಸಭೆ

**ಕೇಂದ್ರ ಸಚಿವರಾದ ಹರ್ದೀಪ್ ಸಿಂಗ್, ಜೈಶಂಕರ್ ಭಾಗಿ**

**ನವದೆಹಲಿ:** ಇರಾನ್-ಇಸ್ರೇಲ್ ಮತ್ತು ಅಮೆರಿಕ ನಡುವಿನ ಯುದ್ಧದಿಂದ ಉಂಟಾಗಿರುವ ಅನಿಲ (ಎಲ್‌ಪಿಜಿ) ಕೊರತೆ ಸರಿದೂಗಿಸುವ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರು ಪೆಟ್ರೋಲಿಯಂ ಸಚಿವ ಹರ್ದೀಪ್ ಸಿಂಗ್ ಪುರಿ, ವಿದೇಶಾಂಗ ಸಚಿವ ಎಸ್.ಜೈಶಂಕರ್ ಮತ್ತು ಉನ್ನತ ಅಧಿಕಾರಿಗಳೊಂದಿಗೆ ಮಂಗಳವಾರ ಉನ್ನತ ಮಟ್ಟದ ಚರ್ಚೆ ನಡೆಸಿದರು.





ಮಧ್ಯಪ್ರಾಚ್ಯ ಯುದ್ಧದ ಪರಿಣಾಮಗಳಿಂದ ದೇಶೀಯ ಗ್ರಾಹಕರನ್ನು ರಕ್ಷಿಸಲು ಸರ್ಕಾರ ಯೋಜನೆಯನ್ನು ಸಕ್ರಿಯಗೊಳಿಸಿದೆ. ಅಮೆರಿಕ, ಇಸ್ರೇಲ್ ಒಳಗೊಂಡ ಮಿಲಿಟರಿ ಕ್ರಮಗಳು ಮತ್ತು ಟೆಹ್ರಾನ್‌ನ ಪ್ರತೀಕಾರದ ದಾಳಿಗಳ ನಂತರ ಹಾರ್ಮುಜ್ ಜಲಸಂಧಿಯನ್ನು ಮುಚ್ಚಿದ್ದರಿಂದ ಬಿಕ್ಕಟ್ಟು ಉಂಟಾಗಿದೆ. ಈ ಸಮುದ್ರ ಮಾರ್ಗವು ಭಾರತದ ಇಂಧನ ಭದ್ರತೆಗೆ ಅತ್ಯಗತ್ಯವಾಗಿದೆ. ಏಕೆಂದರೆ ದೇಶವು ತನ್ನ ಒಟ್ಟು ಎಲ್‌ಪಿಜಿ ಅವಶ್ಯಕತೆಗಳಲ್ಲಿ ಶೇ.62ರಷ್ಟು ಆಮದು ಮಾಡಿಕೊಳ್ಳುತ್ತದೆ.

ಸೌದಿ ಅರೇಬಿಯಾದಂತಹ ರಾಷ್ಟ್ರಗಳಿಂದ ಪಡೆಯಲಾಗುವ ಈ ಆಮದುಗಳಲ್ಲಿ ಶೇ.85ರಿಂದ ಶೇ.90ರಷ್ಟು ಈಗ ನಿರ್ಬಂಧಿತವಾಗಿರುವ ಜಲಸಂಧಿಯ ಮೂಲಕ ಹಾದು ಬರಬೇಕಾಗಿದೆ. ಸರ್ಕಾರ ಪ್ರಸ್ತುತ ಪರ್ಯಾಯ ಪೂರೈಕೆ ಮೂಲಗಳನ್ನು ಹುಡುಕುತ್ತಿದ್ದರೂ ತಕ್ಷಣದ ಕೊರತೆಯು ಲಭ್ಯವಿರುವ ದಾಸ್ತಾನುಗಳಿಗೆ ಕಟ್ಟುನಿಟ್ಟಿನ ಆದ್ಯತೆಯನ್ನು ನೀಡುವಂತೆ ಮಾಡಿದೆ. ಈ ಕುರಿತು ಮುಂದಿನ ಕ್ರಮಗಳ ಬಗ್ಗೆ ಮೋದಿ ಮಾಹಿತಿ ಪಡೆದಿದ್ದಾರೆ.

# ತಪಿತಸ್ಥರ ವಿರುದ್ಧ ಕಾನೂನು ಕ್ರಮ ಏಕಿಲ್ಲ

## ಸರ್ಕಾರಿ ಭೂಮಿ ಒತ್ತುವರಿ ಪ್ರಕರಣ: ಕ್ರಮಕ್ಕೆ ಶಾಸಕ ಶ್ರೀವತ್ಸ ಆಗ್ರಹ

**ಮೈಸೂರು:** ನಗರದಲ್ಲಿ ಸರ್ವೆ ನಂ.4ರ ಬಯಲಾದ ಭೂ ಒತ್ತುವರಿ ತೆರವು ಮಾಡಿದ್ದಾರೆಯೇ ವಿನಃ ಮೂರು ಪ್ರಕರಣಗಳಲ್ಲಿಯೂ ತಪಿತಸ್ಥರ ವಿರುದ್ಧ ಕಾನೂನು ಕ್ರಮ ಆಗಿಲ್ಲ. ಕಾನೂನು ಕ್ರಮ ಜರುಗಿಸುವವರೆಗೂ ನನ್ನ ಹೋರಾಟ ಮುಂದುವರೆಯಲಿದೆ ಎಂದು ಶಾಸಕ ಶ್ರೀವತ್ಸ ಹೇಳಿದರು.


> ನಾನು ಮುಡಾ ಅಧ್ಯಕ್ಷನಾಗಿದ್ದಾಗ ಸರ್ಕಾರಿ ಭೂಮಿ ಆರ್ ಟಿಸಿ ದಾಖಲೀಕರಣ ಕೆಲಸ ಮಾಡಿಸಿದ್ದೆ. ಆದರೆ ಆನಂತರ ಅದರ ದಾಖಲೀಕರಣ ಮಾಡಿಲ್ಲ. ಸರ್ಕಾರಿ ಜಾಗಗಳ ದಾಖಲೀಕರಣ ಮಾಡಬೇಕು. ಈಗ ಶಾಸಕರು ಪತ್ತೆ ಹಚ್ಚಿರುವ ಮೂರು ಪ್ರಕರಣಗಳಲ್ಲಿ ತಪ್ಪಿತಸ್ಥರ ವಿರುದ್ಧ ಕಾನೂನುಕ್ರಮ ಜರುಗಿಸಬೇಕು.
>
> **ಎಲ್.ನಾಗೇಂದ್ರ** ಬಿಜೆಪಿ ನಗರಾಧ್ಯಕ್ಷ



ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ವೆ ನಂ.4ರಲ್ಲಿ 24 ಎಕರೆ 10 ಗುಂಟೆ ಸರ್ಕಾರಿ ಭೂಮಿಯನ್ನು ಸೇಲ್ ಡೀಡ್ ಮಾಡಿಕೊಂಡು ಅಕ್ರಮ ಎಸಗಿರುವ ಬಗ್ಗೆ ನಾನು ಮಾಧ್ಯಮಗಳಿಗೆ ಮಾಹಿತಿ ನೀಡಿದ್ದೆ. ಇದಾದ ಮರು ದಿನವೇ ಸೇಲ್ ಡೀಡ್ ರದ್ದುಪಡಿಸಿ ಆಸ್ತಿ ವಶಕ್ಕೆ ಪಡೆದುಕೊಳ್ಳಲಾಗಿದೆ. ಆದರೆ, ಅಕ್ರಮವಾಗಿ ಸರ್ಕಾರಿ ಆಸ್ತಿ ಮಾರಾಟಕ್ಕೆ ಯತ್ನಿಸಿದವರ ವಿರುದ್ಧ ಕಾನೂನು ಕ್ರಮಯಾಕೆ ಆಗುತ್ತಿಲ್ಲ ಎಂದು ಪ್ರಶ್ನಿಸಿದರು.

ನಂಜನಗೂಡು ಮುಖ್ಯರಸ್ತೆಯಲ್ಲಿ ಅಕ್ರಮ ಪಾರ್ಕಿಂಗ್ ಸ್ಥಳ ತೆರವು ಮಾಡಲಾಗಿದೆ. ಮತ್ತೊಂದು ಪ್ರಕರಣದಲ್ಲಿ ಕೆರೆ ಜಾಗ ಒತ್ತುವರಿ ಮಾಡಿಕೊಂಡು ಕಾಪೌಂಡ್ ಹಾಕಿಕೊಳ್ಳಲು ಯತ್ನಿಸಿದ್ದರು. ಪ್ರಶ್ನಿಸಿದ ಬಳಿಕ ಕಾಪೌಂಡ್ ತೆರವುಗೊಳಿಸಲಾಯಿತು. ಆದರೆ, ಮೂರು ಪ್ರಕರಣಗಳಲ್ಲಿಯೂ ತೆರವು ನಡೆದಿದೆ. ಮರಳಿ ಪುಟ 2ಕ್ಕೆ

# ವಿಶ್ವಕಪ್ ಗೆದ್ದ ಭಾರತ ತಂಡಕ್ಕೆ ಬಿಸಿಸಿಐನಿಂದ 131 ಕೋಟಿ ರೂ.



**ಮುಂಬೈ:** ಟಿ20 ವಿಶ್ವಕಪ್ ಗೆದ್ದ ಭಾರತೀಯ ತಂಡಕ್ಕೆ 131 ಕೋಟಿ ರೂ. ನಗದು ಬಹುಮಾನವನ್ನು ಘೋಷಿಸುವ ಮೂಲಕ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ತನ್ನದೇ ದಾಖಲೆ ಮುರಿದಿದೆ.

ರೋಹಿತ್ ಶರ್ಮಾ ನಾಯಕತ್ವದಲ್ಲಿ ಭಾರತ ತಂಡ ಬಾರ್ಬಡೋಸ್‌ನಲ್ಲಿ 2024ರ ಟಿ20 ವಿಶ್ವಕಪ್ ಗೆದ್ದಾಗ ಮಂಡಳಿಯು 125 ಕೋಟಿ ರೂಪಾಯಿ ನಗದು ಬಹುಮಾನವನ್ನು ನೀಡಿತ್ತು. ಈಗ ಸೂರ್ಯಕುಮಾರ್ ಯಾದವ್ ನೇತೃತ್ವದ ತಂಡ ಅಹಮದಾಬಾದ್‌ನಲ್ಲಿ ಇತಿಹಾಸ ಬರೆದು, ಪ್ರಶಸ್ತಿಯನ್ನು ಯಶಸ್ವಿಯಾಗಿ ಉಳಿಸಿಕೊಂಡ ಮೊದಲ ತಂಡವಾಗಿ ಮಾರ್ಪಟ್ಟಾಗ ಬಿಸಿಸಿಐ ಇನ್ನೂ ದೊಡ್ಡ ಬಹುಮಾನವನ್ನು ಘೋಷಿಸಿದೆ.

2026ರ ಐಸಿಸಿ ಪುರುಷರ ಟಿ20 ವಿಶ್ವಕಪ್‌ನಲ್ಲಿ ಭಾರತ ತಂಡವು ಜಯಗಳಿಸಿದ ನಂತರ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ತಂಡಕ್ಕೆ 131 ಕೋಟಿ ರೂ. ನಗದು ಬಹುಮಾನವನ್ನು ಘೋಷಿಸಿದೆ. ಅಹಮದಾಬಾದ್ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಫೈನಲ್‌ನಲ್ಲಿ ನ್ಯೂಜಿಲೆಂಡ್ ತಂಡವನ್ನು ಸೋಲಿಸುವ ಮೂಲಕ ಭಾರತ ಟ್ರೋಫಿಯನ್ನು ಎತ್ತಿಹಿಡಿಯಿತು. ಪ್ರಶಸ್ತಿಯನ್ನು ಯಶಸ್ವಿಯಾಗಿ ಉಳಿಸಿಕೊಂಡಿತು. ಪುಟ 2ಕ್ಕೆ

# ಟ್ರಂಪ್ ಬೊಂಬೆಯಂತೆ ಮೋದಿ ವರ್ತನೆ

## ಭಾರತದ ಬಗ್ಗೆ ಅಮೆರಿಕಾ ಅವಮಾನಕರ ಹೇಳಿಕೆ: ಸಿದ್ದರಾಮಯ್ಯ ವಾಗ್ದಾಳಿ

**ಬೆಂಗಳೂರು:** ಭಾರತದ ಕಾರ್ಯನಿರ್ವಹಣಾ ಪ್ರಧಾನ ಮಂತ್ರಿಗಳಂತೆ ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಾತನಾಡುತ್ತಿದ್ದಾರೆ. ಆದರೆ, ಪ್ರಧಾನಿ ಮೋದಿ ಅವರು ಟ್ರಂಪ್ ಸೂಚನೆ ಪಾಲಿಸುತ್ತಿರುವ ಬೊಂಬೆಯಂತೆ ಕಾಣಿಸುತ್ತಿದ್ದಾರೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕಟುವಾಗಿ ಟೀಕಿಸಿದ್ದಾರೆ.

ರಷ್ಯಾ ತೈಲ ಖರೀದಿ ವಿಚಾರದಲ್ಲಿ ಟ್ರಂಪ್ ಹೇಳಿಕೆಗೆ ಕಿಡಿಕಾರಿರುವ ಸಿದ್ದರಾಮಯ್ಯ ಅವರು, ಭಾರತದ ಆರ್ಥಿಕ ಮತ್ತು ವಿದೇಶಾಂಗ ನಿರ್ಧಾರಗಳಲ್ಲಿ ಅಮೆರಿಕಾದ ಪ್ರಭಾವ ಹೆಚ್ಚುತ್ತಿರುವುದಾಗಿ ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಪೋಸ್ಟ್ ಮಾಡಿದ್ದಾರೆ. ರಷ್ಯಾದಿಂದ ತೈಲ ಖರೀದಿಸಲು 30 ದಿನ ಅವಕಾಶ ನೀಡುವುದಾಗಿ ಅಮೆರಿಕಾ ಹೇಳಿಕೆ ನೀಡುತ್ತಿರುವುದು ಭಾರತಕ್ಕೆ ಅವಮಾನಕರ ವಿಚಾರವಾಗಿದೆ ಎಂದು ಟೀಕಿಸಿದ್ದಾರೆ.

ಯಾವುದೇ ವಿದೇಶಿ ಸರ್ಕಾರವು ಭಾರತದ ಆರ್ಥಿಕತೆ ಹೇಗೆ ನಡೆಯಬೇಕು ಎಂದು ಅನುಮತಿ ನೀಡುವ ಅಥವಾ ತಡೆಯುವ ಸ್ಥಿತಿಯಲ್ಲಿ ಇರಬಾರದು. ಈಗಿನ ಪರಿಸ್ಥಿತಿಯನ್ನು ನೋಡಿದರೆ ಭಾರತದ ಪುಟ 2ಕ್ಕೆ



### ದಾಳಿ ಮುಂದುವರಿದರೆ 1 ಲೀಟರ್ ತೈಲವೂ ಸಿಗಲ್ಲ

**ಟೆಹ್ರಾನ್:** ಯುದ್ಧ ನಿಲ್ಲಿಸುವ ನಿರ್ಧಾರ ಅಮೆರಿಕ ಮಾಡಲು ಸಾಧ್ಯವಿಲ್ಲ. ಅದು ಏನಿದ್ದರೂ ನಮ್ಮ ನಿರ್ಧಾರ ಎಂದು ಇರಾನ್‌ನ ಐಆರ್‌ಜಿಸಿ (ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್) ಪಡೆ ಅಮೆರಿಕ ಅಧ್ಯಕ್ಷ ಟ್ರಂಪ್‌ಗೆ ತಿರುಗೇಟು ನೀಡಿದೆ.

ಯುದ್ಧ ಶೀಘ್ರದಲ್ಲೇ ಕೊನೆಗೊಳ್ಳಲಿದೆ ಪುಟ 2ಕ್ಕೆ

# ದೇಶಾದ್ಯಂತ ಏಕರೂಪ ಕಾನೂನು ಅಗತ್ಯ

## ಮಹಿಳೆಯರ ಸಮಸ್ಯೆಗೆ ಏಕೈಕ ಪರಿಹಾರ | ಸುಪ್ರೀಂಕೋರ್ಟ್ 'ಗ್ರೀನ್ ಸಿಗ್ನಲ್'

**ನವದೆಹಲಿ:** ದೇಶದ ಎಲ್ಲಾ ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ಖಾತ್ರಿಪಡಿಸುವ ಏಕೈಕ ಮಾರ್ಗವೆಂದರೆ ದೇಶಾದ್ಯಂತ ಏಕರೂಪ ನಾಗರಿಕ ಸಂಹಿತೆ ಜಾರಿಗೆ ತರುವ ಅಗತ್ಯವಿದೆ ಎಂದು ಸುಪ್ರೀ ಕೋರ್ಟ್ ಮಂಗಳವಾರ ತಿಳಿಸಿದೆ. ಈ ಮೂಲಕ ಏಕರೂಪ ನಾಗರಿಕ ಸಂಹಿತೆ ಜಾರಿಗೆ ಸುಪ್ರೀಂ ಕೋರ್ಟ್ ಒಲವು ತೋರಿದೆ.

ಮುಸ್ಲಿಂ ವೈಯಕ್ತಿಕ ಕಾನೂನು (ಶರಿಯತ್) ಅಡಿಯಲ್ಲಿ ಮಹಿಳೆಯರ ಹಕ್ಕುಗಳ ಉಲ್ಲಂಘನೆ ನಡೆಯುತ್ತಿದೆ ಎಂದು ಆರೋಪಿಸಿ ಒಂದು ಬ್ಯಾಚ್ ಅರ್ಜಿ ವಿಚಾರಣೆ ನಡೆಸುತ್ತಿರುವ ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿಗಳಾದ ಆರ್.ಮಹದೇವನ್ ಮತ್ತು ಜಾಯ್ಮಲ್ಯ ಬಾಗ್ಚಿ ಅವರನ್ನೊಳಗೊಂಡ ನ್ಯಾಯಪೀಠ ಹೀಗೆ ತಿಳಿಸಿದೆ.

ಮುಸ್ಲಿಂ ಸಮಾಜದ ಒಂದು ದೊಡ್ಡ ವರ್ಗ ಸಮಾನ ಉತ್ತರಾಧಿಕಾರದ ಹಕ್ಕುಗಳಿಂದ ವಂಚಿತವಾಗಿದೆ ಎಂಬುದು ನಿಜ. ಆದರೆ ಶರಿಯಾ ಕಾನೂನು ಉತ್ತರಾಧಿಕಾರದ ನಿಬಂಧನೆಯನ್ನು ತೆಗೆದುಹಾಕಿದರೆ, ನಂತರ ಯಾವ ಕಾನೂನು ಉತ್ತರಾಧಿಕಾರವನ್ನು ನಿಯಂತ್ರಿಸಬೇಕು? ಏಕರೂಪ ನಾಗರಿಕ ಸಂಹಿತೆ ಸರಿಯಾದ ಉತ್ತರವಾಗಿದೆ. ದೇಶದ ಎಲ್ಲಾ ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ಖಚಿತಪಡಿಸಿಕೊಳ್ಳಲು ಇರುವ ಒಂದೇ ಮಾರ್ಗವೆಂದರೆ ಭಾರತದಾದ್ಯಂತ ಏಕರೂಪ ಸಂಹಿತೆ ಜಾರಿಗೆ ತರುವುದು ಎಂದು ತಿಳಿಸಿದೆ.




ಅರ್ಜಿದಾರರ ಪರ ವಾದಿಸಿದ ವಕೀಲ ಪ್ರಶಾಂತ್ ಭೂಷಣ್, ಧಾರ್ಮಿಕ ಸ್ವಾತಂತ್ರವನ್ನು ಖಾತರಿಪಡಿಸುವ ಸಂವಿಧಾನದ 25ನೇ ವಿಧಿಯಡಿ ಉತ್ತರಾಧಿಕಾರಕ್ಕೆ ಸಂಬಂಧಿಸಿದ ವೈಯಕ್ತಿಕ ಕಾನೂನನ್ನು ರಕ್ಷಿಸಲಾಗುವುದಿಲ್ಲ. ಉತ್ತರಾಧಿಕಾರವು ನಾಗರಿಕ ಹಕ್ಕು ಮತ್ತು ಅಗತ್ಯ ಧಾರ್ಮಿಕ ಆಚರಣೆ ಎಂದು ಪರಿಗಣಿಸಲಾಗದು. ಶಾಯರಾ ಬಾನೋ ತೀರ್ಪಿನ ನಂತರ ದೇಶದಲ್ಲಿ ಈಗ ಆ ಪರಿಸ್ಥಿತಿ ಹೊಂದಲು ಸಾಧ್ಯವಿಲ್ಲ. ಮುಸ್ಲಿಂ ಮಹಿಳೆಯರಿಗೆ ಮುಸ್ಲಿಂ ಪುರುಷರಿಗೆ ಇರುವಂತೆ ಸಮಾನವಾದ ಹಕ್ಕುಗಳು ಇರುವುದಿಲ್ಲ ಎಂದು ಹೇಳಿದರು.

ಆದಿವಾಸಿಗಳು ಸೇರಿದಂತೆ ವಿವಿಧ ಸಮಾಜಗಳಲ್ಲಿ ಹಲವಾರು ಅಸಮತೋಲನಗಳಿವೆ ಎಂಬುದನ್ನು ಸುಪ್ರೀಂ ಕೋರ್ಟ್ ಒಪ್ಪಿಕೊಂಡಿತು. ಸುಪ್ರೀಂಕೋರ್ಟ್ ನಿಂದ ಇವುಗಳನ್ನು ತೆಗೆದುಹಾಕಬಹುದೇ? ಎಂದು ಪುಟ 2ಕ್ಕೆ

## ಚಾಂಪಿಯನ್ ಗೆದ್ದ ಮಾರುತಿ ಆರಂಜ್ಯೋತಿ



ಮೈಸೂರು: ಮೈಸೂರು ರಾಣಿ ಯುವಕರ ಬಳಗದಿಂದ ಹಳ್ಳಿಕಾರ್ ತಳಿ ನೆನಪಿನಾರ್ಥ ತಾಲ್ಲೂಕಿನ ಹಂಚ್ಯಾ ಗ್ರಾಮದಲ್ಲಿ ನಡೆದ ರಾಸುಗಳ ಸ್ಪರ್ಧೆಯಲ್ಲಿ ಹಸುಗಳ ಗಾಡಿ ಓಟದ ಸ್ಪರ್ಧೆಯಲ್ಲಿ ಮಾರುತಿ ಆರಂಜ್ಯೋತಿ ತಂಡ ಪ್ರಥಮ ಸ್ಥಾನ ಪಡೆಯುವ 50 ಸಾವಿರ ನಗದು ಬಹುಮಾನದ ಮೂಲಕ ಚಾಂಪಿಯನ್ ಶಿಪ್ ಪಟ್ಟಕ್ಕೇರಿತು.

ಎರಡು ದಿನಗಳ ಕಾಲ ನಡೆದ ಸ್ಪರ್ಧೆಯಲ್ಲಿ ಹಸುಗಳ ಗಾಡಿ ಓಟದ ಸ್ಪರ್ಧೆಯಲ್ಲಿ 50 ತಂಡ ಭಾಗವಹಿಸಿದ್ದವು. ಈ ಪೈಕಿ ಮಾರುತಿ ಆರಂಜ್ಯೋತಿ(ಪ್ರ) 50 ಸಾವಿರ ನಗದು, ಆರ್ ಎಸ್ ಜಗ್ಗು ಪಟ್ಲಿ(ದ್ವಿ) 30ಸಾವಿರ ನಗದು, ಕೆಂದ ಗದ್ದೆ ಮಾಸ್ತಮ್ಮ( ತೃ)20ಸಾವಿರ ನಗದು ಮತ್ತು ಅರುರೂ ವಂಡಳ್ಳಿ ರುಕ್ಕು(ನಾಲ್ಕನೇ) 10000 ಬಹುಮಾನ ಪಡೆದುಕೊಂಡವು. ಮೊದಲನೇ ವರ್ಷದ ರಾಜ್ಯ ಮಟ್ಟದ ಜೋಡಿ ಹಸುಗಳ ಮತ್ತು ಚಕ್ಕಡಿ ಓಟದ ಸ್ಪರ್ಧೆಯಲ್ಲಿ ರೇವಣಿ ಶಿವುಕರ ಕುಳ್ಳಿ ಪ್ರಥಮ ಬಹುಮಾನ ಗೆದ್ದು 35000 ನಗದು ಬಹುಮಾನ ಪಡೆದುಕೊಂಡಿತು. ಹಾಲು ಹಲ್ಲು ಮತ್ತು ಎರಡು ಹಲ್ಲು ಚಕ್ಕಡಿ ಸ್ಪರ್ಧೆಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಬರೋಬ್ಬರಿ 69 ಜೋಡಿಗಳು ಭಾಗವಹಿಸಿದ್ದವು. ಈ ಪೈಕಿ ರೇವಣಿ ಶಿವುಕರ ಕುಳ್ಳಿ(ಪ್ರ), ಭೋಟಾ ಜೀವ ಕಿಂಗ್ ಕುಳ್ಳ ದ್ವಿತಿಯ ಸ್ಥಾನದೊಂದಿಗೆ 25 ಸಾವಿರ ನಗದು ಬಹುಮಾನ ಗೆದ್ದಿತು. ಕ್ಯಾಪ್ಟನ್ ರಾಕಿ ರಾಣಿ ಜೇನು ತೃತೀಯ ಸ್ಥಾನ ಪಡೆದು 15000 ಪಡೆದುಕೊಂಡಿದೆ. ರಚ್ಚುಸಿರಿ ಕುಡ್ಲುಕುಪ್ಪೆ(ನಾಲ್ಕನೇ), ಜಾವ ಮುಬಾರಕ್, ಡಾನ್ ಕುಳ್ಳಿ ಡಾನ್ ಗಾಂಧಿ, ಡಾನ್ ಜಗ್ಗು ಮೈಸೂರು ಚಾಮುಂಡಿ, ಆಪಲ್ ರಾಣಾ ನಾಗಮಣಿ, ಮುರುಗ ಹೈ ಸ್ಪೀಡ್ ರಚ್ಚು ಕ್ರಮವಾಗಿ ಗೆದ್ದು ಬಹುಮಾನ ಪಡೆದುಕೊಂಡವು. ಗೆದ್ದ ರಾಸುಗಳ ತಂಡಕ್ಕೆ ಶಾಸಕ ಜಿ.ಡಿ.ಹರೀಶ್ ಗೌಡ ಬಹುಮಾನ ವಿತರಿಸಿ ಮಾತನಾಡಿದರು. ಹಂಚ್ಯಾ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಜಿ.ಟಿ.ಮಂಜು, ನೇಗಿಲಯೋಗಿ ರವಿಕುಮಾರ್, ಗ್ರಾಮದ ಮುಖಂಡರಾದ ತಮ್ಮೇಗೌಡ, ಬೋರೇಗೌಡ, ವೆಂಕಟೇಶ್, ಮಹದೇವು, ನಂದೀಶ್, ಶ್ರೀಧರ್ ಗೌಡ, ಚಂದ್ರು, ಮನು, ಹರ್ಷ ಉಪಸ್ಥಿತರಿದ್ದರು.

ಮೊದಲ ಪುಟದಿಂದ

## ಏಕರೂಪ ಕಾನೂನು ಅಗತ್ಯ

ಅರ್ಜಿದಾರರನ್ನು ಪ್ರಶ್ನಿಸಿತು. ವಿಚಾರಣೆಯ ಸಂದರ್ಭದಲ್ಲಿ, ಒಬ್ಬ ಪುರುಷನಿಗೆ ಒಬ್ಬ ಹೆಂಡತಿ ಎಂಬ ನಿಯಮವನ್ನು ಎಲ್ಲಾ ಸಮುದಾಯಗಳು ಏಕರೂಪವಾಗಿ ಅನುಸರಿಸುತ್ತಿಲ್ಲ ಎಂಬುದನ್ನು ನ್ಯಾಯಾಲಯ ಪರಿಗಣಿಸಿತು. ಆದರೆ ಎಲ್ಲಾ ದ್ವಿಪತ್ನಿ ವಿವಾಹಗಳನ್ನು ಅಸಾಂವಿಧಾನಿಕವೆಂದು ನ್ಯಾಯಾಲಯ ಘೋಷಿಸಬಹುದೇ? ಎಂಬುದು ಇದರ ಅರ್ಥ ಅಲ್ಲ. ಆದ್ದರಿಂದ ನಿರ್ದೇಶನ ತತ್ವಗಳನ್ನು ಜಾರಿಗೆ ತರಲು ನಾವು ಶಾಸಕಾಂಗಕ್ಕೆ ಅಧಿಕಾರವನ್ನು ನೀಡಬೇಕಾಗುತ್ತದೆ ಎಂದು ನ್ಯಾಯಮೂರ್ತಿ ಬಾಗ್ಚಿ ಹೇಳಿದರು. ಏಕರೂಪ ನಾಗರಿಕ ಸಂಹಿತೆ ಜಾರಿಗೆ ನ್ಯಾಯಾಲಯ ಈಗಾಗಲೇ ಶಾಸಕಾಂಗಕ್ಕೆ ಶಿಫಾರಸು ಮಾಡಿದೆ ಎಂದು ಹೇಳಿದರು. ಮುಸ್ಲಿಂ ಮಹಿಳೆಯರೇ ಸಲ್ಲಿಸಿರುವ ಅರ್ಜಿಯಲ್ಲಿ ನ್ಯಾಯಾಂಗ ಮಧ್ಯಪ್ರವೇಶ ಮಾಡುವುದು ಸೂಕ್ತ ಎಂದು ಪೀಠ ಹೇಳಿತು. ಇದಕ್ಕೆ ಉತ್ತರಿಸಿದ ಭೂಷಣ್, ಅರ್ಜಿದಾರರಲ್ಲಿ ಕೆಲವರು ಮುಸ್ಲಿಂ ಮಹಿಳೆಯರಿದ್ದಾರೆ ಎಂದರು. ವಾದ ಆಲಿಸಿದ ನ್ಯಾಯಾಲಯ, ಶರಿಯತ್ ಉತ್ತರಾಧಿಕಾರದ ನಿಬಂಧನೆಗಳನ್ನು ರದ್ದುಗೊಳಿಸಿದರೆ ಪರಿಹಾರಗಳೇನು ಎಂಬ ಸಲಹೆಗಳನ್ನು ಸೇರಿಸಲು ಅರ್ಜಿಯನ್ನು ತಿದ್ದುಪಡಿ ಮಾಡಲು ಸೂಚಿಸಿತು. ಭೂಷಣ್ ಅವರು ಅರ್ಜಿಯನ್ನು ತಿದ್ದುಪಡಿ ಮಾಡಲು ಒಪ್ಪಿದ ನಂತರ ಪೀಠವು ಮುಂದಿನ ವಿಚಾರಣೆ ಮುಂದೂಡಿತು.

## ಹಲ್ಲೆ, ಕೊಲೆ: ಬಾಲಕನ ಬಂಧನ

ನಡೆಸುತ್ತಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಪ್ರಾಥಮಿಕ ತನಿಖೆ ಪ್ರಕಾರ, ವಸತಿ ಗೃಹದಲ್ಲಿ ವಾರ್ಡನ್ ಮೇಲ್ವಿಚಾರಣೆಯಲ್ಲಿ ಒಟ್ಟು ಒಂಬತ್ತು ವಿದ್ಯಾರ್ಥಿಗಳಿದ್ದರು. ಊಟದ ನಂತರ ವಿದ್ಯಾರ್ಥಿಗಳು ಹಾಸ್ಟೆಲ್‌ನಲ್ಲಿ ನಿದ್ರಿಸುತ್ತಿದ್ದಾಗ ಆರೋಪಿ ಬಾಲಕ ತನ್ನ ಸಹಪಾಠಿಗಳ ಮೇಲೆ ಕಬ್ಬಿಣದ ರಾಡ್ ಮತ್ತು ಹರಿತವಾದ ವಸ್ತುವಿನಿಂದ ಹಲ್ಲೆ ನಡೆಸಿದ್ದಾನೆಂದು ತಿಳಿದುಬಂದಿದೆ. ದಾಳಿಯಿಂದ ಓರ್ವ ವಿದ್ಯಾರ್ಥಿ ಮೃತಪಟ್ಟಿದ್ದ. ಇನ್ನೂ ಏಳು ಮಂದಿ ಗಾಯಗೊಂಡಿದ್ದಾರೆ. ಸಣ್ಣ ವಿಚಾರಕ್ಕೆ ನಡೆದಿರುವ ಜಗಳದಿಂದ ಘಟನೆ ನಡೆದಿರಬಹುದು ಎಂದು ಶಂಕಿಸಲಾಗಿದೆ.

## ಕೇಂದ್ರ ಸಚಿವರಿಗೆ ಸಿಎಂ ಪತ್ರ

ಅವರು ಪತ್ರದಲ್ಲಿ ವಿವರಿಸಿದ್ದಾರೆ. ವಾಣಿಜ್ಯ ಬಳಕೆ ಸಿಲಿಂಡರ್ ಪೂರೈಕೆ ಶೀಘ್ರವಾಗಿ ಪುನರಾರಂಭಗೊಳ್ಳದಿದ್ದರೆ ಅನೇಕ ಹೋಟೆಲ್‌ಗಳು ತಮ್ಮ ಕಾರ್ಯಾಚರಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಬೇಕಾಗಬಹುದು ಎಂಬ ಆತಂಕವನ್ನೂ ವ್ಯಕ್ತಪಡಿಸಿವೆ. ಸಮಸ್ಯೆಯನ್ನು ಶೀಘ್ರ ಬಗೆಹರಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ.

## ಡಿಕೆಶಿಗೆ ಉಜ್ವಲ ಭವಿಷ್ಯ!

ನಾನು ಕೂಡಾ ಜೊತೆಯಿರುತ್ತೇನೆ ಎಂದು ಹೇಳಿರುವುದು ಅಚ್ಚರಿ ಮೂಡಿಸಿದೆ.

## ವಿಶ್ವಕಪ್ ಗೆದ್ದ ಭಾರತ ತಂಡಕ್ಕೆ ಬಿಸಿಸಿಐನಿಂದ 131 ಕೋಟಿ ರೂ.

ಸತತ 2ನೇ ಬಾರಿಗೆ ಐಸಿಸಿ ಪುರುಷರ ಟಿ20 ವಿಶ್ವಕಪ್ ಅನ್ನು ಉಳಿಸಿಕೊಂಡ ಮೊದಲ ತಂಡವಾಯಿತು. ಈ ಗೆಲುವಿನೊಂದಿಗೆ, ಭಾರತವು ಐಸಿಸಿ ಪುರುಷರ ಟಿ20 ವಿಶ್ವಕಪ್ ಅನ್ನು ಮೂರು ಬಾರಿ ಗೆದ್ದ ಮೊದಲ ತಂಡವಾಯಿತು ಎಂದು ಬಿಸಿಸಿಐ ಪ್ರಕಟಣೆ ತಿಳಿಸಿದೆ. ಈ ಐತಿಹಾಸಿಕ ಸಾಧನೆಗಾಗಿ ಮಂಡಳಿಯು ಆಟಗಾರರು, ಸಹಾಯಕ ಸಿಬ್ಬಂದಿ ಮತ್ತು ಆಯ್ಕೆದಾರರನ್ನು ಮತ್ತೊಮ್ಮೆ ಅಭಿನಂದಿಸುತ್ತದೆ. ಭವಿಷ್ಯದಲ್ಲಿ ಅವರಿಗೆ ಯಶಸ್ಸು ಮುಂದುವರಿಯಲಿ ಎಂದು ಹಾರೈಸುತ್ತಾರೆ ಎಂದು ತಿಳಿಸಿದೆ.

## ಪೈಲ್ಸ್, ಪಿಸ್ತುಲಾ, ನಿರ್ಲಕ್ಷ್ಯದಿಂದ ಕ್ಯಾನ್ಸರ್

ಮೈಸೂರು: ಪೈಲ್ಸ್, ಪಿಸ್ತುಲಾ, ಫಿಷರ್ ಈಚಿನ ದಿನಗಳಲ್ಲಿ ಬಹಳಷ್ಟು ಜನರಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿವೆ. ಈ ಸಮಸ್ಯೆ ಬಗ್ಗೆ ಇತರರ ಬಳಿ ಮಾತನಾಡಲು, ವೈದ್ಯರ ಸಲಹೆ ಪಡೆಯಲು ಸಂಕೋಚ ತೋರುವುದರ ಕಾರಣ ಅದು ಕ್ಯಾನ್ಸರ್ ರೂಪಕ್ಕೆ ತಿರುಗಬಹುದಾದ ಅಪಾಯವಿದೆ ಎಂದು ಹಿರಿಯ ತಜ್ಞ ವೈದ್ಯ ಡಾ.ಸಿ.ಎಂ. ಪರಮೇಶ್ವರ್ ಎಚ್ಚರಿಸಿದರು.



ನಗರದಲ್ಲಿ ಸುದ್ದಿಗಾರರೊಡನೆ ಮಾತ ನಾಡಿ, ಫಿಸ್ತುಲಾ ಸಾಮಾನ್ಯ ಕಾಯಿಲೆ ಎಂದು ಬಹಳಷ್ಟು ಜನರು ಭಾವಿಸಿ ನಿರ್ಲಕ್ಷಿಸುವುದು ಕ್ಯಾನ್ಸರ್‌ನಂತಹ ದೊಡ್ಡ ಸಮಸ್ಯೆಯೂ ಕಾರಣವಾಗಬಹುದಾಗಿದೆ. ಇನ್ನು ಜಾಗತೀಕರಣದ ನಂತರ ನಮ್ಮ ಊಟ, ತಿಂಡಿಯಲ್ಲಿ ಸಾಕಷ್ಟು ಬದಲಾವಣೆ ಆಗಿದೆ. ಕೆಲಸ ಮಾಡುವ ವಿಧಾ ನವೂ ಮಾರ್ಪಾಡಾಗಿದೆ. ಪಾಶ್ಚಾತ್ಯ ಆಹಾರ ಗಳಾದ ಫಿಜ್ಜಾ, ಬರ್ಗರ್, ಪಾಸ್ತಾ ಮೊದಲಾ ದವುಗಳ ಬಳಕೆ ಹೆಚ್ಚಾಗಿದೆ. ಐಟಿ, ಬಿಟಿಯಲ್ಲಿ ಕೆಲಸ ಮಾಡುವವರು ಕುಳಿತೇ ಹೆಚ್ಚು ಸಮಯ ಕಳೆಯಬೇಕಾಗುತ್ತಿದೆ. ಈ ರೀತಿಯ ಹಾಗೂ ಇನ್ನಿತರ ಕಾರಣಗಳಿಂದಾಗಿ ಪೈಲ್ಸ್, ಫಿಷರ್, ಪಿಸ್ತುಲಾಗಳಿಂದ ಬಳಲುವವರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದೆ. ಆದರೆ ಇವನ್ನು ನಿರ್ಲಕ್ಷಿಸದೇ ಸೂಕ್ತ ಸಮಯಕ್ಕೆ ಚಿಕಿತ್ಸೆ ಪಡೆಯದಿದ್ದಲ್ಲಿ ಅಪಾಯ ಕಟ್ಟಿಟ್ಟ ಬುತ್ತಿ ಎಂದು ಎಚ್ಚರಿಸಿದರು.

ಈ ರೀತಿಯ ಸಮಸ್ಯೆ ಎದುರಿಸುತ್ತಿರುವವರು ನುರಿತ ವೈದ್ಯರ ಸಲಹೆ ಪಡೆಯದೇ ನಕಲಿ ವೈದ್ಯರ ಬಳಿಗೆ ಹೋಗುವುದು ರೂಢಿಯಲ್ಲಿದೆ. ಇವರಿಂದಾಗಿ ಅನೇಕರು ವಾಸಿ ಮಾಡಿಕೊಳ್ಳಲಾಗದೇ ಇನ್ನಿತರ ಗಂಭೀರ ಸಮಸ್ಯೆ ಎದುರಿಸುವ ಸಾಧ್ಯತೆಗಳು ಸಹಾ ಹೆಚ್ಚಾಗಿವೆ. ಆದ್ದರಿಂದ ಸರ್ಕಾರ ನಕಲಿ ವೈದ್ಯರಿಗೆ ಕಡಿವಾಣ ಹಾಕಬೇಕು. ಜೊತೆಗೆ ಜನತೆ ಸಹಾ ಸಂಕೋಚ ಪಡದೇ ಸಕಾಲದಲ್ಲಿ ಚಿಕಿತ್ಸೆ ಪಡೆದು ಗುಣಮುಖರಾಗಬೇಕೆಂದು ಕಿವಿಮಾತು ಹೇಳಿದರು.

## ಡಿಕೆಶಿ ಹೆಸರಲ್ಲಿ ವಿಶೇಶ ಪೂಜೆ



ಮೈಸೂರು: ಉಪಮುಖ್ಯಮಂತ್ರಿ ಡಿಕೆ ಶಿವಕು ಮಾರ್ ಕೆಪಿಸಿಸಿ ಅಧ್ಯಕ್ಷರಾಗಿ ಯಶಸ್ವಿ 6 ವರ್ಷ ಪೂರೈಸಿದ ಹಿನ್ನಲೆಯಲ್ಲಿ ಅಗ್ರಹಾರದ 101 ಗಣಪತಿ ದೇವಸ್ಥಾನದಲ್ಲಿ ಡಿ.ಕೆ. ಶಿವಕುಮಾರ್ ಅಭಿಮಾನಿ ಬಳಗದವತಿಯಿಂದ ಡಿಕೆಶಿ ಹೆಸರಿನಲ್ಲಿ ವಿಶೇಷ ಪೂಜೆ ಸಲ್ಲಿಸಿ ನಂತರ ಈಡಿಗಾಯಿ ಹೊಡೆದು ಸಿಹಿ ಹಂಚಿ ಮುಂದಿನ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಎಂದು ಘೋಷಣೆ ಕೂಗಿ ಸಂಭ್ರಮಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕಾಂಗ್ರೆಸ್ ಮುಖಂಡ ಜಿ.ಶ್ರೀನಾಥ್ ಬಾಬು ನಮ್ಮ ನೆಚ್ಚಿನ ನಾಯಕರಾದ ಸಂಘಟನೆಯ ಚತುರರಾದ ಉಪಮುಖ್ಯಮಂತ್ರಿ ಡಿಕೆ ಶಿವಕು ಮಾರ್ ಪಕ್ಷದ ಸಂಘಟನೆ ಮತ್ತು ಪುನಶ್ವೇತನ, ಕೋವಿಡ್ 19 ಸಮಯದಲ್ಲಿ ಜನಸೇವೆ, ಮೇಕೆದಾಟು ಪಾದಯಾತ್ರೆ, ಒಗ್ಗಟ್ಟಿನ ಮಂತ್ರ, ಭಾರತ್ ಜೋಡೋ ಯಾತ್ರೆ, ವಿಧಾನಸಭೆ ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ವಿಜಯ, ಐದು ಗ್ಯಾರಂಟಿಗಳ ಜಾರಿ, 100 ಕಾಂಗ್ರೆಸ್ ಪಕ್ಷದ ಕಚೇರಿಗಳ ನಿರ್ಮಾಣ ಸೇರಿ ಅನೇಕ ಯಶಸ್ವಿ ಸಾಧನೆಗಳ ಸ್ಮರಿಸಿದರು.

ಮುಂದಿನ ದಿನಗಳಲ್ಲಿ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗುವ ವಿಶ್ವಾಸವಿದೆ ಎಂದು ಹೇಳಿದರು. ಕಾಂಗ್ರೆಸ್ ನಗರಾಧ್ಯಕ್ಷ ಆರ್. ಮೂರ್ತಿ, ಅಖಿಲ ಕರ್ನಾಟಕ ಡಿಕೆ ಶಿವಕುಮಾರ್ ಅಭಿಮಾನಿ ಸಂಘದ ನಗರ ಅಧ್ಯಕ್ಷ ಜಿ ರಾಘವೇಂದ್ರ,ನಗರ ಪಾಲಿಕೆ ಸದಸ್ಯ ಮಾಜಿ ರಾಜಶೇಖರ್ ಮೂರ್ತಿ, ಕೆಪಿಸಿಸಿ ಸದಸ್ಯರಾದ ನಜರ್ಬಾದ್ ನಟರಾಜ್, ಎಸ್. ಎನ್.ರಾಜೇಶ್, ಮಂಜೇಶ್, ಜಿ.ಕಿರಣ, ರಮೇಶ, ರಾಕೇಶ್, ಮುಶಿ, ಆರ್. ಯೋಗೇಶ್, ಶ್ರೀಧರ್, ಬೋಗಾದಿ ಚಂದ್ರು, ಮಹೇಶ್, ಲಕ್ಷ್ಮಣ, ರಂಜು, ವಿಜೇಂದ್ರ ಇತರರು ಹಾಜರಿದ್ದರು.

# ಸಾಮೂಹಿಕ ವಿವಾಹಕ್ಕೆ ಸಾಕ್ಷಿಯಾದ ಸೌಮ್ಯ ಅನಿಲ್


## ನಂಜನಗೂಡಿನ ನಾಯಕ ಸಂಘದಲ್ಲಿ ಸಾಮೂಹಿಕ ವಿವಾಹ

ಎಚ್.ಡಿ.ಕೋಟೆ: ಕ್ಷೇತ್ರದ ಶಾಸಕ ಅನಿಲ್ ಚಿಕ್ಕಮಾದು ಹಾಗೂ ಪತ್ನಿ ಸೌಮ್ಯ ಅನಿಲ್ ಚಿಕ್ಕಮಾದು ಸೋಮವಾರ ನಂಜನಗೂಡಿನ ನಾಯಕ ಸಂಘದಲ್ಲಿ ಸಾಮೂಹಿಕ ವಿವಾಹ ನೆರವೇರಿಸಿರುವುದು ಸಾರ್ವಜನಿಕರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.



ನಂಜನಗೂಡು ತಾಲೂಕಿನ ನಾಯಕ ಜನಾಂಗದ ನಾಲ್ಕು ಜೋಡಿಗಳ ವಿವಾಹಕ್ಕೆ ನೆರವಾಗಿದ್ದಾರೆ. ವಧುವಿಗೆ ರವಿಕೆ, ಸೀರೆ, ಕಾಲುಂಗುರ ಹಾಗೂ ತಾಳಿ, ವರನಿಗೆ ಧೋತಿ, ಶರ್ಟ್ ನೀಡುವುದರೊಂದಿಗೆ ಮದುವೆಗೆ ಆಗಮಿಸಿದ್ದವರಿಗೆ ತಿಂಡಿ, ಊಟ ಮತ್ತು ವಿವಾಹದ ಸಂಪೂರ್ಣ ವೆಚ್ಚವನ್ನು ಭರಿಸುವುದರೊಂದಿಗೆ ಕೊನೆಯವರೆಗೂ ಇದ್ದು ನೂತನ ವಧು–ವರರನ್ನು ಆಶೀರ್ವದಿಸಿದ್ದಾರೆ.

ಶಾಸಕ ಅನಿಲ್ ಚಿಕ್ಕಮಾದು ಪತ್ನಿ ಸೌಮ್ಯ ಅನಿಲ್ ಚಿಕ್ಕಮಾದು ಮಾತನಾಡಿ, ಆಡಂಬರದ ಮದುವೆಗಳಿಗಿಂತ ಆಚರಣೆಯ ಮದುವೆಯ ಪಾವಿತ್ರ್ಯತೆ ಮುಖ್ಯವಾದದ್ದು. ಸಾಮೂಹಿಕ ವಿವಾಹಗಳು ಕೇವಲ ಬಡವರಿಗಷ್ಟೇ ಅಲ್ಲ, ಸುಸ್ಥಿರ ಜೀವನ ಬಯಸುವ ಪ್ರತಿಯೊಬ್ಬರಿಗೂ ಉತ್ತಮ ಆಯ್ಕೆಯಾಗಿರುತ್ತದೆ. ಇಂದಿನ ದಿನಗಳಲ್ಲಿ ಮದುವೆ ಎನ್ನುವುದು ಅತ್ಯಂತ ದುಬಾರಿ ಆಚರಣೆಯಾಗಿ ಬದಲಾಗುತ್ತಿದೆ. ಈ ಹಿನ್ನೆಲೆಯಲ್ಲಿ, ಆರ್ಥಿಕ ಹೊರೆಯನ್ನು ಕಡಿಮೆ ಮಾಡಿ, ಸಾಮಾಜಿಕ ಕಳಕಳಿಯನ್ನು ಮೆರೆಯುವ ಸಾಮೂಹಿಕ ಸರಳ ವಿವಾಹಗಳು ಮಾದರಿಯಾಗುತ್ತಿವೆ. ಯುವ ಸಮೂಹ ಆಡಂಬರಕ್ಕೆ ಮಾರುಹೋಗದೆ ಸಾಂಪ್ರದಾಯಿಕ ಆಚರಣೆಗಳಿಗೆ ಮಹತ್ವ ನೀಡಬೇಕು ಎಂದು ತಿಳಿಸಿದರು.



ತಂದೆ, ತಾಯಿಗಳು ಜೀವನ ಪೂರ್ತಿ ದುಡಿದಿಟ್ಟ ಹಣವನ್ನು ಮಕ್ಕಳ ಅದ್ದೂರಿ ಮದುವೆಗಾಗಿ ವ್ಯಯಿಸುವ ಜೊತೆಗೆ ಸಾಲ ಮಾಡುತ್ತಾರೆ. ಈ ರೀತಿಯ ವ್ಯವಸ್ಥೆಯನ್ನು ತಪ್ಪಿಸಲು ತಮ್ಮ ಮಕ್ಕಳನ್ನು ಸಾಮೂಹಿಕ ವಿವಾಹದಲ್ಲಿ ಮದುವೆ ಮಾಡಿ, ಮದುವೆಯ ಖರ್ಚಿನ ಹಣವನ್ನು ನವ ಜೋಡಿಗಳ ಮುಂದಿನ ಜೀವನದ ಭದ್ರತೆಗೆ ಬಳಸಲು ಮುಂದಾಗಬೇಕು ಎಂದು ಸಲಹೆ ನೀಡಿದರು.



### ದಂಪತಿಗಳ ಕಾರ್ಯಕ್ಕೆ ಮೆಚ್ಚುಗೆ

**ನಂಜನಗೂಡಿನ ನಾಯಕ ಸಮುದಾಯ ಭವನದಲ್ಲಿ ನಾಲ್ಕು ಜೋಡಿಗಳಿಗೆ ಸಾಮೂಹಿಕ ವಿವಾಹ ಮಾಡಿಸಿದ ಸಂತೃಪ್ತಿ ಹೊಂದಿರುವ ಶಾಸಕ ಅನಿಲ್ ಚಿಕ್ಕಮಾದು ಮತ್ತು ಸೌಮ್ಯ ದಂಪತಿಗಳು ಇನ್ನೂ ಕೈಲಾದಷ್ಟು ಸಮಾಜ ಸೇವೆ ಮಾಡುವ ಇಂಗಿತ ವ್ಯಕ್ತಪಡಿಸಿದ್ದಾರೆ. ಮುಂದಿನ ದಿನಗಳಲ್ಲಿಯೂ ಕೈಲಾಗದವರಿಗೆ, ಅಸಕ್ತರಿಗೆ, ಅಂಗವಿಕಲರಿಗೆ ಸರ್ಕಾರದ ಸೌಲಭ್ಯಗಳನ್ನು ಒದಗಿಸುವುದು ಮಾತ್ರವಲ್ಲದೆ ವೈಯುಕ್ತಿಕವಾಗಿ ಸಹಾಯ ಮಾಡುವುದಾಗಿ ತಿಳಿಸಿದರು. ಸಾಮೂಹಿಕ ವಿವಾಹ ಮಾಡಿಸುವುದರೊಂದಿಗೆ ಸಮಾಜ ಸೇವೆ ಮೂಲಕ ಮತ್ತಷ್ಟು ಕಾರ್ಯಗಳನ್ನು ಮಾಡುವುದಾಗಿ ತಿಳಿಸಿದ ದಂಪತಿಗಳಿಗೆ ನೆರದಿದ್ದವರು ಧನ್ಯವಾದ ತಿಳಿಸುವುದರೊಂದಿಗೆ ಶುಭ ಕೋರಿದರು.**

ಮೊದಲ ಪುಟದಿಂದ

## ತಪಿತಸ್ಥರ ವಿರುದ್ಧ ಕಾನೂನು ಕ್ರಮ ಏಕಿಲ್ಲ

ಪಡೆಯುವ ಕೆಲಸ ಆಗಿದೆಯೇ ಹೊರತು ತಪ್ಪಿತಸ್ಥರಿಗೆ ಶಿಕ್ಷೆ ಆಗಿಲ್ಲ ಎಂದು ಕಿಡಿಕಾರಿದರು.

ಮುಡಾ ಹಗರಣ ಬೆಳಕಿಗೆ ಬರುತ್ತಿದ್ದಂತೆ 14 ನಿವೇಶನ ಹಿಂದಕ್ಕೆ ನೀಡಿ ಸಿಎಂ ಸಿದ್ದರಾಮಯ್ಯ ಏನೂ ನಡೆದೇ ಇಲ್ಲವೆಂಬಂತೆ ಸುಮ್ಮನಾದರು. ಅದೇ ಮಾದರಿಯಲ್ಲಿ ಈ ಮೂರು ಪ್ರಕರಣಗಳಲ್ಲಿ ತಪ್ಪಿತಸ್ಥರಿಗೆ ಶಿಕ್ಷೆ ಆಗಿಲ್ಲ. ಇದರಲ್ಲಿ ಅಧಿಕಾರಿಗಳ ಪಾತ್ರವೂ ಇದ್ದು ಉನ್ನತ ಮಟ್ಟದ ತನಿಖೆ ಆಗಬೇಕೆಂದು ಒತ್ತಾಯಿಸಿದರು.

ಕುರುಬಾರಹಳ್ಳಿ ಸರ್ವೇ ನಂ.4ರ ಸರ್ಕಾರಿ ಭೂಮಿ ಮಾರಾಟದ ಅಗ್ರಿಮೆಂಟ್ ನಲ್ಲಿ ಪ್ರಶಾಂತ್ ಉಚ್ಚಿಲ್ ಕುಟುಂಬದವರೆಲ್ಲಾ ಬಂದು ಸಹಿ ಮಾಡಿದ್ದಾರೆ. ಆದರೆ ಸೇಲ್ ಅಗ್ರಿಮೆಂಟ್ ತಡೆ ತರಬೇಕಾದರೆ ಒಬ್ಬರೇ ಬಂದಿದ್ದಾರೆ. ಅಲ್ಲದೆ ಈ ವೇಳೆ ಎಕರೆಗೆ 4 ಕೋಟಿ 75 ಲಕ್ಷ ಹಣವನ್ನು ಅನೇಕರಿಗೆ ಚೆಕ್ ಮೂಲಕ ನೀಡಲಾಗಿದೆ. ಮರಳಿ ಪಡೆಯುವಾಗ ಒಬ್ಬನೇ ವ್ಯಕ್ತಿ ಹಿಂದಿರುಗಿಸಿದ್ದಾರೆ. ಈ ವೇಳೆ ಆತನನ್ನು ಬಂಧಿಸುವ ಕೆಲಸ ಆಗಿಲ್ಲ. ಸದರಿ ಪ್ರಕರಣದಲ್ಲಿ ಸರ್ಕಾರಿ ಭೂಮಿ ಸೇಲ್ ಡೀಡ್ ಗೆ ಬರುವುದಿಲ್ಲ. ಅದು ಹೇಗೆ ಸೇಲ್ ಡೀಡ್ ನಲ್ಲಿ ತೋರಿಸಿತು. ಅಧಿಕಾರಿಗಳ ಶಾಮೀಲಿನಿಂದ ಇದೆಲ್ಲಾ ನಡೆದಿದೆ ಎಂಬ ಅನುಮಾನವಿದೆ. ಹೀಗಾಗಿ ಇದೆಲ್ಲದರ ಸಂಪೂರ್ಣ ತನಿಖೆ ಆಗಬೇಕಿದೆ. ಅಲ್ಲದೆ 900 ಕೋಟಿ ಮೌಲ್ಯದ ಕಬಳಿಕೆ ಯತ್ನ ನಡೆದಿರುವುದು ಸಾಬೀತಾಗಿದೆ. ಹೀಗಾಗಿ ಇದರ ವಿರುದ್ಧ ಹೋರಾಟ ನಿರಂತರವಾಗಿ ಮಾಡಲಾಗುವುದು ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ನಗರ ವಕ್ತಾರ ಮೋಹನ್, ಮಂಡಲ ಅಧ್ಯಕ್ಷ ಗೋಪಾಲ್ ರಾಜೇ ಅರಸ್, ಮಾಜಿ ಮಹಾಪೌರ ಶಿವಕುಮಾರ್, ನಗರ ಪ್ರಧಾನಕಾರ್ಯದರ್ಶಿ ಸೋಮಸುಂದರ್, ನಗರ ಉಪಾಧ್ಯಕ್ಷ ವಿಶ್ವೇಶ್ವರಯ್ಯ, ಮಾಧ್ಯಮ ನಗರ ಸಂಚಾಲಕ ಮಹೇಶ್ ರಾಜೇ ಅರಸ್, ಮಾಧ್ಯಮ ಸಹ ಸಂಚಾಲಕ ಬಿ.ಎಂ. ಸಂತೋಷ್ ಕುಮಾರ್, ಮುಖಂಡರಾದ ಬಿಲ್ಲಯ್ಯ, ನಗರ ಪ್ರಕೋಷ್ಟ ಸಂಯೋಜಕ ಗೋಕುಲ್ ಗೋವರ್ಧನ್, ಕೃಷ್ಣರಾಜ ಮಂಡಲ ಪ್ರಧಾನ ಕಾರ್ಯದರ್ಶಿ ಜೈ ಶಂಕರ್, ಜಯರಾಮ್ ಉಪಸ್ಥಿತರಿದ್ದರು.

## ದೇವೇಗೌಡರಿಂದಲೇ ಹಣಕಾಸು ಸಚಿವ ಸ್ಥಾನ ಸಿಕ್ಕಿದ್ದು:

ಅವರು, ತಾವು ಮೊದಲ ಬಾರಿಗೆ ಹಣಕಾಸು ಸಚಿವನಾದ ಸಂದರ್ಭವನ್ನು ವಿವರಿಸಿದರು. ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದರು. ಆರ್.ಎಲ್ ಜಾಲಪ್ಪ ಅವರ ಮೆಡಿಕಲ್ ಕಾಲೇಜು ಗೆಸ್ಟ್ ಹೌಸ್ ನಲ್ಲಿ ಮಂತ್ರಿಮಂಡಲ ಪ್ರಕ್ರಿಯೆ ನಡೆಯಿತು. ನಾನು, ಪಿ.ಜಿ.ಆರ್.ಸಿಂಧ್ಯಾ, ಆರ್.ಎಲ್ ಜಾಲಪ್ಪ, ದೇವೇಗೌಡರು ಮಂತ್ರಿಮಂಡಲ ರಚನೆ ಮಾಡಿದೆವು. ಆಗ ನಾನು ಕಂದಾಯ ಸಚಿವ ಸ್ಥಾನ ಕೇಳಿದೆ. ಆಗ ಜಾಲಪ್ಪನವರು ನನಗೇ ಕಂದಾಯ ಇಲಾಖೆ ಬೇಕು ಎಂದು ಕೇಳಿದರು.

ಆಗ ದೇವೇಗೌಡರು ಜಾಲಪ್ಪನವರಿಗೆ ರೆವೆನ್ಯೂ ಇಲಾಖೆ ಕೊಟ್ಟರು. ನನಗೆ ಯಾವುದು ಕೊಡುತ್ತೀರಿ ಎಂದು ಕೇಳಿದಾಗ ಫೈನಾನ್ಸ್ ತಗೋ ಎಂದರು. ನಾನು ಅರ್ಥಶಾಸ್ತ್ರ ಓದಿಲ್ಲ. ನನಗೆ ಆರ್ಥಿಕ ಜ್ಞಾನ ಹೆಚ್ಚು ಇಲ್ಲ. ಫೈನಾನ್ಸ್ ಬೇಡ ಎಂದೆ. ಆಗ ದೇವೇಗೌಡರು, ಇಲ್ಲ ನನಗೆ ನಂಬಿಕಸ್ಥ ಬೇಕು. ಅದಕ್ಕಾಗಿ ನನಗೇ ಹಣಕಾಸು ಇಲಾಖೆ ತಗೋಬೇಕು ಎಂದರು. ಆಗ ಅವರು ಬಲವಂತ ಮಾಡಿ ನನಗೆ ಹಣಕಾಸು ಇಲಾಖೆ ಕೊಟ್ಟರು ಎಂದು ಸಿದ್ದರಾಮಯ್ಯ ಸ್ಮರಿಸಿದರು. ಅಂದು ದೇವೇಗೌಡರಿಗೆ ದೂರದೃಷ್ಟಿ ಇತ್ತೇನೋ ಗೊತ್ತಿಲ್ಲ. ಅವರಿಂದಾಗಿ ಇವತ್ತು ನೀವು 17ನೇ ಬಜೆಟ್ ಮಂಡಿಸುವಂತಾಯಿತೇನೋ ಎಂದು ಅಶೋಕ್ ಹೇಳಿದರು. ದೇವೇಗೌಡರಿಂದಾಗಿಯೇ ಇಂದು ನಾನು ದಾಖಲೆ ಬಜೆಟ್ ಮಂಡಿಸುವಂತಾಯಿತು ಎಂದು ಸಿದ್ದರಾಮಯ್ಯನವರು ಕೂಡ ಅಶೋಕ್ ಮಾತನ್ನು ಒಪ್ಪಿಕೊಂಡರು.

## ಸಿ.ವಿ. ನಾಗರಾಜ್ ನಿಧನ

ಚಾಮರಾಜನಗರ, ನಗರದ ದೊಡ್ಡ ಅಂಗಡಿ ಬೀದಿ ನಿವಾಸಿ ಸಿ.ಎಸ್.ವಾಸುದೇವ ಶಾಸ್ತ್ರಿಗಳ ಮೊದಲನೇ ಪುತ್ರ ಸಿ.ವಿ. ನಾಗರಾಜ್ ( ವಾಸುಕಿ) (65) ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಸೋಮವಾರ ಹೃದಯಘಾತ ದಿಂದ ನಿಧನರಾದರು. ಮೃತರು ನಗರದ ಸರ್ಕಾರಿ ಜೆ.ಒ.ಸಿ ಕಾಲೇಜುನಲ್ಲಿ ಪ್ರಾಧ್ಯಾಪಕರಾಗಿ ಹಾಗೂ ಆರ್.ಟಿ.ಒ ಕಛೇರಿಯಲ್ಲಿ ಕೆಲಕಾಲ ಸೇವೆ ಸಲ್ಲಿಸಿದ್ದರು.




ಮೃತರಿಗೆ ಪತ್ನಿ ಹಾಗೂ ಓರ್ವ ಪುತ್ರಿ ಇದ್ದಾರೆ. ಸಿ.ವಿ ನಾಗರಾಜು ಹಾಗೂ ಕುಟುಂಬ ಕೆಲವು ವರ್ಷಗಳಿಂದ ಮೈಸೂರಿನಲ್ಲಿ ವಾಸವಾಗಿದ್ದರು. ಮೃತರ ಅಂತ್ಯ ಕ್ರಿಯೆಯು ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನ ಹರಿಶ್ಚಂದ್ರ ರುದ್ರಭೂಮಿಯಲ್ಲಿ ಬುಧವಾರ ಬೆಳಿಗ್ಗೆ 10 ಗಂಟೆಗೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಇದಕ್ಕೂ ಮೊದಲು ರಾಜರಾಜೇಶ್ವರಿ ನಗರದ ರಾಜರಾಜೇಶ್ವರ ದೇವಸ್ಥಾನದ ಹತ್ತಿರವಿರುವ ಸ್ವಗೃಹದಲ್ಲಿ 6 ರಿಂದ 9 ರವರೆಗೆ ಅಂತಿಮ ದರ್ಶನದ ವ್ಯವಸ್ಥೆ ಮಾಡಲಾಗಿದೆ.

## ಹುಲಿ ದಾಳಿಗೆ ಸಿಲುಕಿ ಹಸು ಬಲಿ

ಗುಂಡ್ಲುಪೇಟೆ: ಹುಲಿ ದಾಳಿಗೆ ಸಿಲುಕಿ ಹಸು ಬಲಿಯಾಗಿರುವ ಘಟನೆ ಪಡಗೂರು ಗ್ರಾಮದ ರೈತರ ಜಮೀನಿನಲ್ಲಿ ನಡೆದಿದೆ.

ಪಡಗೂರು ಗ್ರಾಮದ ರೈತ ಶಿವಕುಮಾರ್ ಎಂಬವರ ಜಮೀನಿನಲ್ಲಿ ಮೇಯಲು ಬಿಟ್ಟಿದ್ದ ಹಸುವಿನ ಮೇಲೆ ಹಠಾತ್ ದಾಳಿ ನಡೆಸಿ ಕೊಂದು ಹಾಕಿದೆ ಹುಲಿಯು ರೈತರ ನಿದೆಗೆಡಿಸಿದೆ. ಗುರುಸಿದ್ದಪ್ಪ ಎಂಬುವವರು ಬಾಳೆ ತೋಟದಲ್ಲಿ ಮೇಯಲು ಬಿಟ್ಟಿದ್ದ ವೇಳೆ ವ್ಯಾಘ್ರ ದಾಳಿಗೆ ಬಲಿಯಾಗಿದ್ದು ಸೂಕ್ತ ಪರಿಹಾರಕ್ಕಾಗಿ ಒತ್ತಾಯಿಸಿದ್ದಾರೆ.

**ಹುಲಿ ಸೆರೆಗೆ ಒತ್ತಾಯ :** ಕೆಲ ದಿನಗಳ ಕಾಲ ಬಿಡುವು ನೀಡಿದ್ದ ಕಾಡು ಪ್ರಾಣಿಗಳು ಪುನಃ ರೈತರ ನಿದ್ರೆಗೆ ತಣ್ಣೀರು ಎರಚಿವೆ, ಮೂರ್ನಾಲ್ಕು ದಿನಗಳ ಹಿಂದಷ್ಟೇ ಚಿರತೆ ಮರಿಗಳು ಸೆರೆಯಾಗಿದ್ದ ಸ್ಥಳದಲ್ಲೇ ಹಸು ಬಲಿಯಾಗಿರುವುದು ಆತಂಕ ತಂದೊಡ್ಡಿದ್ದು ಕೂಡಲೇ ಹುಲಿ ಸೆರೆಗೆ ಅರಣ್ಯ ಇಲಾಖೆ ಮುಂದಾಗಬೇಕು ಎಂದು ಒತ್ತಾಯಿಸಿದ್ದಾರೆ.



## ಟ್ರಂಪ್ ಬೊಂಬೆಯಂತೆ ಮೋದಿ ವರ್ತನೆ

ರಾಜಧಾನಿ ನವ ದೆಹಲಿ ಅಲ್ಲ, ವಾಷಿಂಗ್ಟನ್ ಡಿಸಿ ಆಗಿದೆ ಎಂಬ ಭಾವನೆ ಮೂಡುತ್ತಿದೆ ಎಂದು ಟೀಕಿಸಿದ್ದಾರೆ.

ಆಪರೇಶನ್ ಸಿಂಧೂರ್ ವಿಚಾರದಲ್ಲಿ ಟ್ರಂಪ್ ಕ್ರೆಡಿಟ್ ತೆಗೆದುಕೊಳ್ಳುತ್ತಿದ್ದಾರೆ. ಆದರೆ, ಈ ಬಗ್ಗೆ ಪ್ರಧಾನಿ ಮೋದಿ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಇದೇ ರೀತಿ ಅಮೆರಿಕ ಇರಾನ್‌ನಿಂದ ತೈಲ ಖರೀದಿಸಬಾರದು ಎಂದು ಹೇಳಿದಾಗ ಭಾರತ ಅದನ್ನು ಪಾಲಿಸಿದೆ. ಈಗ ರಷ್ಯಾ ತೈಲ ಖರೀದಿಯ ಮೇಲೂ ಒತ್ತಡ ತರಲಾಗುತ್ತಿದೆ. ಈ ಬೆಳವಣಿಗೆಗಳನ್ನು ಗಮನಿಸಿದರೆ ಭಾರತದ ಸ್ವಾಯತ್ತತೆ ಪ್ರಶ್ನಾರ್ಥಕವಾಗಿದೆ ಎಂದು ಆರೋಪಿಸಿದ್ದಾರೆ.

ಜಗತ್ತಿನಲ್ಲಿ ಯುದ್ಧ ಮತ್ತು ಅಶಾಂತಿ ಹೆಚ್ಚುತ್ತಿರುವ ಸಮಯದಲ್ಲಿ ಭಾರತ ಸ್ವತಂತ್ರ ಧ್ವನಿಯೊಂದಿಗೆ ಮಾತನಾಡಬೇಕು. ದೇಶದ ಗೌರವ ಮತ್ತು ಸಾರ್ವಭೌಮತ್ವವನ್ನು ಕಾಪಾಡುವಲ್ಲಿ ಪ್ರಧಾನಿ ಮೋದಿ ವಿಫಲರಾಗಿದ್ದಾರೆ. ದೇಶದ ಹಿತದೃಷ್ಟಿಯಿಂದ ಅವರು ಸ್ಥಾನ ತ್ಯಜಿಸಬೇಕು ಎಂದೂ ಆಗ್ರಹಿಸಿದ್ದಾರೆ.

ಅದಾನಿ ಗ್ರೂಪ್ ಸಂಬಂಧಿತ ತನಿಖೆಗಳು ಮತ್ತು ಎಪ್ಸ್ಟೀನ್ ಫೈಲ್ ಪ್ರಕರಣದ ದಾಖಲೆಗಳನ್ನು ರಾಜಕೀಯ ಒತ್ತಡದ ಸಾಧನವಾಗಿ ಬಳಸಲಾಗುತ್ತಿದೆ ಎಂಬ ಅನುಮಾನಗಳು ಕೂಡ ಮೂಡುತ್ತಿವೆ ಎಂದು

### ಕರ್ನಾಟಕ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ದಾಖಲೆ

# ಜಾಲಿವುಡ್ ಸ್ಟುಡಿಯೋಸ್: ಸ್ತ್ರೀಯರಿಂದಲೇ ನಿರ್ವಹಣೆ

ಬಿಡದಿ: ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಇಲ್ಲಿನ ಕೈಗಾರಿಕಾ ಪ್ರದೇಶದಲ್ಲಿರುವ ವೆಲ್ಸ್ ಜಾಲಿವುಡ್ ಸ್ಟುಡಿಯೋಸ್ ಅಂಡ್ ಅಡ್ವೆಂಚರ್ಸ್ ಸಂಸ್ಥೆಯನ್ನು ಸತತ ನಾಲ್ಕು ಗಂಟೆಗಳ ಕಾಲ ಮಹಿಳೆಯರೇ ಮುನ್ನಡೆಸುವ ಮೂಲಕ ಕರ್ನಾಟಕ ಬುಕ್ ಆಫ್ ರೆಕಾರ್ಡ್ಸ್ ದಾಖಲೆಯನ್ನು ಬರೆದಿದ್ದಾರೆ.

ತಾಲ್ಲೂಕಿನ ಬಿಡದಿಯ ವೆಲ್ಸ್ ಜಾಲಿವುಡ್ ಸ್ಟುಡಿಯೋಸ್ ಅಂಡ್ ಅಡ್ವೆಂಚರ್ಸ್ ಸಂಸ್ಥೆ ಮಹಿಳಾ ಸಬಲೀಕರಣವನ್ನು ಪ್ರತಿಬಿಂಬಿಸುವ ಮಹಿಳಾ ದಿನಾಚರಣೆ ಅಂಗವಾಗಿ ಮಹಿಳೆಯರ ವಿಶೇಷ ಪ್ರಯತ್ನದ ಭಾಗವಾಗಿ ಉದ್ಯಾನವನದ ಸಂಪೂರ್ಣ ಕಾರ್ಯಾಚರಣೆಗಳನ್ನು ನಾಲ್ಕು ಗಂಟೆಗಳ ಕಾಲ ಮಹಿಳಾ ಸಿಬ್ಬಂದಿಯೇ ನಿರ್ವಹಿಸಿದ್ದಾರೆ. ರೈಡ್ ಕಾರ್ಯಾಚರಣೆ, ಅತಿಥಿ ಸೇವೆ, ತಾಂತ್ರಿಕ ಸಹಾಯ, ಆಡಳಿತ ಮತ್ತು ಸುರಕ್ಷತಾ ವ್ಯವಸ್ಥೆ ಸೇರಿದಂತೆ ಎಲ್ಲಾ ವಿಭಾಗಗಳನ್ನು ಮಹಿಳೆಯರು ಯಶಸ್ವಿಯಾಗಿ ನಿರ್ವಹಿಸುವ ಮೂಲಕ ಹೊಸ ಮೈಲಿಗಲ್ಲು ನಿರ್ಮಿಸಿದ್ದಾರೆ.

ವೆಲ್ಸ್ ಜಾಲಿವುಡ್ ಸ್ಟುಡಿಯೋಸ್ ಅಂಡ್




ಅಡ್ವೆಂಚರ್ಸ್ ಸಂಸ್ಥೆಯ ಆವರಣದಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಬಿಡದಿ ಪುರಸಭೆ ಮುಖ್ಯಾಧಿಕಾರಿ ಎಂ.ಮೀನಾಕ್ಷಿರವರು ಮಾತನಾಡಿ, ವಿದ್ಯೆಗೆ ಸರಸ್ವತಿ, ಸಂಪತ್ತಿಗೆ ಲಕ್ಷ್ಮಿ, ಶಕ್ತಿಗೆ ಪಾರ್ವತಿ ಎಲ್ಲಕ್ಕೂ ಮಿಗಿಲಾಗಿ ಜನ್ಮಕೊಟ್ಟವಳು ಹೆಣ್ಣು, ಇಂತಹ ಸೃಷ್ಠಿಯ ಅದ್ಭುತಗಳೊಂದಿಗೆ ಕರ್ನಾಟಕ ಬುಕ್ ಆಫ್ ರೆಕಾರ್ಡ್ ದಾಖಲಿಸಿರುವ ಶ್ರಮಿಕ ಮಹಿಳಾ ಸಹೋದರಿಯರಿಗೆ ಕೃತಜ್ಞತೆ ಅರ್ಪಿಸುವುದಾಗಿ ತಿಳಿಸಿದರು.

**ಸ್ವಾವಲಂಬನೆಗೆ ಶುಭ ಹಾರೈಕೆ:**

ಪ್ರತಿ ಜೀವವೂ ಹೆಣ್ಣಿನಿಂದಲೇ ಹುಟ್ಟಿದ್ದು, ಸಮಾಜವನ್ನು ಪ್ರೀತಿಯಿಂದ ಮುನ್ನಡೆಸುವ ತಾಯಿ, ಸಹೋದರಿ, ಮಗಳು ಮತ್ತು ಪತ್ನಿಯಾಗಿ ಕುಟುಂಬಕ್ಕೆ ಮತ್ತು ಸಮಾಜಕ್ಕೆ ತ್ಯಾಗಮಯಿಯಾಗಿದ್ದಾಳೆ. ಸಮಾನತೆ, ಗೌರವ ಮತ್ತು ಅವಕಾಶಗಳು ಪ್ರತಿ ಮಹಿಳೆಯ ಹಕ್ಕುಗಳನ್ನು ಎತ್ತಿಹಿಡಿಯುವ ದಿನವಿದು. ನಿಮ್ಮ ಕನಸುಗಳನ್ನು ನನಸಾಗಿಸಿಕೊಳ್ಳುವ ಶಕ್ತಿ, ಆತ್ಮವಿಶ್ವಾಸ ಮತ್ತು ಧೈರ್ಯ ನಿರಂತರವಾಗಿರಲಿ. ನೀವು ಯಾವುದಕ್ಕೂ ಕಡಿಮೆ ಇಲ್ಲ, ನೀವೆಲ್ಲರೂ ಅದ್ಭುತ ಎಂದು ಮೀನಾಕ್ಷಿ ಮೆಚ್ಚುಗೆ ವ್ಯಕ್ತಪಡಿಸಿದರು.

ಕೆಪಿಸಿಸಿ ವಕ್ತಾರಾದ ಕುಸುಮಾ ಹನುಮಂತರಾಯಪ್ಪ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಮನೆಯಲ್ಲೂ, ಹೊರಗೂ ದುಡಿಯುವ ನಿಮ್ಮ ಅಸಾಧಾರಣ ಶಕ್ತಿ ಮತ್ತು ತಾಳ್ಮೆ ನಮಗೆಲ್ಲರಿಗೂ ಸ್ಫೂರ್ತಿ. ಹೆಣ್ಣು ಕುಟುಂಬದ ಕಣ್ಣು, ಬದುಕಿನ ಆಧಾರ ಸ್ತಂಭವಾಗಿರುವ ಎಲ್ಲಾ ಮಹಿಳೆಯರು ಸ್ಫೂರ್ತಿಯ ಧಾರೆಯಾಗಿದ್ದೀರಿ ಎಂದರು. ಈ ವೇಳೆ ಕರ್ನಾಟಕ ಬುಕ್ ಆಫ್ ರೆಕಾರ್ಡ್ಸ್ ಅಧ್ಯಕ್ಷರಾದ ಮೀರ್ ಸಮೀಮ್ ರಾಝಾ ಅವರು ಸಾಧನೆಯನ್ನು ಅಧಿಕೃತವಾಗಿ ಘೋಷಿಸಿ ನಿರ್ವಹಣಾ ತಂಡ ಹಾಗೂ ಮಹಿಳಾ ಸಿಬ್ಬಂದಿಯನ್ನು ಅಭಿನಂದಿಸಿದರು. ಚಿತ್ರನಟಿ ದಿಯಾ ಪಾಲಕ್ಕಲ್ ಮಾತನಾಡಿದರು. ವೆಲ್ಸ್ ಜಾಲಿವುಡ್ ನಿರ್ದೇಶಕಿ ಕುಶ್ಮಿತಾ ಗಣೇಶ್ ಅವರ ನೇತೃತ್ವದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

# ಅಭಿವೃದ್ಧಿ ನಿಗಮ ಸ್ಥಾಪನೆಗೆ ಸ್ವಾಗತ




ಮೈಸೂರು: ರಾಜ್ಯದ ಕ್ರೈಸ್ತ ಸಮುದಾಯದ ಕಲ್ಯಾಣ ಮತ್ತು ಅಭಿವೃದ್ಧಿ ಉದ್ದೇಶದಿಂದ ರಾಜ್ಯ ಸರ್ಕಾರ ಈ ಬಾರಿಯ ಬಜೆಟ್‌ನಲ್ಲಿ ಕರ್ನಾಟಕ ಕ್ರೈಸ್ತ ಸಮುದಾಯ ಅಭಿವೃದ್ಧಿ ನಿಗಮ ಸ್ಥಾಪಿಸಿರುವುದಕ್ಕಾಗಿ ಸಮುದಾಯ ಕೃತಜ್ಞತೆ ಸಲ್ಲಿಸುತ್ತದೆ ಎಂದು ಪ್ರೊಟೆಸ್ಟೆಂಟ್ ಕ್ರೈಸ್ತ ಮಹಾಸಭಾ ಪರವಾಗಿ ಸಹಾಯ ಆರ್ಚ್ ಬಿಷಪ್ ರೆ.ಸುನಿಲ್ ವಿ.ಜೇಕಬ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಆದರೂ ಹಿಂದಿನ ವರ್ಷ ನೀಡಲಾದ 85 ಕೋಟಿ ಅನುದಾನದಲ್ಲಿ ಕೇವಲ ಶೇ. 10 ರಷ್ಟು ಹೆಚ್ಚಳ ಮಾಡಿ ಅದನ್ನು 93.50 ಕೋಟಿಗೆ ಹೆಚ್ಚಿಸಲಾಗಿದೆ. ಕ್ರೈಸ್ತ ಸಮುದಾಯದ ಅಗತ್ಯ ಗಮನಿಸಿದರೆ ಈ ಮೊತ್ತ ಸಾಲುವುದಿಲ್ಲ. ಆದ್ದರಿಂದ ಇದುವರೆಗೆ ಉಳಿಕೆ ಆಗಿರುವ 165 ಕೋಟಿ ರೂ.,ಗಳನ್ನು ಇದಕ್ಕಾಗಿ ಬಿಡುಗಡೆ ಮಾಡಿ ಎಸ್‌ಸಿಎಸ್‌ಪಿ, ಟಿಎಸ್‌ಪಿ ಮಾದರಿ ಕಾಯ್ದೆ ಇದಕ್ಕಾಗಿ ಅನುಷ್ಠಾನಗೊಳಿಸಬೇಕು. ಸಮಾಧಿ ಸ್ಥಳಗಳ ಸಮಸ್ಯೆ ಬಗೆಹರಿಸಬೇಕು, ನಿಗಮದಲ್ಲಿ ಪ್ರೊಟೆಸ್ಟೆಂಟ್ ಕ್ರೈಸ್ತರಿಗೂ ಪ್ರಾತಿನಿಧ್ಯ ನೀಡಬೇಕು, ಎಲ್ಲೆಡೆ ಕ್ರೈಸ್ತ ಸಮುದಾಯ ಭವನ ನಿರ್ಮಿಸಬೇಕು ಎಂದು ಒತ್ತಾಯಿಸಿದರು.

ಪಾಸ್ಟರ್‌ಗಳಿಗೂ ಮಾಸಿಕ ಗೌರವಧನ ನೀಡಬೇಕು, ಅವರಿಗೆ ಗುರುತಿನ ಚೀಟಿ ನೀಡಬೇಕು, ಕ್ರೈಸ್ತ ಸಮುದಾಯದ ವಿದ್ಯಾರ್ಥಿಗಳು ಹಾಗೂ ಉದ್ಯೋಗಿಗಳಿಗೆ ವಸತಿ ನಿಲಯ ತೆರೆಯಬೇಕು, ಕ್ರೈಸ್ತ ಪರಂಪರೆ ಸಂಗ್ರಹಾಲಯ ಆರಂಭಿಸಬೇಕು ಎಂಬಿವೇ ಮೊದಲಾದ ಬೇಡಿಕೆ ಈಡೇರಿಸುವಂತೆ ಸರ್ಕಾರಕ್ಕೆ ಮನವಿ ಮಾಡಿದರು. ಡಾ. ವಿನೋದ್ ಎಂ. ಚಾಕೋ, ವೆನಿಯಲ್ ಮೋಸೆಸ್ ಹಾಗೂ ಇನ್ನಿತರರು ಇದ್ದರು.

# ಮುದುಕು ಮಾರಮ್ಮ ಹಬ್ಬದ ಸಂಭ್ರಮ

ಚಾಮರಾಜನಗರ, ನಗರದಲ್ಲಿ ಮುದುಕು ಮಾರಮ್ಮ ಗ್ರಾಮದೇವತೆ ಹಬ್ಬ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ನಗರದ ಹಳೆ ಖಾಸಗಿ ಬಸ್ ನಿಲ್ದಾಣದಲ್ಲಿರುವ ಗ್ರಾಮ ದೇವತೆ ಮುದುಕು ಮಾರಮ್ಮ ದೇವಿಗೆ ತಂಬಿಟ್ಟು ಆರತಿ ಬೆಳಗಿ ಪೂಜೆ ಸಲ್ಲಿಸಿ ದೇವರಕೃಪೆಗೆ ಭಕ್ತರು ಪಾತ್ರರಾದರು.



ಸೋಮವಾರ ಸಂಜೆ ಮಾರಮ್ಮನಿಗೆ ವಿಶೇಷ ಪೂಜೆ ಸಲ್ಲಿಸುವ ಮೂಲಕ ಹಬ್ಬಕ್ಕೆ ಚಾಲನೆ ದೊರೆಯಿತು. ದೇವಿಗೆ ವಿವಿಧ ಪೂಜಾ ಕೈಂಕರ್ಯಗಳು ನೆರವೇರಿತು. ರಾತ್ರಿ ನಗರ ವ್ಯಾಪ್ತಿಯ ಸಹಸ್ರಾರು ಭಕ್ತರು ತಂಬಿಟ್ಟಿನ ಆರತಿ ಮತ್ತು ಎಳನೀರು ಸೇವೆಯನ್ನು ದೇವಿಗೆ ಸಲ್ಲಿಸಿದರು.

ಸಂಜೆಯಿಂದಲ್ಲೇ ಭಾರಿ ಸಂಖ್ಯೆಯಲ್ಲಿ ಸೇರಿದ್ದ ಭಕ್ತರು ಸರತಿ ಸಾಲಿನಲ್ಲಿ ನಿಂತು ಮಾರಮ್ಮ ದೇವಿಯ ದರ್ಶನ ಪಡೆದ ಪುನೀತರಾದರು..

### ವಿಶೇಷ ಅಲಂಕಾರ

ಹಬ್ಬದ ಅಂಗವಾಗಿ ದೇವಾಲಯ ಹಾಗೂ ಹಳೆ ಬಸ್ ನಿಲ್ದಾಣದ ಆವರಣದಲ್ಲಿ ವಿಶೇಷವಾಗಿ ವಿದ್ಯುತ್ ದೀಪಗಳ ಅಲಂಕಾರ ಮಾಡಲಾಗಿತ್ತು.ಮಾರಮ್ಮ ದೇವಿಗೂ ಆಭರಣ, ಹೂವಿನ ಅಲಂಕಾರದಿಂದ ಕಂಗೊಳಿಸಿತು.

ಯುವ ಮುಖಂಡ ವಿರಾಟ್ ಶಿವು ಮಾತನಾಡಿ, ಪ್ರತಿವರ್ಷದಂತೆ ಈ ಬಾರಿಯೂ ಮುದುಕು ಮಾರಮ್ಮ ಗ್ರಾಮದೇವತೆ ಹಬ್ಬ ಅದ್ದೂರಿಯಾಗಿ ನಡೆಯುತ್ತಿದ್ದು, ಮಾರಮ್ಮದೇವಿ ಚಾಮರಾಜನಗರ ಪ್ರಮುಖ ದೇವರಾಗಿದೆ. ಶಕ್ತಿಯುತ ದೇವರಾಗಿದ್ದು, ಭಕ್ತರ ಇಷ್ಟಾರ್ಥಗಳನ್ನು ಈಡೇರಿಸುವ ಮೂಲಕ ಭಕ್ತರ ಶಕ್ತಿಯುತ ದೇವತೆಯಾಗಿದ್ದಾಳೆ. ಮುದುಕುಮಾರಮ್ಮ ಸರ್ವರಿಗೂ ಒಳಿತು ಮಾಡಲಿ ಎಂದು ಆಶಿಸಿದರು.

# ನಾಳೆಯಿಂದ ರಾಷ್ಟ್ರೀಯ ಏಕೀಕರಣ ಶಿಬಿರ



ಮೈಸೂರು: ರಾಜ್ಯ ಯುವ ಸಬಲೀಕರಣ ಇಲಾಖೆ, ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಸಂಯುಕ್ತಾಶ್ರಯದಲ್ಲಿ ನಗರದಲ್ಲಿ ಮಾ. 12 ರಿಂದ 18 ರವರೆಗೆ ರಾಷ್ಟ್ರೀಯ ಏಕೀಕರಣ ಶಿಬಿರ ಆಯೋಜಿಸಲಾಗಿದೆ ಎಂದು ಕುಲಸಚಿವ ಡಾ.ಬಿ. ಮಂಜುನಾಥ್ ಮಾಹಿತಿ ನೀಡಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಮಾ. 12 ರಂದು ಬೆಳಿಗ್ಗೆ 10ಕ್ಕೆ ಪದ್ಮ ಪ್ರಶಸ್ತಿ ಪುರಸ್ಕೃತ ಅಂಕೇಗೌಡ ಉದ್ಘಾಟಿಸುವರು. ಕುಲಪತಿ ಡಾ.ಎಚ್. ಬಸವನಗೌಡಪ್ಪ ಅಧ್ಯಕ್ಷತೆ ವಹಿಸುವರು, ತಾವು, ಡಾ ಪ್ರತಾಪ್ ಲಿಂಗಯ್ಯ, ಡಾ.ಟಿ.ಎಂ. ಪ್ರಮೋದ್‌ಕುಮಾರ್, ಡಾ.ಕೆ. ಎಲ್. ಕೃಷ್ಣ ಉಪಸ್ಥಿತರಿರುವರು. ಈ ಶಿಬಿರದಲ್ಲಿ ದೆಹಲಿ, ರಾಜಸ್ತಾನ, ತಮಿಳುನಾಡು, ಗೋವಾ, ಮಹಾರಾಷ್ಟ್ರ ಹಾಗೂ ಕರ್ನಾಟಕ ಸೇರಿ ವಿವಿಧ ರಾಜ್ಯಗಳಿಂದ 25ಕ್ಕೂ ಹೆಚ್ಚು ವಿವಿಗಳ 150ಕ್ಕೂ ಹೆಚ್ಚು ಸ್ವಯಂ ಸೇವಕರು, ಎನ್‌ಎಸ್‌ಎಸ್ ಕಾರ್ಯಕ್ರಮ ಅಧಿಕಾರಿಗಳು ಪಾಲ್ಗೊಳ್ಳುತ್ತಿದ್ದಾರೆ. ಇವರು ತಮ್ಮ ತಮ್ಮ ರಾಜ್ಯಗಳ ಸಾಂಸ್ಕೃತಿಕ ಸೊಗಡನ್ನು ಪರಿಚಯಿಸಲಿದ್ದಾರೆ. ಇವರಿಗೆ ಕ್ಯಾನ್ಸರ್ ಜಾಗೃತಿ, ಕಾನೂನು ಅರಿವು, ಸಿರಧಾನ್ಯ ಬಳಕೆ ಮಹತ್ವ ವಿವರಿಸುವಂತಹ ಅನೇಕ ಕಾರ್ಯಕ್ರಮಗಳು ಜರುಗಲಿವೆ ಎಂದರು. ಮಾ. 18 ರ ಬೆಳಗ್ಗೆ 10.30ಕ್ಕೆ ಸಮಾರೋಪ ಸಮಾರಂಭ ಜರುಗಲಿದೆ. ಈ ಎಲ್ಲ ಕಾರ್ಯಕ್ರಮ ಜೆಎಸ್‌ಎಸ್ ಎಎಚ್‌ಇಆರ್‌ನ ಜೆಎಸ್‌ಎಸ್ ಫಾರ್ಮಸಿ ಕಾಲೇಜು ರಾಜೇಂದ್ರ ಸಭಾಂಗಣದಲ್ಲಿ ನಡೆಯಲಿವೆ ಎಂದರು. ಪ್ರಾಚಾರ್ಯ ಡಾ.ಟಿ.ಎಂ. ಪ್ರಮೋದ್‌ಕುಮಾರ್, ಡಾ.ಕೆ.ಎಲ್. ಕೃಷ್ಣ ಇದ್ದರು.

# ವಿಜಯಮ್ಮ ನಿಧನ

ರಾಮನಗರ: ತಾಲ್ಲೂಕಿನ ಬೆಜ್ಜರಹಳ್ಳಿ ಕಟ್ಟೆ ಗ್ರಾಮದ ಕೃಷ್ಣಪ್ಪ ಅವರ ಧರ್ಮಪತ್ನಿ, ಪತ್ರಕರ್ತ ಅರುಣ್ ಅವರ ತಾಯಿ ವಿಜಯಮ್ಮ (65) ಅವರು ಮಂಗಳವಾರ ಮುಂಜಾನೆ ವಿಧಿವಶರಾದರು.



ಮೃತ ವಿಜಯಮ್ಮ ಅವರು ಪತಿ ಕೃಷ್ಣಪ್ಪ, ಮಕ್ಕಳಾದ ಕಿರಣ್ ಮತ್ತು ಪತ್ರಕರ್ತ ಕೆ. ಅರುಣ್ ಸೇರಿದಂತೆ ತುಂಬು ಕುಟುಂಬವನ್ನು ಅಗಲಿದ್ದಾರೆ. ಮಾಜಿ ಶಾಸಕ ಎ.ಮಂಜುನಾಥ್, ಕೆಎಂಎಫ್ ಮಾಜಿ ಅಧ್ಯಕ್ಷ ಪಿ.ನಾಗರಾಜು, ನಗರಸಭೆ ಅಧ್ಯಕ್ಷರಾದ ಕೆ.ಶೇಷಾದ್ರಿ (ಶಶಿ), ಮಾಜಿ ಉಪಾಧ್ಯಕ್ಷೆ ಆಯಿಷಾಭಾನು, ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಗಾಣಕಲ್ ನಟರಾಜು, ನಗರಾಭಿವೃದ್ಧಿ ಪ್ರಾಧಿಕಾರದ ಅದ್ಯಕ್ಷ ಎ.ಬಿ.ಚೇ ತನ್ ಕುಮಾರ್, ಮಾಜಿ ಅಧ್ಯಕ್ಷ ರಾಜಶೇಖರ್, ಜೆಡಿಎಸ್ ತಾಲೂಕು ಅಧ್ಯಕ್ಷ ಸಬ್ಬಕೆರೆ ಶಿವಲಿಂಗಯ್ಯ ಸೇರಿದಂತೆ ನಗರಸಭಾ ಸದಸ್ಯರು, ಜಿಲ್ಲೆಯ ಪತ್ರಕರ್ತರು, ಸಂಘ ಸಂಸ್ಥೆಗಳ ಮುಖ್ಯಸ್ಥರು, ಸ್ನೇಹಿತರು, ಬಂಧು ಬಳಗದವರು ಮೃತರ ಅಂತಿಮ ದರ್ಶನ ಪಡೆದರು. ಹಿಂದೂ ಸಂಪ್ರದಾಯದಂತೆ ವಿಜಯಮ್ಮ ಅಂತ್ಯಕ್ರಿಯೆ ಮಧ್ಯಾಹ್ನ ನೆರವೇರಿತು.

# 1 ಲೀಟರ್ ತೈಲವೂ ಸಿಗಲ್ಲ

ಮೊದಲ ಪುಟದಿಂದ

ಎಂಬ ಟ್ರಂಪ್ ಹೇಳಿಕೆಗೆ ಐಆರ್‌ಜಿಸಿ ಪಡೆ ಪ್ರತಿಕ್ರಿಯೆ ನೀಡಿದೆ. ಅಮೆರಿಕ ಮತ್ತು ಇಸ್ರೇಲ್ ದಾಳಿಗಳು ಮುಂದುವರಿದರೆ, ಈ ಪ್ರದೇಶದಿಂದ ಒಂದು ಲೀಟರ್ ತೈಲವನ್ನೂ ರಫ್ತು ಮಾಡಲು ಇರಾನ್ ಅನುಮತಿಸುವುದಿಲ್ಲ ಎಂದು ಎಚ್ಚರಿಕೆ ನೀಡಿದೆ. ಇದು ಜಾಗತಿಕ ಇಂಧನ ಮಾರುಕಟ್ಟೆಗಳಿಗೆ ಭಾರೀ ಹೊಡೆತಕೊಡಲಿದೆ. ಅಮೇರಿಕನ್ ಮಾಧ್ಯಮಗಳೊಂದಿಗೆ ಮಾತನಾಡಿದ್ದ ಟ್ರಂಪ್, ಇರಾನ್ ಯುದ್ಧ ಸಾಕಷ್ಟು ಪೂರ್ಣ ಗೊಂಡಿದೆ ಎಂದಿದ್ದರು. ಕೆಲ ಸಮಯದ ನಂತರ ನಾವು ಸಂಪೂರ್ಣ ಗೆದ್ದಿಲ್ಲ. ಇರಾನ್ ಸಂಪೂರ್ಣವಾಗಿ ಮತ್ತು ನಿರ್ಣಾಯಕವಾಗಿ ಸೋಲುವವರೆಗೂ ಯುದ್ಧ ಮುಂದುವರಿಯುತ್ತದೆ ಎಂದಿದ್ದರು. ಟ್ರಂಪ್ ಹೇಳಿಕೆಗಳಿಗೆ ನೇರ ಪ್ರತಿಕ್ರಿಯೆ ಇರಾನ್ ನೀಡಿದೆ. ಸಂಘರ್ಷ ಹೇಗೆ ಮತ್ತು ಯಾವಾಗ ಕೊನೆಗೊಳ್ಳುತ್ತದೆ ಎಂಬುದನ್ನು ವಾಷಿಂಗ್ಟನ್ ಅಲ್ಲ, ಟೆಹ್ರಾನ್ ನಿರ್ಧರಿಸುತ್ತದೆ ಎಂದು ತಿಳಿಸಿದೆ.

# ಸ್ತ್ರೀಯರಿಗೆ ಒಂದಿಲ್ಲೊಂದು ಸವಾಲು

## ಕೆ.ಶೇಷಾದ್ರಿ ಅಭಿಮತ । ರಾಮನಗರ ನಗರಸಭೆಯಲ್ಲಿ ಮಹಿಳಾ ದಿನ ಆಚರಣೆ

ರಾಮನಗರ: ಪ್ರಾಪ್ತ ವಯಸ್ಸಿನಿಂದ ವೃದ್ದಾಪ್ಯದವರೆಗೆ ಮಹಿಳೆಯರು ಒಂದಿಲ್ಲೊಂದು ಸವಾಲನ್ನು ಎದುರಿಸುತ್ತಲೇ ಇರುತ್ತಾರೆ. ಇಂದಿಗೂ ಮಹಿಳೆಯರ ವಿರುದ್ದ ಶೋಷಣೆ ನಿಂತಿಲ್ಲ ಎಂದು ನಗರಸಭಾಧ್ಯಕ್ಷ ಕೆ.ಶೇಷಾದ್ರಿ ಹೇಳಿದರು.

ನಗರಸಭೆಯ ಸಭಾಂಗಣದಲ್ಲಿ ಪೌರ ನೌಕರರ ಸಂಘ ಹಮ್ಮಿಕೊಂಡಿದ್ದ ಮಹಿಳಾ ದಿನಾಚರಣೆಯಲ್ಲಿ ಅವರು ಮಾತನಾಡಿದರು. ಜೀವನದ ಅಡೆತಡೆಗಳನ್ನು ಮೀರಿದರೆ ಸಂಘರ್ಷವನ್ನು ಎದುರಿಸಬೇಕು ಎಂಬ ಎಚ್ಚರಿಕೆಯೂ ಮಹಿಳೆಯರಲ್ಲಿದೆ. ಆದರೆ ಸ್ವಾವಲಂಭಿಗಳಾಗಲು ಕುಟುಂಬದಲ್ಲಿ ಮತ್ತು ಸಮಾಜದಲ್ಲಿ ಬೆಂಬಲ ಸಿಗುತ್ತದೆ ಎಂಬ ಸಮಾಧಾನಕರ ಅಂಶಗಳಿವೆ ಎಂದು ಅವರು ಅಭಿಪ್ರಾಯಪಟ್ಟರು.

ಪುರಾಣ, ಇತಿಹಾಸಗಳಲ್ಲಿ ಮಹಿಳೆಯರಿಗೆ ಅಗ್ರಸ್ಥಾನ, ಶ್ರೇಷ್ಠ ಗೌರವ ಇರುವುದು ಕಾಣ ಬಹುದು. ಆದರೆ ಪರಾಪರಂಗತವಾಗಿ ಪುರುಷ ಪ್ರಧಾನ ಸಮಾಜ ಮಹಿಳೆಯರಿಗೆ ಸಮಾಜ ಅನೇಕ ಕಟ್ಟಳೆಗಳನ್ನು ಹೇರಿದೆ. ಹೆಣ್ಣು ಶ್ರೇಷ್ಠ ಎಂದು ಹೇಳುತ್ತಲೇ ಅವರಿಗೆ ಇರುವ ಹಕ್ಕುಗಳನ್ನು ಕಸಿಯುವ ಕೆಲಸವಾಗುತ್ತಿದೆ. ಮಹಿಳೆಯರ ವಿರುದ್ದ ದೌರ್ಜನ್ಯ, ಶೋಷಣೆ ಮಾಡಿಕೊಂಡೇ ಬರಲಾಗುತ್ತಿದೆ ಎಂದರು.

ಸಾವಿತ್ರಿ ಬಾಫುಲೆ ಅವರನ್ನು ಸ್ಮರಿಸಿದ ಕೆ.ಶೇಷಾದ್ರಿ, ಮಹಿಳೆಯರಿಗೆ ಶಿಕ್ಷಣ ದೊರಕುತ್ತಿದೆ. ಹೀಗಾಗಿ ಮಹಿಳೆಯರು ಸ್ವಾವಲಂಭಿಗಳಾಗಲು ಸಹಾಯವಾಗುತ್ತಿದೆ ಎಂದರು. ಸರ್ಕಾರಗಳು ಮಹಿಳೆಯರ ರಕ್ಷಣೆಗೆ ಅನೇಕ ಕಾನೂನುಗಳನ್ನು ರೂಪಿಸಿವೆ. ಈ ಕಾನೂನುಗಳ ಬಗ್ಗೆ ಮಹಿಳೆಯರು ಅರಿಯಬೇಕು. ಆದರೆ ದುರುಪಯೋಗ ಪಡಿಸಿಕೊಳ್ಳಬಾರದು ಎಂದು ಕಿವಿ ಮಾತು ಹೇಳಿದರು.

### ಸತತ ಪ್ರಯತ್ನಗಳಿಂದ ಸಾಧನೆ – ಡಾ.ಜಯಣ್ಣ

ಪೌರಾಯುಕ್ತ ಡಾ.ಜಯಣ್ಣ ಮಾತನಾಡಿ ಸತತ ಪ್ರಯತ್ನದಿಂದ ಸಾಧನೆ ಪ್ರಾಪ್ತವಾಗುತ್ತದೆ. ನಮ್ಮ ನಡುವಿನ ಸಾಧಕರಿದ್ದಾರೆ. ಅವರಿಂದ ಮಹಿಳೆಯರು ಸೇರಿದಂತೆ ಎಲ್ಲರು ಪ್ರೇರಿತರಾಗಿ ಸಾಧನೆಯ ಕಡೆ ಸಾಗಬಹುದು. ಸಾಧನೆಗೆ ಇಂದು ಅನೇಕ ಅವಕಾಶಗಳಿವೆ. ಅವುಗಳನ್ನು ಸಮರ್ಥವಾಗಿ ಬಳಸಿಕೊಳ್ಳಬೇಕು ಎಂದರು. ಮಹಿಳೆಯರು ಇಂದು ಅನೇಕ ವೃತ್ತಿಗಳಲ್ಲಿ ತೊಡಗಿಸಿಕೊಂಡಿದ್ದಾರೆ. ವೃತ್ತಿ ಮತ್ತು ಕುಟುಂಬದ ನಡುವೆ ಮಹಿಳೆಯರು ಸಮಯವನ್ನು ವಿಂಗಡಿಸಿಕೊಳ್ಳುವ ಜಾಣ್ಮೆ ತೋರಿದರೆ, ಎರಡೂ ಕಡೆ ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸಲು ಸಾಧ್ಯವಾಗುತ್ತದೆ ಎಂದರು. ಸಾಧಕರಾದರೂ ಸಂಬಂಧಗಳು ಬಲಿಯಾಗಬಾರದು ಎಂಬ ಅಂಶ ಜಾಗೃತವಾಗಿರಬೇಕು. ಸಾಮಾಜಿಕ ಸಮೀಕರಣ ಎಲ್ಲರಿಗೂ ಮುಖ್ಯ. ಅನ್ಯ ದೇಶಗಳಿಗೆ ಹೋಲಿಸಿದರೆ ಭಾರತದಲ್ಲಿ ಸಂಬಂಧಗಳಿಗೆ ಇನ್ನು ಬೆಲೆ ಇದೆ. ಹೀಗಾಗಿ ಸಂಬಂಧಗಳು ಬಲಿಯಾಗದಂತೆ ಕುಟುಂಬ ಮತ್ತು ವೃತ್ತಿಯನ್ನು ನಿರ್ವಹಿಸಬೇಕು ಎಂದು ಕರೆ ನೀಡಿದರು.

ಎಫ್.ಡಿ.ಸಿ ಲಕ್ಷ್ಮೀದೇವಿ ಅವರು ಮಾತನಾಡಿ, ಮಹಿಳೆಯರನ್ನು ಪ್ರೋತ್ಸಾಹಿಸುವ ಎಲ್ಲ ಮನಸ್ಸುಗಳನ್ನು ಗೌರವಿಸಬೇಕು ಎಂದರು. ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರಿಗೆ ಸಂವಿಧಾನದ ಮೂಲಕ ಡಾ.ಬಿ.ಆರ್.ಅಂಬೇಡ್ಕರ್ ಹಕ್ಕುಗಳನ್ನು ಕೊಡಿಸಿದ್ದಾರೆ. ಮಹಿಳೆಯರಿಗೆ ಶಿಕ್ಷಣ, ಅಧಿಕಾರ ಕೊಟ್ಟರೆ ಅವರು ಕರ್ತವ್ಯ ನಿರ್ವಹಿಸುವ ಪ್ರತಿ ಸ್ಥಳವೂ ಅಭಿವೃದ್ದಿ ಕೇಂದ್ರವಾಗುತ್ತದೆ ಎಂಬುದು ಅಂಬೇಡ್ಕರ್ ಅವರಿಗೆ ಗೊತ್ತಿತ್ತು. ಹೀಗಾಗಿಯೆ ಅವರು ಮಹಿಳೆಯರಿಗೆ ಹಕ್ಕುಗಳನ್ನು ಪ್ರತಿಪಾದಿಸಿದ್ದಾರೆ ಎಂದರು. ಕಚೇರಿ ವ್ಯವಸ್ಥಾಪಕರಾದ ರೇಖಾ ಅವರು ಮಾತನಾಡಿ, ತಮ್ಮ ಜೀವನಾನುಭವ, ಸತತ ಪ್ರಯತ್ನದಿಂದ ವೃತ್ತಿಪರ ಪರೀಕ್ಷೆಗಳಲ್ಲಿ ಯಶಸ್ವಿಯಾದ ಬಗ್ಗೆ, ತಮ್ಮ ಕಾರ್ಯಾನುಭವಗಳ ಬಗ್ಗೆ ಮಾತನಾಡಿದರು. ನಗರಸಭಾ ಉಪಾಧ್ಯಕ್ಷೆ ವಿಜಯಕುಮಾರಿ, ನಗರಸಭಾ ಸದಸ್ಯರುಗಳಾದ ಪವಿತ್ರ, ಮಹಾಲಕ್ಷ್ಮಿ, ನಾಗಮ್ಮ, ಸೊಮಶೇಖರ್ (ಮಣಿ) ಮಾತನಾಡಿದರು. ಕಂದಾಯ ನಿರೀಕ್ಷಕ ನಾಗರಾಜ್ (ಬೆಂಕಿ) ನಿರೂಪಿಸಿದರು.




### ತಮ್ಮ ಅನುಭವ ಹಂಚಿಕೊಂಡ ಮಹಿಳಾ ಅಧಿಕಾರಿಗಳು

**ಕಿರಿಯ ಅಭಿಯಂತರರಾದ ನಿರ್ಮಲ ಅವರು ಮಾತನಾಡಿ, ಮಹಿಳೆಯರಿಗೆ ಕುಟುಂಬದಲ್ಲಿ ತಂದೆ, ಸಹೋದರ, ಗಂಡ ಹೀಗೆ ಪುರುಷರಿಂದಲೂ ಆಶ್ರಯ, ಬೆಂಬಲ ದೊರೆಯುತ್ತದೆ. ಇದು ಸಾಧ್ಯವಾಗಬೇಕಾದರೆ ಮಹಿಳೆಯರಲ್ಲಿನ ನಡವಳಿಕೆಯು ಮುಖ್ಯವಾಗುತ್ತದೆ. ಮಹಿಳೆಯರು ಮನಸ್ಸು ಮಾಡಿದರೆ ಯಾವುದು ಅಸಾಧ್ಯವಲ್ಲ ಎಂದರು. ಮಹಿಳಯರಿಗೆ ಕುಟುಂಬದಲ್ಲಿ ಸಂಬಂಧಗಳನ್ನು ನಿರ್ವಹಿಸುವ ಮತ್ತು ಬಹುಕಾರ್ಯಗಳನ್ನು ನಿರ್ವಹಿಸುವ ಶಕ್ತಿಯನ್ನು ದೇವರು ಶಕ್ತಿ ಕೊಟ್ಟಿದ್ದಾನೆ ಎಂದರು.**

**ಭಾರತದಲ್ಲಿ ಸ್ವಾತಂತ್ರ್ಯಕ್ಕೆ ಹೋರಾಡಿದ, ಸ್ವತಂತ್ರ ಭಾರತದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳಾ ಸಾಧಕರ ದೊಡ್ಡ ಪಟ್ಟಿಯನ್ನೇ ಪ್ರಸ್ತುತ ಪಡಿಸಿದರು. ಇಂದು ಮಹಿಳೆಯರಿಗೆ ಉನ್ನತ ಶಿಕ್ಷಣ ದೊರೆಯುತ್ತಿದೆ. ಈ ಅವಕಾಶಗಳನ್ನು ಬಳಸಿಕೊಂಡು ಇನ್ನಷ್ಟು ಸಾಧನೆ ಮಾಡಬೇಕು.**

▸▸ **ಸುಬ್ರಮಣಿ** ಪರಿಸರ ವಿಭಾಗದ ಎಇಇ

### ನ.19ರಂದು ಪುರುಷರ ದಿನ ಆಚರಣೆಯಾಗಲಿ

**ಸಮುದಾಯ ಸಂಘಟನಾಧಿಕಾರಿ ನಟರಾಜ ಗೌಡರು ಮಾತನಾಡಿ ನವೆಂಬರ್ 19ರಂದು ಪುರುಷರ ದಿನ ಎಂಬ ಆಚರಣೆ ಇದೆ. ಈ ದಿನ ಆಚರಣೆಯಾಗಲಿ. ಮಹಿಳಾ ದಿನಾಚರಣೆಗೆ ಪುರುಷರು ಬೆಂಬಲ ನೀಡುವಂತೆ, ಪುರುಷರ ದಿನದ ಆಚರಣೆಗೆ ಮಹಿಳೆಯರು ಮುಂದಾಗಬೇಕು ಎಂದರು.**

### ರಾಜಕೀಯ ಸಮಾನತೆ ಬೇಕು – ಪಾರ್ವತಮ್ಮ

**ಮಾಜಿ ಅಧ್ಯಕ್ಷೆ, ಹಾಲಿ ನಗರಸಭಾ ಸದಸ್ಯೆ ಪಾರ್ವತಮ್ಮ ಮಾತನಾಡಿ, ಇಂದಿನ ಸಮಾಜದಲ್ಲಿ ಮಹಿಳೆಯರು ಬಹುತೇಕ ಎಲ್ಲಾ ರಂಗಗಳಲ್ಲಿಯೂ ಗುರುತಿಸಿಕೊಂಡಿದ್ದಾರೆ. ಇದು ಸಾಧ್ಯವಾಗಿದ್ದು ಡಾ.ಬಿ.ಆರ್.ಅಂಬೇಡ್ಕರ್ ಅವರು ಸಂವಿಧಾನದ ಮೂಲಕ ನೀಡಿರುವ ಹಕ್ಕುಗಳು ಮತ್ತು ಸಮಾನತೆ ಎಂದರು. ಭಾರತದ ವೀರ ಮಹಿಳೆಯರನ್ನು ಸ್ಮರಿಸಿದ ಅವರು ಇಂದಿನ ಮಹಿಳೆಯರು ಸ್ವಾಭಿಮಾನದಿಂದ ಬದುಕಲು ಹೋರಾಟ ನಡೆಸುತ್ತಿದ್ದಾಳೆ ಎಂದರು. ರಾಜಕೀಯವಾಗಿ ಮಹಿಳೆಯರಿಗೆ ಶೇ 50 ಸಮಾನತೆ ಬೇಕು ಎಂದು ಆಗ್ರಹಿಸಿದರು.**

# ಕ್ರೀಡೆ ಜೀವನದ ಅವಿಭಾಜ್ಯ ಅಂಗ



ಮೈಸೂರು: ವಿದ್ಯಾರ್ಥಿ ಜೀವನದಲ್ಲಿ ಕ್ರೀಡೆಯೂ ಒಂದು ಅವಿಭಾಜ್ಯ ಅಂಗವಾಗಿದೆ ಎಂದು ನಗರ ಪೊಲೀಸ್ ಆಯುಕ್ತೆ ಸೀಮಾಲಾಟ್ಕರ್ ಹೇಳಿದರು.

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಮಹಾರಾಣಿ ಮಹಿಳಾ ಕಲಾ ಕಾಲೇಜಿನ ಸ್ನಾತಕ ಮತ್ತು ಸ್ನಾತಕೋತ್ತರ ಕೇಂದ್ರದಿಂದ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ವಿಭಾಗವು ಒವೆಲ್ ಮೈದಾನವು ಆಯೋಜಿಸಿದ್ದ ಪ್ರಿನ್ಸೆಸ್ ಅಥ್ಲೆಟಿಕ್ಸ್ ಕ್ರೀಡಾಕೂಟ 2025–26 ಅನ್ನು ಉದ್ಘಾಟಿಸಿ ಮಾತನಾಡಿದರು. ಇಂದಿನ ಯುಗದಲ್ಲಿ ಕೇವಲ ಓದಿನಿಂದಲೇ ಎಲ್ಲವೂ ಸಾಧ್ಯವಾಗಲ್ಲ. ಕ್ರೀಡೆಯಲ್ಲೂ ತೊಡಗಿಸಿಕೊಳ್ಳಬೇಕು.ಅಲ್ಲದೆ ಕಾನೂನು ಪಾಲನೆ ಪ್ರತಿಯೊಬ್ಬರ ಕರ್ತವ್ಯ ಆಗಲಿ ಎಂದು ಹೇಳಿದರು. ಮಹಾರಾಣಿ ಮಹಿಳಾ ಕಲಾ ಕಾಲೇಜು ಪ್ರಾಂಶುಪಾಲೆ ಪ್ರೊ.ಎಂ.ಎಸ್.ಅನಿತಾ, ಮಹಾರಾಣಿ ಮಹಿಳಾ ಕಲಾ ಕಾಲೇಜಿನ ದೈಹಿಕ ಶಿಕ್ಷಣ ವಿಭಾಗದ ಮುಖ್ಯಸ್ಥ ಹಾಗೂ ದೈಹಿಕ ಶಿಕ್ಷಣ ನಿರ್ದೇಶಕರಾದ ಡಾ.ಸಿ.ಎಸ್.ಮೋಹನ್ ಕುಮಾರ್, ಡಾ.ಕೆ.ಎಸ್.ಭಾಸ್ಕರ್, ಕಾಲೇಜಿನ ಪತ್ರಾಂಕಿತ ವ್ಯವಸ್ಥಾಪಕ ಕೆ.ವೆಂಕಟೇಶ್ ಉಪಸ್ಥಿತರಿದ್ದರು.

# ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್ ಕೊರತೆ ಸರಿಪಡಿಸುವಂತೆ ಡಿಸಿಗೆ ಮನವಿ

ಚಾಮರಾಜನಗರ, ಎಲ್ ಪಿ ಜಿ ಗ್ಯಾಸ್ ಸರಬರಾಜಿನಲ್ಲಿ ಆಗುತ್ತಿರುವ ತೊಂದರೆ ಸರಿಪಡಿಸಿ ಹೋಟೆಲ್ ಉದ್ಯಮಿ ನಡೆಸಲು ಅವಕಾಶ ಕಲ್ಪಿಸಿಕೊಡಬೇಕು ಎಂದು ಒತ್ತಾಯಿಸಿ ಜಿಲ್ಲಾ ಹೋಟೆಲ್ ಮಾಲೀಕರ ಸಂಘದ ವತಿಯಿಂದ ನಗರದ ಜಿಲ್ಲಾಡಳಿತ ಭವನದಲ್ಲಿ ಜಿಲ್ಲಾಧಿಕಾರಿ ಶ್ರೀರೂಪ ಅವರಿಗೆ ಮನವಿ ಸಲ್ಲಿಸಲಾಯಿತು.

ಇತ್ತೀಚಿನ ದಿನಗಳಲ್ಲಿ ವಾಣಿಜ್ಯ ಬಳಕೆಗಾಗಿ ನೀಡಲಾಗುವ ಎಲ್ ಪಿ ಜಿ ಗ್ಯಾಸ್ ಸಿಲಿಂಡರ್ ಸರಬರಾಜಿನಲ್ಲಿ ಉಂಟಾಗುತ್ತಿರುವ ವ್ಯತ್ಯಯದಿಂದ ಹೋಟೆಲ್ ಉದ್ಯಮಕ್ಕೆ ಹಾಗೂ ಪರೋಕ್ಷವಾಗಿ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿದೆ. ಈ ಸೇವೆಯೂ ಅಗತ್ಯ ವಸ್ತುಗಳ ಕಾಯ್ದೆಯಡಿ ಬರುವುದರಿಂದ ಆಗುತ್ತಿರುವ ತೊಂದರೆಗಳ ಬಗ್ಗೆ ಸರ್ಕಾರದ ಗಮನಕ್ಕೆ ತಂದು ಸಂಬಂಧಪಟ್ಟ ಇಲಾಖೆಗಳೊಂದಿಗೆ ಚರ್ಚಿಸಿ, ಸಮರ್ಪಕವಾಗಿ ಪೂರೈಕೆ ಮಾಡಬೇಕು ಎಂದು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿರುವ ಮನವಿಯಲ್ಲಿ ಜಿಲ್ಲಾ ಹೋಟೆಲ್ ಮಾಲೀಕರ ಸಂಘದ ಕಾರ್ಯದರ್ಶಿ ಪ್ರತಾಪ್ ಎಸ್. ಸರ್ಕಾರವನ್ನು ಒತ್ತಾಯಿಸಿದ್ದಾರೆ. ಈ ಸಂದರ್ಭದಲ್ಲಿ ಜಿಲ್ಲಾ ಹೋಟೆಲ್ ಮಾಲೀಕರ ಸಂಘದ ಉಪಾಧ್ಯಕ್ಷ ಪಾಪಣ್ಣ ಸಿಟಿ, ಸಹಕಾರ್ಯದರ್ಶಿ ಜಿ.ಅಂಕಶೆಟ್ಟಿ, ವೆಂಕಟೇಶ್ ಮಾಯಾ, ವಿಜಯ್ ಕುಲಾಲ್, ರಕ್ಷಿತ್, ಶಂಕರ್ ಹಾಜರಿದ್ದರು.



ಕರ್ನಾಟಕ ಸರ್ಕಾರ
**ಸರ್ಕಾರಿ ಆರ್ಯುವೇದ ವೈದ್ಯಕೀಯ ಮಹಾವಿದ್ಯಾನಿಲಯ ಮತ್ತು ಆಸ್ಪತ್ರೆ**
ನ್ಯೂ ಸಯ್ಯಾಜಿ ರಾವ್ ರಸ್ತೆ, ವಿಶ್ವೇಶ್ವರಯ್ಯ ವೃತ್ತ, ಮೈಸೂರು–570001
ದೂರವಾಣಿ ನಂ: 0821–2443701,0821–2442205, ಫ್ಯಾಕ್ಸ್ ನಂ:0821–2443701
E-mail ID:gamcmysore@gmail.com

ಸಂಖ್ಯೆ: ಸಂಖ್ಯೆ:ಸಆಆ/09/ಸರಬ/2025–26 ದಿನಾಂಕ: 09.03.2026

**ಇ–ಟೆಂಡರ್ ಪ್ರಕಟಣೆ**

**ವಿಷಯ:** ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಮೈಸೂರು ಇಲ್ಲಿಗೆ ಅವಶ್ಯಕವಾಗಿ ಬೇಕಾಗಿರುವ ಆಯುರ್ವೇದ ಔಷಧಿಗಳನ್ನು ಸರಬರಾಜು ಮಾಡಲು 3ನೇ ಬಾರಿ ಇ–ಟೆಂಡರ್.

ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಮೈಸೂರು ಇಲ್ಲಿಗೆ ಅವಶ್ಯವಾಗಿ ಬೇಕಾಗಿರುವ ಆಯುರ್ವೇದ ಔಷಧಿಗಳನ್ನು ಸರಬರಾಜು ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 – ನಿಯಮ 2000 ರಂತೆ ಇ–ಪ್ರೊಕ್ಯೂರ್‌ಮೆಂಟ್ ನಲ್ಲಿ ನೋಂದಾಯಿತ ಅರ್ಹ ಟೆಂಡರ್ದಾರರಿಂದ 3ನೇ ಬಾರಿ ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಪೂರ್ಣ ವಿವರಗಳನ್ನು ವೆಬ್‌ಸೈಟ್ **https://kppp.karnataka.govin/** ಇದರಲ್ಲಿ ಪಡೆಯುವುದು.

| | |
|---|---|
| ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಪ್ರಾರಂಭ | **09.03.2026**ರ ಅಪರಾಹ್ನ **5.00** ಗಂಟೆಯಿಂದ |
| ಬಿಡ್ ಮಾಡುವ ಕೊನೆಯ ದಿನಾಂಕ | **23.03.2026**ರ ಅಪರಾಹ್ನ **5.00** ಗಂಟೆವರೆಗೆ |
| ಟೆಂಡರ್‌ಗಳನ್ನು ತೆರೆಯುವ ದಿನಾಂಕ | **25.03.2026**ರ ಅಪರಾಹ್ನ **12.00** ಗಂಟೆಗೆ |
| ಆಯುರ್ವೇದ ಔಷಧಿಗಳ ಟೆಂಡರ್ ಅಂದಾಜು ಮೌಲ್ಯ **ರೂ.15.00 ಲಕ್ಷ** | ಇ.ಎಂ.ಡಿ ಮೊತ್ತ **ರೂ.37,500/–** |

ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ಪ್ರಾಚಾರ್ಯರು, ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ ಮೈಸೂರು ಇವರನ್ನು ಸಂಪರ್ಕಿಸಬಹುದಾಗಿದೆ

ಸಹಿ/– ಪ್ರಾಚಾರ್ಯರು
ಸರ್ಕಾರಿ ಆರ್ಯುವೇದ ವೈದಕೀಯ
ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಮೈಸೂರು.

ವಾಸಾಸಂಇ/ಮೈಸೂರು/ಶಿರಡಿಸಾಯಿ/1811/2025–26

## ಎಟಿಎಂ ಯಂತ್ರದಂತೆ ಬ್ಯಾಗ್ ವಿತರಣಾ ಯಂತ್ರ ಕೆಲಸ । 10 ರೂಗೆ ಒಂದು ಬಟ್ಟೆ ಬ್ಯಾಗ್ । ಪ್ಲಾಸ್ಟಿಕ್ ಚೀಲ ತ್ಯಜಿಸಲು ಪ್ರೇರಣೆ

# ನಗರಸಭೆವತಿಯಿಂದ ಎಪಿಎಂಸಿ ಮಾರುಕಟ್ಟೆಯಲ್ಲಿ ಬಟ್ಟೆ ಬ್ಯಾಗ್ ವಿತರಣಾ ಯಂತ್ರ

ರಾಮನಗರ: ಸ್ವಚ್ಛ ರಾಮನಗರದ ಕಲ್ಪನೆಯನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಇಲ್ಲಿನ ನಗರಸಭೆ ಮತ್ತೊಂದು ಮಹತ್ತರವಾದ ಹೆಜ್ಜೆ ಇಟ್ಟಿದೆ. ಪ್ಲಾಸ್ಟಿಕ್ ಕ್ಯಾರಿ ಕವರ್‌ಗಳ ಬಳಕೆ ಕಡಿಮೆ ಮಾಡುವ ಉದ್ದೇಶದಲ್ಲಿ ನಗರದ ಎಪಿಎಂಸಿ ಮಾರುಕಟ್ಟೆಯಲ್ಲಿ ನಗರಸಭೆ ಬಟ್ಟೆ ಬ್ಯಾಗ್ ವಿತರಣಾ ಯಂತ್ರವನ್ನು ಸ್ಥಾಪಿಸಿದೆ.

ನೂತನ ವ್ಯವಸ್ಥೆಗೆ ಚಾಲನೆ ನೀಡಿದ ನಗರಸಭಾಧ್ಯಕ್ಷ ಕೆ.ಶೇಷಾದ್ರಿ, ಪರಿಸರಕ್ಕೆ ಮಾರಕವಾಗಿರುವ ಪ್ಲಾಸ್ಟಿಕ್ ಚೀಲಗಳನ್ನು ಜನರು ಸ್ವಯಂಪ್ರೇರಿತರಾಗಿ ತ್ಯಜಿಸಬೇಕು. ಬಟ್ಟೆ ಬ್ಯಾಗ್‌ಗಳ ಬಳಕೆ ಮಾಡಬೇಕು. ಜನರನ್ನು ಪ್ರೋತ್ಸಾಹಿಸುವ ಉದ್ದೇಶದಲ್ಲಿ ಬಟ್ಟೆ ಬ್ಯಾಗ್ ವೆಂಡಿಂಗ್ ಯಂತ್ರವನ್ನು ಎಪಿಎಂಸಿ ಮಾರುಕಟ್ಟೆಯಲ್ಲಿ ಸ್ಥಾಪಿಸಲಾಗಿದೆ. ಯಂತ್ರಕ್ಕೆ 10 ರೂ ನಾಣ್ಯ ಹಾಕಿದರೆ ಬಟ್ಟೆ ಬ್ಯಾಗ್ ದೊರೆಯುತ್ತದೆ. ಜನರು ತರಕಾರಿ, ದಿನಸಿ ಪದಾರ್ಥಗಳನ್ನು ಕೊಂಡೊಯ್ಯಲು ಬಟ್ಟೆ ಬ್ಯಾಗ್‌ಗಳನ್ನು ಬಳಸಿ ಎಂದು ಅವರು ಕರೆ ನೀಡಿದರು.

ಮೊದಲ ಹಂತದಲ್ಲಿ ಎಪಿಎಂಸಿ ಮಾರುಕಟ್ಟೆಯಲ್ಲಿ ಈ ಯಂತ್ರವನ್ನು ಸ್ಥಾಪಿಸಲಾಗಿದೆ, ಮುಂದೆ ನಗರದಾದ್ಯಂತ ಈ ರೀತಿಯ ಬಟ್ಟೆ ಬ್ಯಾಗ್ ವಿತರಣಾ ಯಂತ್ರ ಸ್ಥಾಪಿಸುವ ಚಿಂತನೆ ಇದೆ ಎಂದರು.




ಪ್ಲಾಸ್ಟಿಕ್ ಬಳಕೆ ನಿಲ್ಲಬೇಕಾದರೆ ಅಂಗಡಿ ಮಾಲೀಕರು ಮತ್ತು ಸಾರ್ವಜನಿಕರು ಸಹ ಜವಾಬ್ದಾರಿ ವಹಿಸಬೇಕಿದೆ. ಸ್ವಚ್ಛ ರಾಮನಗರದ ಕನಸಿಗೆ ಜನರ ಸಹಕಾರ ಅತಿಮುಖ್ಯವಾಗಿದೆ. ಪ್ಲಾಸ್ಟಿಕ್ ಕವರ್‌ಗಳ ಮಾರಾಟ ಮಾರಬಾರದು, ಬಳಸ ಬಾರದು, ಹಾಗೊಮ್ಮೆ ಇವು ಕಂಡುಬಂದಲ್ಲಿ ಮಾರಾಟಗಾರರ ಮೇಲೆ ನಿರ್ದಾಕ್ಷಿಣ್ಯ ಕ್ರಮದ ಜೊತೆಗೆ ದಂಡ ವಿಧಿಸಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

### 10 ಕೆಜಿ ತೂಕ ತಡೆಯ ಬಲ್ಲದು – ಡಾ.ಜಯಣ್ಣ

ನಗರಸಭೆ ಆಯುಕ್ತ ಡಾ.ಜಯಣ್ಣ ಮಾತನಾಡಿ ಇದೇ ಮೊದಲ ಬಾರಿಗೆ ನಗರಸಭೆ ವತಿಯಿಂದ ಬಟ್ಟೆ ಬ್ಯಾಗ್ ವಿತರಣಾ ಯಂತ್ರವನ್ನು ನಗರದಲ್ಲಿ ಪರಿಚಯಿಸಲಾಗುತ್ತಿದೆ. ಬಟ್ಟೆ ಬ್ಯಾಗ್ 10 ಕೆ.ಜಿ.ಯಷ್ಟು ತೂಕ ತಡೆಯಬಲ್ಲದು ಎಂದರು. ನಿಷೇಧಿತ ಪ್ಲಾಸ್ಟಿಕ್ ವಸ್ತುಗಳ ಮಾರಾಟದ ವಿರುದ್ಧ ಅಧಿಕಾರಿಗಳು ಅಂಗಡಿಗಳಲ್ಲಿ ತಪಾಸಣೆಗೆ ಮುಂದಾದಗಲೆಲ್ಲ, ಪ್ಲಾಸ್ಟಿಕ್‌ಗೆ ಪರ್ಯಾಯವೇನು ಎಂದು ವರ್ತಕರು ಕೇಳುತ್ತಿದ್ದರು. ಅದಕ್ಕೆ ಪರ್ಯಾವಾಗಿ ಇಂದು ಬಟ್ಟೆ ಬ್ಯಾಗ್ ವಿತರಣಾ ಯಂತ್ರ ಗಳನ್ನು ಮಾರುಕಟ್ಟೆಯಲ್ಲಿ ಸ್ಥಾಪಿಸಲಾಗಿದ್ದು, ಮುಂದೆ ಬೇಡಿಕೆ ನೋಡಿಕೊಂಡು ಇತರ ಸ್ಥಳಗಳಲ್ಲೂ ಈ ಯಂತ್ರ ಸ್ಥಾಪನೆ ಮಾಡಲಾಗುತ್ತದೆ ಎಂದರು. ಈ ಸಂದರ್ಭದಲ್ಲಿ ನಗರಸಭೆ ಉಪಾಧ್ಯಕ್ಷೆ ಗಿರಿಜಮ್ಮ, ಸದಸ್ಯರಾದ ಬಿ.ಸಿ. ಪಾರ್ವತಮ್ಮ, ವಿಜಯಕುಮಾರಿ, ಪವಿತ್ರ, ಸೋಮಶೇಖರ್ (ಮಣಿ), ನಾಗಮ್ಮ ನಗರಸಭೆ ಅಧಿಕಾರಿಗಳಾದ ವಿಶ್ವನಾಥ್, ನಟರಾಜೇಗೌಡ, ನಿರ್ಮಲ, ಪೌರ ನೌಕರ ಕೊಲ್ಲಾಪುರಿ, ಎಪಿಎಂಸಿ ಕಾರ್ಯದರ್ಶಿ ತಾಸೀಂ ಮುಖಂಡರಾದ ಪ್ರವೀಣ್, ಲಕ್ಷ್ಮೀಕಾಂತ್ ಸೇರಿದಂತೆ ಹಲವರಿದ್ದರು.

### ಮಹಿಳಾ ಸ್ವಸಹಾಯ ಸಂಘಗಳ ಸಹಕಾರ: ಸುಬ್ರಮಣಿ

**ಆರೋಗ್ಯ ಸ್ವಚ್ಛತಾ ಅಧಿಕಾರಿ ಎಇಇ ಸುಬ್ರಹ್ಮಣಿ ಮಾತನಾಡಿ ರಾಮನಗರದ ಎಪಿಎಂಸಿ ಮಾರುಕಟ್ಟೆ ಪ್ರದೇಶದ ಒಂದು ಸ್ಥಳದಲ್ಲಿ ಬ್ಯಾಗ್ ವೆಂಡಿಂಗ್ ಮಿಷಿನ್ ಸ್ಥಾಪಿತವಾಗಿದೆ. ಬಟ್ಟೆ ಬ್ಯಾಗ್ ಪೂರೈಕೆ ನಗರದ ಮಹಿಳಾ ಸ್ವಸಹಾಯ ಸಂಘಗಳಿಗೆ ನೀಡುವ ಜೊತೆಗೆ ಯಂತ್ರ ನಿರ್ವಹಣೆಯನ್ನೂ ಮಹಿಳಾ ಸಂಘಗಳೇ ನೋಡಿಕೊಳ್ಳಲಿವೆ ಜನರು ಈ ಮೂಲಕ ಮೆಷಿನ್ ಬಳಕೆ ಮಾಡಿಕೊಳ್ಳಬೇಕು ಎಂದು ಕರೆ ನೀಡಿದರು.**

# ಮಹಿಳೆಯೆಂದರೆ ಶಕ್ತಿ, ಧೈರ್ಯ, ಕಾಳಜಿ: ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ

ಚಾಮರಾಜನಗರ: ತಾಯಿ, ಸಹೋದರಿ, ಮಡದಿ, ಮಗಳು ಹೀಗೆ ಕುಟುಂಬದ ಎಲ್ಲಾ ನಿರ್ವಹಣೆಯಲ್ಲಿ ನಿರ್ಣಾಯಕ ಪಾತ್ರ ವಹಿಸುವ ಮಹಿಳೆಯರ ಪಾತ್ರ ಬಹುದೊಡ್ಡದು. ಮಹಿಳೆಯೆಂದರೆ ಶಕ್ತಿ, ಧೈರ್ಯ, ಕಾಳಜಿ ಎಂದು ಕಾಡಾ ಅಧ್ಯಕ್ಷರಾದ ಪಿ. ಮರಿಸ್ವಾಮಿ ಅವರು ಹೇಳಿದರು.

ನಗರದ ಜೆ.ಹೆಚ್. ಪಟೇಲ್ ಸಭಾಂಗಣದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆ, ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ಹಾಗೂ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಗಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮಹಿಳೆಯರು ಕುಟುಂಬದಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸಲಿದ್ದಾರೆ. ಪ್ರತಿ ಯಶಸ್ವಿ ಪುರುಷನ ಹಿಂದೆ ಮಹಿಳೆಯೊಬ್ಬರು ಇರುತ್ತಾರೆ ಎಂಬುದನ್ನು ಒಪ್ಪಬೇಕಿದೆ. ತಾಳ್ಮೆ, ಸಹನೆ ಪ್ರತೀಕವಾದ ಮಹಿಳೆಯರು ಎಲ್ಲ ರಂಗಗಳಲ್ಲಿಯೂ ಮುಂದಿದ್ದಾರೆ. ಇತಿಹಾಸವನ್ನು ನೋಡಿದಾಗ ಕಿತ್ತೂರು ರಾಣಿ ಚೆನ್ನಮ್ಮ, ಝಾನ್ಸಿರಾಣಿ ಲಕ್ಷ್ಮಿಬಾಯಿಯಂತಹ ವೀರ ಹೋರಾಟಗಾರರು



ತಮ್ಮದೇ ಆದ ಶೌರ್ಯ ಪ್ರದರ್ಶಿಸಿದ್ದಾರೆ ಎಂದರು.

ಮಹಿಳೆಯರ ಸಾಧನೆ ಗೌರವಿಸಬೇಕು. ರಾಜಕೀಯ, ಸಮಾಜ ಸೇವೆ, ಕ್ರೀಡೆ ಸೇರಿದಂತೆ ಹಲವಾರು ಕ್ಷೇತ್ರ ಗಳಲ್ಲಿ ಸಾಧನೆ ಮಾಡಿದವರ ಆದರ್ಶ ನಮ್ಮ ಮುಂದಿದೆ. ಉತ್ತಮ ಸಕಾಲಿಕ ಸಲಹೆ, ಅಭಿಪ್ರಾಯ ಗಳನ್ನು ನೀಡುವ ಮಹಿಳೆಯರು ಕುಟುಂಬದ ಯಶಸ್ಸಿಗೆ ಕಾರಣರಾಗುತ್ತಿದ್ದಾರೆ. ಪೂಜ್ಯ ಗೌರವ ಭಾವನೆಯಿಂದ ಮಹಿಳೆಯರನ್ನು ಕಾಣಲಾಗುತ್ತಿದೆ. ಜಿಲ್ಲೆಯಲ್ಲಿಯೂ ಸಾಕಷ್ಟು ಪ್ರತಿಭಾನ್ವಿತ ಮಹಿಳೆಯರು ಇರುವುದು ಹೆಮ್ಮೆಯ ವಿಷಯವಾಗಿದೆ ಎಂದು ಮರಿಸ್ವಾಮಿ ಅವರು ತಿಳಿಸಿದರು.

ಚೂಡಾ ಅಧ್ಯಕ್ಷರಾದ ಮಹಮ್ಮದ್ ಅಸ್ಗರ್ ಮುನ್ನ ಅವರು ಮಾತನಾಡಿ ಮಹಿಳೆಯರು ಇಂದು ಅನೇಕ ಉನ್ನತ ಹಂತಕ್ಕೆ ತಲುಪಿದ್ದಾರೆ. ಕ್ರೀಡೆ, ವಿಮಾನಯಾನ, ವಿಜ್ಞಾನ ತಂತ್ರಜ್ಞಾನ ಕ್ಷೇತ್ರಗಳಲ್ಲಿಯೂ ಹೆಚ್ಚು ಅವಕಾಶ ಗಳನ್ನು ಪಡೆದು ತಮ್ಮ ಕೊಡುಗೆ ನೀಡಿದ್ದಾರೆ ಎಂದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಅವರು ಮಾತನಾಡಿ ಪುರುಷ ಮಹಿಳೆ ಸರಿಸಮಾನವಾಗಿ ಎಲ್ಲ ರಂಗದಲ್ಲಿಯೂ ಇರಲು ಉತ್ತೇಜನ ಬಹಳ ಮುಖ್ಯವಾಗುತ್ತದೆ. ಔದ್ಯೋಗಿಕ, ಶೈಕ್ಷಣಿ, ಆಡಳಿತ ಹೀಗೆ ಎಲ್ಲ ಕ್ಷೇತ್ರಗಳಲ್ಲಿಯೂ ಮಹಿಳೆಗೆ ನಿರಂತರವಾಗಿ ಅವಕಾಶಗಳು ಪ್ರೋತ್ಸಾಹಕ್ಕೆ ಬೆಂಬಲವಾಗಿ ನಿಲ್ಲಬೇಕಿದೆ ಎಂದರು.

ಇದೇ ವೇಳೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ 8 ಮಹಿಳಾ ಸಾಧಕಿಯರನ್ನು, ಉತ್ತಮವಾಗಿ ಕಾರ್ಯ ನಿರ್ವಹಿಸಿರುವ ಐವರು ಅಂಗನವಾಡಿ ಕಾರ್ಯಕರ್ತೆಯರನ್ನು ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಅಂಗನವಾಡಿ ಕಾರ್ಯಕರ್ತೆ ಗುರುಲಿಂಗಮ್ಮ ಅವರು ರಚಿಸಿರುವ ತಿರುವು ಶೀರ್ಷಿಕೆಯ ಕಥಾ ಸಂಕಲವನ್ನು ಗಣ್ಯರು ಬಿಡುಗಡೆ ಮಾಡಿದರು. ಗ್ಯಾರಂಟಿ ಯೋಜನೆಗಳ ತಾಲೂಕು ಅಧ್ಯಕ್ಷರಾದ ಸೋಮೇಶ್ವರ, ಉಮಾಪತಿ, ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ಜಿಲ್ಲ ಪಂಚಾಯತ್ ಉಪಕಾರ್ಯದರ್ಶಿ ಶೃತಿ. ಡಿಸಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರಾದ ಹೆಚ್.ಆರ್. ಸುರೇಶ್, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಮಂಜುಳಾ, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

### ಸನ್ಮಾನ ಇತರೆ ಮಹಿಳೆಯರಿಗೂ ಪ್ರೇರಣೆ

ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಅಧ್ಯಕ್ಷರಾದ ಹೆಚ್.ವಿ. ಚಂದ್ರು ಅವರು ಮಾತನಾಡಿ ಮಹಿಳಾ ಸಾಧಕರನ್ನು ಸನ್ಮಾನಿಸುವುದರಿಂದ ಇತರೆ ಮಹಿಳೆಯರಿಗೂ ಪ್ರೇರಣೆಯಾಗಲಿದೆ. ರಾಜ್ಯ ಸರ್ಕಾರ ರೂಪಿಸಿರುವ ಗ್ಯಾರಂಟಿ ಯೋಜನೆಗಳು ಮಹಿಳೆಯರ ಅಭಿವೃದ್ದಿಯ ಗುರಿ ಹೊಂದಿದೆ. ಗೃಹಲಕ್ಷ್ಮಿ, ಶಕ್ತಿ ಯೋಜನೆಯಂತಹ ಕಾರ್ಯಕ್ರಮಗಳಿಮದ ಮಹಿಳೆಯರಿಗೆ ಹೆಚ್ಚು ಅನುಕೂಲ ಕಲ್ಪಿಸಿಕೊಡಲಾಗಿದೆ ಎಂದರು.

### ಸ್ತ್ರೀಯರಿಗೆ ಧೈರ್ಯ ತುಂಬೋಣ

ಅಧ್ಯಕ್ಷತೆ ವಹಿಸಿ ಮಾತನಾಡಿದ ಜಿಲ್ಲಾಧಿಕಾರಿ ಶ್ರೀರೂಪ ಅವರು ದೊಡ್ಡ ಶಕ್ತಿ ಎನಿಸಿಕೊಳ್ಳುವ ಮಹಿಳೆಯರ ಹಿಂದಿನ ನೋವುಗಳನ್ನು ಅರ್ಥ ಮಾಡಿಕೊಳ್ಳಬೇಕಿದೆ. ಹಲವು ಸಂದರ್ಭಗಳಲ್ಲಿ ಹೆಣ್ಣು ಮಕ್ಕಳು ಅಪಮಾನ, ತಿರಸ್ಕಾರಕ್ಕೆ ಒಳಗಾದರು ಸಹ ಸೋತಿದ್ದೇವೆ ಎಂದು ಮೇಲ್ನೋಟಕ್ಕೆ ತೋರಿಸಿಕೊಳ್ಳುವುದಿಲ್ಲ. ನೋವನ್ನು ನುಂಗಿ ಚಡಪಡಿಸುವ ಸಣ್ಣ ವಯಸ್ಸಿನ ಹೆಣ್ಣುಮಕ್ಕಳು ಸಹ ತಮ್ಮಲ್ಲೇ ಕೊರಗುತ್ತಾರೆ. ಇಂತಹ ಹೆಣ್ಣುಮಕ್ಕಳಿಗೆ ಧೈರ್ಯ ತುಂಬುವುದಕ್ಕೆ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಸಮರ್ಪಣೆಯಾಗಲಿ ಎಂದು ಜಿಲ್ಲಾಧಿಕಾರಿಗಳು ಆಶಿಸಿದರು

## ರಾಜ್ಯ ಸರ್ಕಾರದಿಂದ ಎಸ್‌ಇಪಿ, ಟಿಎಸ್ ಅನುದಾನ ದುರ್ಬಳಕೆ

**ಮೂಡ್ನಾಕೂಡು ಪ್ರಕಾಶ್ ಆರೋಪ । ಸಿದ್ದರಾಮಯ್ಯ , ಯತೀಂದ್ರ ಅವರ ಕೈಯಲ್ಲಿ ಸಮಾಜ ಕಲ್ಯಾಣ ಇಲಾಖೆ ಬಂಧಿ ಶಂಕೆ**



ಚಾಮರಾಜನಗರ, ಮತ್ತೆ ರಾಜ್ಯ ಸರ್ಕಾರ ಎಸ್‌ಇಪಿ, ಟಿಎಸ್‌ಪಿ ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ದುರ್ಬಳಕೆ ಮಾಡಿಕೊಂಡಿದೆ ಎಂದು ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೂಡ್ನಾಕೂಡು ಪ್ರಕಾಶ್ ಆರೋಪಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ,ಈ ಸಾಲಿನಲ್ಲಿ ಎಸ್‌ಇಪಿ, ಟಿಎಸ್‌ಪಿಗೆ ಸರ್ಕಾರವು 44 ಸಾವಿರ ಕೋಟಿ ಅನುದಾನವನ್ನು ಮೀಸಲಿಟ್ಟಿತ್ತು. ಅದರಲ್ಲಿ 14 ಸಾವಿರ ಕೋಟಿಯನ್ನು ಗ್ಯಾರಂ ಟಿ ಯೋಜನೆಗಳಿಗೆ ಬಳಕೆ ಮಾಡಿಕೊಂಡಿದ್ದು ಸಮಾಜ ಕಲ್ಯಾಣ ಇಲಾಖೆಗೆ ಕೇವಲ 7 ಸಾವಿರ ಕೋಟಿಯನ್ನು ಹಂಚಿಕೆ ಮಾಡ ಲಾಗಿದೆ ಎಂದು ಅಪಾದಿಸಿದರು. ಎಸ್‌ಇಪಿ, ಟಿಎಸ್ಪಿ ಅನುದಾನವನ್ನು ಗ್ಯಾರಂಟಿ ಯೋಜ ನೆಗಳಿಗೆ ಬಳಕೆ ಮಾಡದಂತೆ ದಲಿತ ಶಾಸಕರು ಸಿಎಂ ಸಿದ್ದರಾಮಯ್ಯ ಅವರನ್ನು ಕೇಳಿಕೊಂಡರು ಕೂಡ ಇದಕ್ಕೆ ಕ್ಯಾರೆ ಎನ್ನದೇ ಅನುದಾನ ದುರ್ಬಳಕೆ ಮಾಡಿಕೊಳ್ಳಲಾಗಿದೆ ಎಂದರು.

ಕಳೆದ ಬಿಜೆಪಿ ಸರ್ಕಾರದ ಅವಧಿಯಲ್ಲಿ ದಲಿತರಿಗೆ ಸಾಕಷ್ಟು ಯೋಜನೆಗಳ ಮೂಲಕ ಅನುದಾನ ಮೀಸಲಿಡಲಾಗಿತ್ತು. ಹೆಚ್.ಸಿ ಮಹದೇವಪ್ಪ ಸಮಾಜಕಲ್ಯಾಣ ಸಚಿವರು ಆಗಿದ್ದರು. ಇಲಾಖೆಯು ಮುಖ್ಯಮಂತ್ರಿ ಸಿದ್ದರಾಮಯ್ಯ, ಯತೀಂದ್ರ ಅವರ ಕೈಯಲ್ಲಿ ಬಂಧಿಯಾಗಿದೆ ಎಂಬ ಸಂಶಯ ಮೂಡಿದೆ ಆಗಾ ಇನ್ನಾದರೂ ಸಮುದಾಯದ ಸ್ವಾಮೀಜಿಗಳು, ಮುಖಂಡರು ಸಮುದಾಯದ ಒಳಿತಿಗಾಗಿ ಧ್ವನಿಯಾಗಬೇಕು. ಕೂಡಲೇ 14 ಸಾವಿರ ಕೋಟಿಯನ್ನು ದುರುಪಯೋಗವಾಗದಂತೆ ತಡೆಯಬೇಕು. ಅನುದಾನ ದುರ್ಬಳಕೆ ಮಾಡಿಕೊಳ್ಳುವ ಬದಲು ದಲಿತ ಸಂಬಂಧಿಸಿದ ನಿಗಮಗಳಿಗೆ ಬೀಗ ಹಾಕಿಸಿದರೆ ಸಮುದಾಯದ ಜನ ನೆಮ್ಮದಿಯಾಗಿ ಜೀವನ ನಡೆಸುತ್ತಾರೆ ಎಂದರು.

ಇಲ್ಲಿಯ ತನಕ 1,56,701 ಕೋಟಿ ಅನುದಾನವನ್ನು ದಲಿತರಿಗೆ ಮೀಸಲಿಟ್ಟಿದ್ದು ಇದರಲ್ಲಿ 53,500 ಕೋಟಿ ಅನುದಾನ ದುರ್ಬಳಕೆಯಾಗಿದೆ. ಕೂಡಲೇ ಸಮುದಾಯದವರು ಜಾಗೃತರಾಗಬೇಕು ಎಂದರು

ಮುಖಂಡರಾದ ಮಂಜು ಕೋಡಿಉಗನೆ ಮಾತನಾಡಿ, ರಾಜ್ಯ ಕಾಂಗ್ರೆಸ್ ಸರ್ಕಾರ ಬಜೆಟ್ ನಲ್ಲಿ ದಲಿತ ಕಲ್ಯಾಣಕ್ಕಾಗಿ ಮೀಸಲಿಟ್ಟ ಅನುದಾನವನ್ನು ಅನ್ಯ ಕಾರ್ಯಕ್ರಮಗಳಿಗೆ ಬಳಸುವ ಮೂಲಕ ದಲಿತರಿಗೆ ಮೋಸ ಮಾಡುವುದು ಸರಿಯಲ್ಲ. ರಾಜ್ಯ ಸರ್ಕಾರ ಬಜೆಟ್ ನಲ್ಲಿ ಹನೂರು ತಾಲೂಕು ಅಭಿವೃದ್ಧಿ ಗಾಗಿ 490 ,ಕೋಟಿ ಬಿಡುಗಡೆ ಮಾಡಿರುವುದಕ್ಕೆ ಕ್ಷೇತ್ರದ ಸಂಸದ ಸುನೀಲ್ ಬೋಸ್ ಮುಖ್ಯಮಂತ್ರಿಗಳಿಗೆ ಅಭಿನಂದನೆ ಸಲ್ಲಿಸಿದ್ದಾರೆ. ಅದಕ್ಕೆ ಬದಲಾಗಿ ಕೇಂದ್ರ ಸರ್ಕಾರದಿಂದ ಹನೂರಿಗೆ ಅನುದಾನ ತರಲಿ ಎಂದು ಒತ್ತಾಯಿಸಿದರು. ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಮೂರ್ತಿ, ಎಸ್ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಪರಮೇಶ್, ಶೇಷಪ್ಪ ಪಾಸ್ವಾನ್, ರಾಮಸಮುದ್ರ ಶಿವಣ್ಣ ಹಾಜರಿದ್ದರು.

## ಲಾಟರಿ ಮಾರುತ್ತಿದ್ದವನ ಬಂಧನ

ಗುಂಡ್ಲುಪೇಟೆ: ಅಕ್ರಮವಾಗಿ ಕೇರಳ ಲಾಟರಿ ಮಾರುತ್ತಿದ್ದ ವ್ಯಕ್ತಿಯೋರ್ವನನ್ನು ತೆರಕಣಾಂಬಿ ಠಾಣೆ ಪೋಲಿಸರು ಬಂಧಿಸಿದ್ದಾರೆ.

ಗುಂಡ್ಲುಪೇಟೆ ಪಟ್ಟಣದ ನಿವಾಸಿ ಸಿಂಗೇಗೌಡ (58)ಬಂಧಿತ ಅರೋಪಿ ಈತ ಕೇರಳದ ಸುಲ್ತಾನ್ ಬತ್ತೇರಿಯಿಂದ ಲಾಟರಿಗಳನ್ನು ತಂದು ತೆರಕಣಾಂಬಿ ಯಲ್ಲಿ ಅಕ್ರಮವಾಗಿ ಮಾರಾಟ ಮಾಡಲು ಯತ್ನಿಸುತ್ತಿದ್ದ ಎಂಬ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿ ಪಟ್ಟಣದ ಪೋಲಿಸ್ ರು ಐವತ್ತು ರೂ ಮುಖ ಬೆಲೆಯ 72 ಲಾಟರಿ ಟಿಕೆಟ್ ಗಳನ್ನು ಮತ್ತು 400ರೂ ಗಳನ್ನು ವಶಕ್ಕೆ ಪಡೆದಿದ್ದಾರೆ ಈ ಸಂಬಂಧ ತೆರಕ ಣಾಂಬಿ ಪೋಲಿಸ್ ಠಾಣೆಯಲ್ಲಿ ಪ್ರಕ ರಣ ದಾಖಲಾಗಿದೆ. ಈ ವೇಳೆ ಸಬ್ ಇನ್ಸ್ಪೆಕ್ಟರ್ ಕೆ ಎಂ ಮಹೇಶ್ ಮುಖ್ಯ ಪೇದೆ ಸಿದ್ದರಾಮು ಪೇದೆಗಳಾದ ಮಹೇಶ್ ರಾಜು. ಬಂಗಾರನಾಯಕ ಇದ್ದರು.

# ಮತಪಟ್ಟಿಯಿಂದ ಬಿಡುವ ಹುನ್ನಾರ

## ಜೀವಿಕ ಸಂಘಟನೆಯ ಉಮೇಶ್ ಆತಂಕ

ಎಚ್.ಡಿ.ಕೋಟೆ: ವಯಸ್ಕರನ್ನು ಮತದಾರರ ಪಟ್ಟಿಗೆ ಸೇರಿಸುವುದು ಮತ್ತು ಮರಣ ಹೊಂದಿದವರನ್ನು ಮತಪಟ್ಟಿಯಿಂದ ಕೈಬಿಡುವುದು ಚುನಾವಣಾ ಆಯೋ ಗದ ಕೆಲಸ. ನುಸುಳುಕೋರರನ್ನ ಮತ್ತು ಅಕ್ರಮ ವಲಸಿಗರನ್ನ ಪತ್ತೆ ಹಚ್ಚವ ನೆಪದಲ್ಲಿ ಇಲ್ಲಿನ ಮೂಲ ನಿವಾಸಿಗಳನ್ನ ಮತದಾರರ ಪಟ್ಟಿಯಿಂದ ಕೈಬಿಟ್ಟು, ಪೌರತ್ವದಿಂದಲೇ ದೂರ ಇಡುವ ವ್ಯವಸ್ಥಿತ ಹುನ್ನಾರ ನಡೆದಿರುವುದು ಆತಂಕ ಮೂಡಿಸುತ್ತದೆ ಎಂದು ಸಂವಿಧಾನ ಸಂರಕ್ಷಣಾ ಪಡೆಯ ವಲಯ ಸಂಯೋ ಜಕ ಉಮೇಶ್ ಬಿ ನೂರಲಕುಪ್ಪೆ ತಿಳಿಸಿದರು.



### ತಹಸೀಲ್ದಾರ್ ಗೆ ಮನವಿ

**ತಾಲೂಕು ಮಟ್ಟದ ಅಂತಿಮ ಪರಿಷ್ಕರಣೆ ಪಟ್ಟಿಯನ್ನು ಬಿಡುಗಡೆ ಮಾಡುವ ಮೊದಲು ಪ್ರತಿ ಗ್ರಾ. ಪಂ ವ್ಯಾಪ್ತಿಯಲ್ಲಿ ಗ್ರಾಮಸಭೆ ನಡೆಸಿ, ಸಿದ್ಧಗೊಳಿಸಿರುವ ಪಟ್ಟಿಯನ್ನು ಸಾರ್ವಜನಿಕರ ಸಮ್ಮುಖದಲ್ಲಿ ಓದಿ ಅಲ್ಲಿ ಅಂಗೀಕೃತವಾದ ಪಟ್ಟಿಯನ್ನ ಆಯೋಗಕ್ಕೆ ಸಲ್ಲಿಸಬೇಕು ಎಂದು ತಿರ್ಮಾನಿಸಿ ತಹಸೀಲ್ದಾರ್ ಗೆ ಮನವಿ ಸಲ್ಲಿಸಲಾಯಿತು.**

### ಕಾರ್ಯಗಾರ

**ಮಾ.14 ರಂದು ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಸಮುದಾಯ ಸಂಘಟಕರಿಗೆ ಸಂವಿಧಾನಕ್ಕಿರುವ ಆತಂಕ, ಸವಾಲುಗಳು ಮತ್ತು ಎಸ್.ಐ. ಆರ್ ಅವಾಂತರಗಳ ಕುರಿತಾಗಿ ಕಾರ್ಯಗಾರ ನಡೆಸಲು ತಿರ್ಮಾನಿಸಲಾಯಿತು.**

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ನಡೆದ ಎಚ್.ಡಿ. ಕೋಟೆ ಹಾಗೂ ಸರಗೂರು ತಾಲೂಕುಗಳ ಸಂವಿಧಾನ ಸಂರಕ್ಷಣಾ ಪಡೆಯ ಸಭೆಯಲ್ಲಿ ಮಾತನಾಡಿ, ಸರಗೂರು ಹಾಗೂ ಕೋಟೆ ತಾಲೂ ಕಿನಲ್ಲಿ ಈಗಾಗಲೇ ಎಸ್.ಐ ಆರ್ ಪರಿಷ್ಕರಣೆ ಪ್ರಕ್ರಿಯೆ ಶೇ.80 ಮ್ಯಾಪಿಂಗ್ ಮಾಡಲಾಗಿದೆ. 2002, 20 24ರ ಮತದಾರರ ಪಟ್ಟಿಯನ್ನು ಆಧರಿಸಿ ಎರಡು ಪಟ್ಟಿಯನ್ನು ಹೊಂದಾಣಿಕೆ ಮಾಡಿ ಮ್ಯಾಪಿಂಗ್ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಮ್ಯಾಪಿಂಗ್ ಮಾಡುವ ವೇಳೆ ಬೂತ್ ಮಟ್ಟದ ಮತಗಟ್ಟೆ ಅಧಿಕಾರಿಗಳು ಕಚೇರಿ, ಮನೆಯಲ್ಲಿ ಕುಳಿತು ಮೊಬೈಲ್ ನಲ್ಲಿ ಮತದಾರರ ಪಟ್ಟಿ ಸಿದ್ದಪ ಡಿಸುತ್ತಿರುವ ಮಾಹಿತಿಯಿದೆ. ಎಸ್.ಐ.ಆರ್ ಪರಿಷ್ಕ ರಣೆಯಿಂದ ಅನಕ್ಷರಸ್ಥರನ್ನು, ಮಹಿಳೆಯರನ್ನು ಮತ್ತು ಎಸ್.ಸಿ, ಎಸ್.ಟಿ, ಹಿಂದುಳಿದ ವರ್ಗಗಳನ್ನ ಮತದಾರರ ಪಟ್ಟಿಯಿಂದ ಕೈಬಿಡುವ ಹುನ್ನಾರವೂ ಅಡಗಿದೆ ಎಂದರು.

ಮತದಾರರ ಪಟ್ಟಿಗೆ ಸೇರಿಸಲು ಕೇಳಿರುವ ದಾಖಲೆಗಳನ್ನು ನೋಡಿದರೆ ಈ ದೇಶದ ಬಹುಸಂಖ್ಯಾತ ಸಮುದಾಯಗಳನ್ನ ಮತದಾನದಿಂದ ಹೊರಗಿಡುವ ಕೆಲಸ ನಡೆಯುತ್ತಿದೆ. ಇದರ ಬಗ್ಗೆ ಎಲ್ಲರೂ ಗಂಭೀರವಾಗಿ ಚಿಂತನೆ ಮಾಡಿ, ಈ ಬಗ್ಗೆ ಜಾಗೃತಿ ಮೂಡಿಸುಬೇಕಿದೆ ಎಂದರು.

ಜೀವಿಕ ಸಂಘಟನೆ ಜಿಲ್ಲಾ ಸಂಚಾಲಕ ಬಸವರಾಜ್ ಮಾತನಾಡಿ, ಸಂವಿಧಾನ ಸಂರಕ್ಷಣೆ ಸಲುವಾಗಿ ಎಲ್ಲಾ ಜಾತಿ, ಜನಾಂಗದ ಮುಖಂಡರನ್ನು ಸೇರಿಸಿ ಪಡೆಯನ್ನು ರಚಿಸಿಲಾಗಿದ್ದು, ಈ ಪಡೆಯ ವತಿಯಿಂದ ಎಲ್ಲಾ ಜಾತಿ, ಜನಾಂಗ ಸಮುದಾಯಗಳ ಹಿತವನ್ನು ಕಾಯುವುದರೊಂದಿಗೆ ಅವರ ಹಕ್ಕುಗಳನ್ನು ರಕ್ಷಿಸುವ ಕೆಲಸವಾಗಬೇಕಿದೆ. ಈ ಹಿನ್ನೆಲೆಯಲ್ಲಿ ನಾವೆಲ್ಲರೂ ಸೇರಿ ಈ ಸಂವಿಧಾನ ಸಂರಕ್ಷಣಾ ಪಡೆಯನ್ನ ಗಟ್ಟಿಯಾಗಿ ಕಟ್ಟುವ ಕೆಲಸ ಮಾಡೋಣ ಎಂದರು.

ಎಸ್.ಐ.ಆರ್ ಬಗ್ಗೆ ನಾವು ಎಲ್ಲ ಸಮುದಾಯಗಳ ಮುಖಂಡರ ಜೊತೆ ಚರ್ಚಿಸಿ, ಎಲ್ಲ ಜನಾಂಗಗಳು ಒಳಗೊಂಡಂತೆ ಕಾರ್ಯಗಾರ ಮತ್ತು ಬೃಹತ್ ಹೋರಾಟ ನಡೆಸಬೇಕು. ಹಳ್ಳಿ ಹಳ್ಳಿಗೂ ಈ ವಿಚಾರವಾಗಿ ಸಭೆಗಳನ್ನು ನಡೆಸಿ ಜನಸಾಮಾನ್ಯರಿಗೆ ತಿಳುವಳಿಕೆ ನೀಡಬೇಕು ಎಂದು ಡಿಸಿಸಿ ಸದಸ್ಯ ಪರಶಿವಮೂರ್ತಿ, ದಸಂಸ ಸಂಚಾಲಕ ಸಣ್ಣಸ್ವಾಮಿ, ಛಲವಾದಿ ಮಹಾ ಸಭಾ ಕಾರ್ಯದರ್ಶಿ ಮೋಹನ್ ರಾಜ್, ಮುಖಂಡ ಕೆಂಪಶೆಟ್ಟಿ, ದಸಂಸ ಗೋವಿಂದರಾಜ್ ಜೀವಿಕ ನಾಗರಾಜ್, ಜೀವಿಕ ಶಿವರಾಜ್, ಐಡಿಯಾ ವೆಂಕಟೇಶ, ವೇಣುಗೋಪಾಲ ಅಭಿಪ್ರಾಯ ವ್ಯಕ್ತಪಡಿಸಿದರು.

ಆದಿವಾಸಿ ಮುಖಂಡ ಪುಟ್ಟಬಸವಯ್ಯ, ದಸಂಸ ಸಣ್ಣಸ್ವಾಮಿ, ಛಲವಾದಿ ಮಹಾಸಭಾ ಮೋಹನ್ ರಾಜ್, ತೆಲಗು ಶೆಟ್ಟಿ ಜನಾಂಗದ ಮುಖಂಡ ಶಿವಪ್ಪಶೆಟ್ಟಿ, ಅಂಬೇಡ್ಕರ್ ಸೇನೆ ಸದಾಶಿವ, ಕೆಂಪಶೆಟ್ಟಿ, ಪ್ರಗತಿಪರ ಒಕ್ಕೂಟದ ಮಂಜು, ಟೌನ್ ಸಂಚಾಲಕ ಚಲುವರಾಜ್, ಜೀವಿಕ ನಾಗರಾಜ್, ಜಯರಾಂ, ಫಾಸ್ಟರ್ ಸುರೇಶ್, ಸಂಚಾಲಕ ಶಿವರಾಜ್, ಜೀವಿಕ ಚಂದ್ರಶೇಖರ ಮೂರ್ತಿ, ಬೀದಿ ಬದಿ ವ್ಯಾಪರಿ ಸಂಘದ ಮುಖಂಡ ಮಂಜುನಾಥ್, ಕೆಡಿಪಿ ಸದಸ್ಯ ಕಾಳಸ್ವಾಮಿ, ದಸಂಸ ಗೋವಿಂದರಾಜ್, ಅಣ್ಣಯ್ಯಸ್ವಾಮಿ, ದೇವರಾಜ್, ಒಕ್ಕೂಟದ ಕಾರ್ಯದರ್ಶಿ ಪ್ರಕಾಶ್ ಬುದ್ದ ಸೇರಿದಂತೆ ಮುಂತಾದವರು ಭಾಗವಹಿಸಿದ್ದರು.

## ಅಕ್ರಮ ಬಿಳಿಕಲ್ಲು ಸಾಗಣೆ: ದಂಡ

ಗುಂಡ್ಲುಪೇಟೆ.:–ನೆರಯ ಕೇರಳ ರಾಜ್ಯಕ್ಕೆ ಪರ್ಮಿಟ್ ಪಡೆಯದೆ ಅಕ್ರಮವಾಗಿ ಬಿಳಿಕಲ್ಲು ಸಾಗಿಸುತ್ತಿದ್ದ ಟಿಪ್ಪರ್ ಲಾರಿಗೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳು ದಂಡ ವಿಧಿಸಿದ್ದಾರೆ.

ತಾಲೂಕಿನ ಗುಂಡ್ಲುಪೇಟೆ ಮಾರ್ಗವಾಗಿ ಅಕ್ರಮವಾಗಿ ಕೇರಳಕ್ಕೆ ಬಿಳಿ ಕಲ್ಲು ಸಾಗಿಸುತ್ತಿದ್ದ. ಕೆ.ಎಲ್29 ವೈ 1447 ನೋಂದಣಿಯ ಲಾರಿಯ ತಪಾಸಣೆ ನಡೆಸಿದ ಅಧಿಕಾರಿಗಳು ಪರ್ಮಿಟ್ ರಹಿತವಾಗಿ ಖನಿಜ ಸಂಪತ್ತು ಸಾಗಿಸುತ್ತಿರುವುದು ದೃಡವಾದ ಹಿನ್ನಲೆ ದಂಡ ವಿಧಿಸಿದ್ದಾರೆ.

ಪ್ರನಿತ್ಯ ಕೇರಳ ರಾಜ್ಯಕ್ಕೆ ನೂರಾರು ಟಿಪ್ಪರ್‌ಗಳು ಖನಿಜ ಸಂಪತ್ತು ತುಂಬಿಕೊಂಡು. ಅಕ್ರಮವಾಗಿ ಸಾಗಣೆ ಮಾಡುತ್ತಿದ್ದರು ಸಹ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಮೌನ ವಹಿಸಿರುವುದಕ್ಕ ಸಾರ್ವಜನಿಕರುಹಾಗೂ ರ?ತ ಸಂಘದ ಮುಖಂಡರು ಅಕ್ರೋಶ ಹೂರ ಹಾಕಿದ್ದಾರೆ.

ಜನ ಸಾಮಾನ್ಯರಿಗೆ ರಸ್ತೆ ಸಂಚಾರ ನಿಯಮದ ಪಾಠ ಮಾಡುವ ಸಾರಿಗೆ ಇಲಾಖೆ ಅಧಿಕಾರಿಗಳು ದೊಡ್ಡ ದೊಡ್ಡ ಟಿಪ್ಪರ್ ಗಳ ಸಹವಾಸಕ್ಕೆ ಹೋಗದಿರುವುದರ ಹಿಂದಿನ ಗುಟ್ಟೇನು ಅಧಿಕಾರಿಗಳೇ ಇದರಲ್ಲಿ ಶಾಮೀಲಾಗಿರಬಹುದು ಎಂದು ಪ್ರಜ್ಞಾವಂತ ನಾಗರೀಕರು ಪ್ರಶ್ನಿಸಿದ್ದಾರೆ.



## ಸಿಲಿಂಡರ್ ಸ್ಫೋಟ: ದಂಪತಿಗೆ ಗಂಭೀರ ಗಾಯ

ಚಾಮರಾಜನಗರ, ಮನೆಯ ಸಿಲಿಂಡರ್ ಸೋರಿಕೆಯಾಗಿ ಬೆಂಕಿ ಅವರಿಸಿ ದಂಪತಿಗೆ ಗಂಭೀರ ಗಾಯಗೊಂಡಿರುವ ಘಟನೆಬ ನಗರದ ರೈಲ್ವೆ ಬಡಾವಣೆಯಲ್ಲಿ ಮಂಗಳವಾರ ಬೆಳಿಗ್ಗೆ ನಡೆದಿದೆ.

ಘಟನೆಯಲ್ಲಿ ಬಡಾವಣೆಯ ನಿವಾಸಿ ಪರಮೇಶ್ ಸಿ, ಪತ್ನಿ ಜ್ಯೋತಿ ಗೆ ಗಾಯಗೊಂಡು ನಗರದ ಜಿಲ್ಲಾಸ್ಪತ್ರೆಯ ತುತ್ತು ಘಟಕದಲ್ಲಿ ಚಿಕಿತ್ಸೆ ಪಡೆದು ನಗರದ ಹೊರವಲಯದಲ್ಲಿರುವ ಸಿಮ್ಸ್ ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆದು ಗಾಯದ ಸ್ವರೂಪ ಹೆಚ್ಚಾದ ಹಿನ್ನಲೆಯಲ್ಲಿ ಹೆಚ್ಚಿನ ಚಿಕಿತ್ಸೆಗೆ ಮೈಸೂರಿಗೆ ಕಳುಹಿಸಲಾಯಿತು. ಮನೆಯ ಗೃಹ ಬಳಕೆ ವಸ್ತುಗಳು ಸಂಪೂರ್ಣ ಬೆಂಕಿಗಾಹುತಿ.ಸ್ವಲ್ಪದರಲ್ಲೇ ಬಾರಿ ಅನಾಹುತ. ತಪ್ಪಿದೆ. ಸ್ಥಳಕ್ಕೆ ಪಟ್ಟಣದ ಪೊಲೀಸರ ಭೇಟಿ ಪರಿಶೀಲನೆ, ಪ್ರಕರಣ ದಾಖಲಿಸಿಕೊಂಡಿದ್ದಾರೆ.



## ಟಿಬೆಟನ್ನರಿಂದ ಬಂಡಾಯ ದಿನಾಚರಣೆ




ಮೈಸೂರು: ಟಿಬೆಟನ್ನರ ರಾಷ್ಟ್ರೀಯ ಬಂಡಾಯ ದಿನದ ವಾರ್ಷಿಕೋತ್ಸವ ಅಂಗವಾಗಿ ನಗರದಲ್ಲಿ ಬೈಲುಕುಪ್ಪೆ, ಹುಣಸೂರು, ಕೊಳ್ಳೇಗಾಲ, ಮೈಸೂರು ಭಾಗದ ಟಿಬೆಟಿನ್ ಯುವ ಮಧ್ಯವರ್ತಿ ಕಾಂಗ್ರೆಸ್ ಹಾಗೂ ಪ್ರಾಂತೀಯ ಟಿಬೆಟಿನ್ ಮಹಿಳಾ ಸಂಘಟನೆ ಮೌನ ಪ್ರತಿಭಟನೆ ನಡೆಸಿದರು.

ನಗರದ ಕೋಟೆ ಆಂಜನೇಯ ದೇವಾಲಯದ ಮುಂಭಾಗದಲ್ಲಿ ಮೇಣದ ಬತ್ತಿ ಹಿಡಿದ ಅನೇಕರು 1959ರ ಮಾರ್ಚ್ 10ರಂದು ಟಿಬೆಟ್ ಇತಿಹಾಸದ ಕರಾಳ ದಿನವಾಗಿದೆ. ಚೀನಾ ದೇಶವೂ ಟಿಬೆಟ್ ಮೇಲೆ ನಡೆಸಿದ ಆಕ್ರಮಣ ಹಾಗೂ ದಬ್ಬಾಳಿಕೆಯ 67ನೇ ವಾರ್ಷಿಕೋತ್ಸವದ ದಿನವಾಗಿದೆ. ಈ ಸಂಘರ್ಷದಲ್ಲಿ ಲಕ್ಷಾಂತರ ಮಂದಿ ಪ್ರಾಣ ಹಾನಿಗೆ ಶಾಂತಿ ಕೋರುವ ದಿನವಾಗಿದೆ ಎಂದರು.

ಇದೇ ವೇಳೆ ಚೀನಾ ಸರ್ಕಾರ 14ನೇ ದಲಾಯಿಲಾಮಾರ ಮಧ್ಯಸ್ಥಿಕೆಯಲ್ಲಿ ಮಾತುಕತೆಗೆ ಮುಂದಾಗಬೇಕು. ಟಿಬೆಟಿನ ಅಸ್ತಿತ್ವದ ಬಗ್ಗೆ ವರದಿ ಮಾಡಲು ಅಂತರಾಷ್ಟ್ರೀಯ ಮಾಧ್ಯಮಕ್ಕೆ ಒಪ್ಪಿಗೆ ಸೂಚಿಸಬೇಕು. ಟಿಬೆಟಿಯನ್ನರ ಭಾವನೆಗಳನ್ನು ಗೌರವಿಸಿ ಗಣಿಗಾರಿಕೆ ಮೂಲಕ ಆಗುತ್ತಿರುವ ಪರಿಸರದ ಮೇಲಿನ ಮಾಲಿನ್ಯ ಕ್ರಮ ನಿಲ್ಲಿಸಬೇಕೆಂಬಿತ್ಯಾದಿ ಮನವಿ ಪುರಸ್ಕರಿಸಲು ಕೋರಿದವು.

# ಮಾ.16ಕ್ಕೆ ಅಹೋರಾತ್ರಿ ಹೋರಾಟ

ಮೈಸೂರು: ಮಡಿವಾಳ ಸಮುದಾಯವನ್ನು ಎಸ್ಸಿಗೆ ಸೇರ್ಪಡೆ ಮಾಡುವಂತೆ ಹಲವಾರು ವರ್ಷಗಳಿಂದ ಹೋರಾಟ ಮಾಡುತ್ತಿದ್ದರೂ ಸರ್ಕಾರ ನಿರ್ಲಕ್ಷಿಸುತ್ತಿದೆ. ಹೀಗಾಗಿ ಮಾ. 16 ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಅಹೋರಾತ್ರಿ ಧರಣಿ ಹಮ್ಮಿಕೊಂಡಿದ್ದು, ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ಜಿಲ್ಲಾ ಮಡಿವಾಳ ಸಮುದಾಯದ ಮುಖಂಡ ಸಿದ್ದನಕೊಪ್ಪಲು ಕುಮಾರ್ ಮನವಿ ಮಾಡಿದರು.

ಜಿಲ್ಲಾ ವೀರ ಮಡಿವಾಳ ಸಂಘದ ವತಿಯಿಂದ ನಗರದಲ್ಲಿ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಡಾ. ಬಸವ ಮಾಚಿದೇವ ಸ್ವಾಮೀಜಿ, ಮುಕ್ತಾನಂದ ಸ್ವಾಮೀಜಿ ಹಾಗೂ ರಾಜ್ಯ ಮಡಿವಾಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಹನುಮಂತಪ್ಪ ಅವರ ನೇತೃತ್ವದಲ್ಲಿ ಈ ಧರಣಿ ನಡೆಯಲಿದೆ. ಸರ್ಕಾರದ ಪರವಾಗಿ ಸಿಎಂ ಇಲ್ಲವೇ ಸಚಿವರು ಭೇಟಿ ನೀಡಿ ಮನವಿ ಸ್ವೀಕರಿಸಿ, ಭರವಸೆ ನೀಡುವವರೆಗೂ ಈ ಅಹೋರಾತ್ರಿ ಧರಣಿ ಮುಂದುವರಿಯಲಿದೆ ಎಂಧರು.

ಶತ ಶತಮಾನಗಳೀಂದ ಸಮುದಾಯ ಇತರೆ ಸಮುದಾಯಗಳ ಸೇವೆ ಮಾಡಿಕೊಂಡು ಬರುತ್ತಿದೆ. ಆದರೆ ಸಂವಿಧಾನ ಬದ್ಧ ಹಕ್ಕುಗಳು, ಸವಲತ್ತು ಸಿಗದೇ




ರಾಜಕೀಯ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕವಾಗಿ ತಿರಾ ಹಿಂದುಳಿದಿದೆ. ಈ ಹಿಂದೆ ನಡೆಸಿದ ಹೋರಾಟದ ಫಲವಾಗಿ ಸಮುದಾಯವನ್ನು ಎಸ್ಸಿಗೆ ಸೇರಿಸುವ ಸಲುವಾಗಿ ರಾಜ್ಯ ಸರ್ಕಾರ ಕುಲಶಾಸ್ತ್ರೀಯ ಅಧ್ಯಯನ ಮಾಡಿತ್ತಲ್ಲದೆ, ರಾಜ್ಯ ಸರ್ಕಾರ ಸಹಾ ಅದನ್ನು ಸ್ವೀಕರಿಸಿದೆ. ಆದರೂ ಯಾವುದೇ ಸರ್ಕಾರ ಕೇಂದ್ರಕ್ಕೆ ವರದಿ ಶಿಫಾರಸಿಗೆ ಕಳುಹಿಸುವ ಕೆಲಸ ಮಾಡಿಲ್ಲ. ಹೀಗಾಗಿ ಈ ನಿಟ್ಟಿನಲ್ಲಿ ಈಗ ಹೋರಾಟ ಹಮ್ಮಿಕೊಳ್ಳಲಾಗುತ್ತಿದೆ ಎಂದರು. ಸಮುದಾಯದ ಮುಖಂಡರಾದ ಸತ್ಯನಾರಾಯಣ್, ಬಿ.ಜಿ. ಕೇಶವ್, ಕೆಂಪಶೆಟ್ಟಿ, ಸ್ವಾಮಿ ಇದ್ದರು.

### ಅಂತರಾಷ್ಟ್ರೀಯ ಮಹಿಳಾ ದಿನ

# ಪ್ರಸ್ತುತ ಎಲ್ಲಾ ಕ್ಷೇತ್ರದಲ್ಲೂ ಸ್ತ್ರೀಯರ ಮುನ್ನಣೆ

ಚಾಮರಾಜನಗರ: ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನ ಹಾಗೂ ಸಾಹಿತ್ಯಕ್ಕೆ ಮಹಿಳೆಯರ ಕೊಡುಗೆಗಳು ಕುರಿತು ಸಭಾಂಗಣದಲ್ಲಿ ಸಂವಾದ ಜರುಗಿತು.

ಕಾರ್ಯಕ್ರಮವನ್ನು ಶಿಕ್ಷಕಿ ಚಂದನ ಉದ್ಘಾಟಿಸಿ ಮಾತನಾಡುತ್ತಾ ಮಹಿಳೆಯರೇ ಹೆಚ್ಚು ಕೊಡುಗೆ ನೀಡುತ್ತಿದ್ದಾರೆ ಯಾರಿಗೂ ಕಡಿಮೆ ಇಲ್ಲದಂತೆ ದುಡಿಯುತ್ತಿದ್ದಾರೆ. ಮಹಿಳೆಯರು ಇಂದು ಎಲ್ಲಾ ಕ್ಷೇತ್ರಗಳಲ್ಲೂ ಮುನ್ನಡೆಯನ್ನು ಸಾಧಿಸಿ ಅಭಿವೃದ್ಧಿಯತ್ತ ಸಾಗುತ್ತಿದ್ದಾರೆ. ಮಹಿಳೆಯರು ಸಮಾಜಕ್ಕೆ ತಮ್ಮ ಸೇವೆಯ ಮೂಲಕ ಅರ್ಪಿಸುವ ಗುಣವನ್ನು ಬೆಳೆಸಿಕೊಂಡಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಕಾರ್ಯಕ್ರಮ ಉದ್ಘಾಟಿಸುವ ಸೌಭಾಗ್ಯ ದೊರೆತಿದೆ . ಎಲ್ಲಾ ಮಹಿಳೆಯರಿಗೂ ಶುಭಾಶಯಗಳು. ಮಹಿಳೆಯರ ಬರವಣಿಗೆಗಳು, ಲೇಖನಗಳು, ಕಾಂದಬರಿಗಳು ಸಂಶೋಧನೆಗಳ ಸಾಹಿತ್ಯ ತುಂಬಾ ಪ್ರಭಾವಶಾಲಿಯಾಗಿ ಇರುತ್ತದೆ ಎಂದರು.

ನಿವೃತ್ತ ಶಿಕ್ಷಕಿ, ಕನ್ನಡ ಸಾಹಿತ್ಯ ಪರಿಷತ್ತಿನ ನಿರ್ದೇಶಕರಾದ ಸರಸ್ವತಿ ಮಾತನಾಡಿ ಅತ್ಯಂತ ಪ್ರಭಾವಶಾಲಿ



ಯಾದ ಶಿಕ್ಷಣ ಕ್ಷೇತ್ರದಲ್ಲಿ ಮಹಿಳೆಯರು ಅಗಾಧ ಪರಿಶ್ರಮದ ಮೂಲಕ ಅಭಿವೃದ್ಧಿಯನ್ನು ಸಾಧಿಸಿದ್ದಾರೆ. ಸಾಹಿತ್ಯ ಕ್ಷೇತ್ರದಲ್ಲೂ ಕೊಡಿಗೆ ವರ್ಣಿಸಲು ಅಸಾಧ್ಯ. ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಹಾಗೂ ಚಿಂತಕರಾದ ಸುರೇಶ್ ಎನ್ ಋಗ್ವೇದಿ ಮಾತನಾಡಿ ಭಾರತೀಯ ಮತ್ತು ಸಮಗ್ರ ದೇಶಿಯ ಸಾಹಿತ್ಯಕ್ಕೆ ಸಾವಿರಾರು ಮಹಿಳೆಯರು ತಮ್ಮ ಸಾಹಿತ್ಯದ ಮೂಲಕ ದೇಶದ ಬೆಳವಣಿಗೆಗೆ ಸಮಾಜದ ಅರಿವಿಗೆ ಕಾರಣರಾಗಿದ್ದಾರೆ . ಮಹಿಳೆಯರಿಲ್ಲದ ಕ್ಷೇತ್ರವೇ ಇಲ್ಲ. ಕನ್ನಡ ಸಾಹಿತ್ಯಕ್ಕೆ ಅನೇಕ ಕವಿಗಳು ಸಾಹಿತಿಗಳು, ವಿಮರ್ಶಕರು, ಚಿಂತಕರು, ಲೇಖಕರು ತಮ್ಮದೇ ಆದ ಸಾಹಿತ್ಯ ನೀಡುವ ಮೂಲಕ ಕನ್ನಡ ಸಾಹಿತ್ಯವನ್ನು ಕಾಲಕಾಲಕ್ಕೆ ಅಭಿವೃದ್ಧಿಪಡಿಸುತ್ತಾ ಪ್ರತಿ ಮನೆಗಳಲ್ಲೂ ಕನ್ನಡದ ವಾತಾವರಣವನ್ನು ಸೃಷ್ಟಿಸುವ ಮೂಲಕ ಸಾಹಿತ್ಯಕ್ಕೆ ತಮ್ಮದೇ ಆದ ನಿರಂತರ ಕೊಡುಗೆಯನ್ನು ನೀಡಿದ್ದಾರೆ. ಅಕ್ಕಮಹಾದೇವಿ ,ವೈದೇಹಿ ,ಶೃಂಗಾರಮ್ಮ ಗಾಯಕರಾದ ಶಿವಲಿಂಗ ಮೂರ್ತಿ, ರವಿಚಂದ್ರ ಪ್ರಸಾದ್ ಗೀತೆಗಳು ಹಾಡಿದರು. ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಬಿಕೆ ಆರಾಧ್ಯ ,ಮಹಿಳಾ ಸಂಘಟನೆಗಳ ಭಾರತಿ ,ಸ್ಫೂರ್ತಿ ಸಿಂಚನ, ಅನ್ನಪೂರ್ಣ, ಮಹೇಶ್ವರಿ, ಪೂರ್ಣಿಮಾ, ಮಹದೇವಮ್ಮ, ಅನಿತಾ, ರಾಘವೇಣಿ ಇದ್ದರು.

# ಡಿಎಸ್ಎಸ್ ನಿಂದ ಮಾ.14ರಂದು ಜನಜಾಗೃತಿ ಸಮಾವೇಶ ಮತ್ತು ಅಭಿನಂದನಾ ಸಮಾರಂಭ



**ಮಂಡ್ಯ:** ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಹಾಗೂ ಡಾ.ಎಂ.ಬಿ.ಶ್ರೀನಿವಾಸ್ ಪ್ರತಿಷ್ಠಾನದ ವತಿಯಿಂದ ಮಾ.14ರಂದು ಬೆಳಿಗ್ಗೆ 11ಗಂಟೆಗೆ ಜನಜಾಗೃತಿ ಸಮಾವೇಶ ಮತ್ತು ಅಭಿನಂದನಾ ಸಮಾರಂಭ ಆಯೋಜಿಸಲಾಗಿದೆ ಎಂದು ಸಮಿತಿಯ ಜಿಲ್ಲಾ ಸಂಚಾಲಕ ಎಂ.ವಿ.ಕೃಷ್ಣ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮದಲ್ಲಿ ಅಂತರರಾಷ್ಟ್ರೀಯ ಬುಕರ್ ಬಹುಮಾನ ವಿಜೇತೆ ಬಾನು ಮುಸ್ತಾಕ್ ಅವರನ್ನು ಶಾಸಕ ಪಿ.ರವಿಕುಮಾರ್ ಗೌಡ ಅಭಿನಂದಿಸುವರು ಎಂದು ಹೇಳಿದರು.

ಕಾರ್ಯಕ್ರಮವನ್ನು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ಉದ್ಘಾಟಿಸುವರು. ಕೆ.ಪಿ.ಮಹಾಲಿಂಗ ಕಲ್ಕುಂದ ರವರ ಕಲ್ಯಾಣದ ಬೆಳಕು ಬಸವಣ್ಣ ಕೃತಿಯನ್ನು ಕೃಷಿ ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಬಿಡುಗಡೆ ಮಾಡುವರು. ಎಂ.ಬಿ.ಶ್ರೀನಿವಾಸ್ ನೆನಪಿನಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಬ್ಯಾಗ್ ವಿತರಣೆ ಮಳಾಡುವರು ಎಂದರು.

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷ ಹಾಗೂ ಶಾಸಕ ಪಿಎಂ.ನರೇಂದ್ರಸ್ವಾಮಿ ಅಧ್ಯಕ್ಷತೆ ವಹಿಸುವರು. ಸೆಸ್ಕ್ ಅಧ್ಯಕ್ಷ ಹಾಗೂ ಶಾಸಕ ಎ.ಬಿ.ರಮೇಶ್ ಬಂಡಿಸಿದ್ದೇಗೌಡ ಹಾಗೂ ಎಸ್ಸಿ,ಎಸ್ಟಿ ಆಯೋಗದ ಅಧ್ಯಕ್ಷ ಡಾ.ಎಲ್. ಮೂರ್ತಿ ಅವರು ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವರು. ಮುಖ್ಯ ಅತಿಥಿಗಳಾಗಿ ಶಾಸಕರಾದ ಕೆ.ಎಂ.ಉದಯ್, ದರ್ಶನ್ ಪುಟ್ಟಣ್ಣಯ್ಯ, ಎಚ್.ಟಿ.ಮಂಜು, ಕೆ.ವಿವೇಕಾನಂದ, ಮಧು ಜಿ.ಮಾದೇಗೌಡ, ಮೈಶುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್, ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗದಮ ಅಧ್ಯಕ್ಷ ನಾಗೇಂದ್ರ, ಮನ್‌ಮುಲ್ ಅಧ್ಯಕ್ಷ ಯು.ಸಿ.ಶಿವಕುಮಾರ್, ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ಉಪಾಧ್ಯಕ್ಷೆ ವಿಜಯಲಕ್ಷ್ಮಿ ರಘುನಂದನ್, ಮುಡಾ ಅಧ್ಯಕ್ಷ ಬಿ.ಪಿ.ಪ್ರಕಾಶ್, ಪಿಇಟಿ ಅಧ್ಯಕ್ಷ ಕೆ.ಎಸ್.ವಿಜಯಾನಂದ, ಎಲ್ಲರೊಳಗೊಂದಾಗು ಮಂಕುತಿಮ್ಮ ಟ್ರಸ್ಟ್‌ನ ಅಧ್ಯಕ್ಷ ಎಂ.ವಿನಯ್‌ಕುಮಾರ್, ಪ್ರಥಮ ದರ್ಜೆ ಗುತ್ತಿಗೆದಾರ ರವಿ ಬೋಜೇಗೌಡ, ಸಮಾಜ ಸೇವಕ ಆರ್‌ಟಿಓ ಮಲ್ಲಿಕಾರ್ಜುನ, ಸರಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ನಾಗೇಶ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು ಎಂದರು.

ಜಿಲ್ಲಾಧಿಕಾರಿ ಡಾ.ಕುಮಾರ, ಜಿ.ಪಂ ಸಿಇಓ ಕೆ.ಆರ್.ನಂದಿನಿ, ಜಿಲ್ಲಾ ಎಸ್ಪಿ ಡಾ.ವಿ.ಜೆ.ಶೋಭರಾಣಿ ಗೌರವ ಉಪಸ್ಥಿತಿ ವಹಿಸಲಿದ್ದು, ಸಾಹಿತಿಗಳು, ದಲಿತ ಮುಖಂಡರು, ಪತ್ರಕರ್ತರು, ಪ್ರಗತಿಪರ ಚಿಂತಕರು, ವಿವಿಧ ಸಂಘಟನೆಗಳ ಮುಖಂಡರು ಕಾರ್ಯಕ್ರಮದಲ್ಲಿ ಭಾಗವಹಿಸುವರು ಎಂದು ಮಾಹಿತಿ ನೀಡಿದರು.

ಗೋಷ್ಠಿಯಲ್ಲಿ ಎಂ.ಶೋಭ ಎಂ.ಬಿ.ಶ್ರೀನಿವಾಸ್, ತಾಲೂಕು ಸಂಚಾಲಕರಾದ ಎಂ.ಕೃಷ್ಣಪ್ಪ, ಸೋಮರಾಜು, ಸಮಾಜ ಮನಸ್ಕರ ವೇದಿಕೆಯ ಮುಕುಂದ ಹಾಲಹಳ್ಳಿ, ಪರಿವರ್ತನ ಸಂಸ್ಥೆಯ ಟಿ.ಡಿ.ನಾಗರಾಜು, ಶಿವಲಿಂಗಯ್ಯ, ಗೋಪಾಲ್ ಇದ್ದರು.

# 30 ಕೋಟಿ ರೂ. ವೆಚ್ಚದಲ್ಲಿ ಒಳಚರಂಡಿ ಕಾಮಗಾರಿ



**ಮಂಡ್ಯ:** ಕೆಯುಐಡಿಎಫ್‌ಸಿ ವತಿಯಿಂದ, ಮಂಡ್ಯ ನಗರಸಭೆ ವ್ಯಾಪ್ತಿಯಲ್ಲಿ ರೂ.30 ಕೋಟಿ ಅಂದಾಜಿನಲ್ಲಿ ಒಳಚರಂಡಿ ಕಾಮಗಾರಿಯನ್ನು ಅನುಷ್ಠಾನಗೊಳಿಸಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ತಿಳಿಸಿದರು.

ನಿನ್ನೆ ನಗರಸಭೆ ಸಭಾಂಗಣದಲ್ಲಿ ನಡೆದ ಸ್ವಚ್ಛ ಭಾರತ ಮಿಷನ್(ನಗರ)–2.0 ಯೋಜನೆ ಮತ್ತು ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಪರಿಸರ ಪರಿಹಾರ ನಿಧಿಯಡಿ ಬಳಸಿದ ನೀರು ನಿರ್ವಹಣೆ ಯೋಜನೆಯಡಿ ಅನುಷ್ಠಾನ ಗೊಳ್ಳುತ್ತಿರುವ ಕಾಮಗಾರಿಗಳ ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಯೋಜನೆಯಡಿ ಮಂಡ್ಯ ನಗರದ ಯತ್ತಗದಹಳ್ಳಿ ರಸ್ತೆಯ ತ್ಯಾಜ್ಯ ನೀರು ಸಂಸ್ಕರಣಾ ಘಟಕದ ಸಾಮರ್ಥ್ಯವನ್ನು 10 ಎಂಎಲ್‌ಡಿ ಗೆ ಹೆಚ್ಚಿಸಿ ಉನ್ನತೀಕರಿಸುವುದು.

ಚಿಕ್ಕೇಗೌಡನದೊಡ್ಡಿ ತ್ಯಾಜ್ಯ ನೀರು ಸಂಸ್ಕರಣಾ ಘಟಕವನ್ನು ಉನ್ನತೀಕರಿಸುವುದು.

ಈಗಾಗಲೇ 2025ರ ಮಾರ್ಚ್‌ನಲ್ಲಿ ಕೆಯುಐಡಿಎಫ್‌ಸಿ ವತಿಯಿಂದ, ಮೇ॥ ನಕ್ಷತ್ರ ಇನ್ಫ್ರಾಸ್ಟ್ರಕ್ಚರ್ ಡೆವಲಪ್ಮೆಂಟ್ ಕಾರ್ಪೋರೇಷನ್, ಬೆಂಗಳೂರು ರವರಿಗೆ ಕಾರ್ಯಾದೇಶ ನೀಡಲಾಗಿರುತ್ತದೆ. ಆಗಸ್ಟ್ 2025ರೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಬೇಕಾಗಿರುತ್ತದೆ.

ಜಿಲ್ಲಾಧಿಕಾರಿಗಳು ಈವರೆವಿಗೂ ಆಗಿರುವ ಕಾಮಗಾರಿಯ ಪ್ರಗತಿಯು ನಿಗಧಿಪಡಿಸಿರುವ ಪ್ರಗತಿಗಿಂತ ಕಡಿಮೆ ಇರುವ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿ, ಕಾಮಗಾರಿಯ ಅನುಷ್ಠಾನವನ್ನು ತ್ವರಿತಗೊಳಿಸಲು ಹಾಗೂ ನಿಗಧಿಪಡಿಸಿರುವ ಕಾಲಾವಧಿಯಲ್ಲಿಯೇ ಪೂರ್ಣಗೊಳಿಸಲು ಸೂಚಿಸಿದರು.

ಕೆ.ಯು.ಐ.ಡಿ.ಎಫ್.ಸಿ, ಜಿಲ್ಲಾ ನಗರಾಭಿವೃದ್ಧಿ ಕೋಶ ಹಾಗೂ ಮಂಡ್ಯ ನಗರಸಭೆಯ ಅಧಿಕಾರಿಗಳಿಗೆ ಕಾಮಗಾರಿಯನ್ನು ಆಗಾಗ್ಗೆ ಪರಿಶೀಲಿಸಿ ವರದಿ ಸಲ್ಲಿಸುವಂತೆ ಅಧಿಕಾರಿಗಳಿಗೆ ಆದೇಶಿಸಿದರು.

ಅಮೃತ್ 2.0 ಯೋಜನೆಯಡಿ ಗುತ್ತಲು ಕೆರೆಯ ಪುನರುಜ್ಜೀವನಕ್ಕಾಗಿ ಮಂಜೂರಾಗಿರುವ ರೂ.4.00 ಕೋಟಿಗಳಿಗೆ ಕ್ರಿಯಾಯೋಜನೆಯನ್ನು ರೂಪಿಸಲು, ಸದರಿ ಕ್ರಿಯಾಯೋಜನೆಯಡಿ ಗುತ್ತಲು ಕೆರೆಯ ಮೇಲ್ಭಾಗಕ್ಕೆ (ಉತ್ತರಕ್ಕೆ) ಬರುವ ಪ್ರದೇಶಗಳ ಕೊಳಚೆ ನೀರು ಗುತ್ತಲು ಕೆರೆಗೆ ಸೇರದಂತೆ ತ್ಯಾಜ್ಯ ನೀರು ಸಂಸ್ಕರಣಾ ಘಟಕಕ್ಕೆ ಸೇರಿಸಲು ಡಿಪಿಆರ್ ತಯಾರಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಈ ಎಲ್ಲಾ ಯೋಜನೆಗಳು ಕಾರ್ಯಗತಗೊಂಡ ನಂತರ ಸಂಪೂರ್ಣ ತ್ಯಾಜ್ಯ ನೀರನ್ನು ಎಸ್.ಟಿ.ಪಿಗೆ ಸೇರಿಸಿ ಸಂಸ್ಕರಣೆ ಮಾಡಿದ ನಂತರ ಹಾಗೂ ಮಾಲೀನ್ಯ ನಿಯಂತ್ರಣ ಮಂಡಳಿ ಮಾನದಂಡದಂತೆ ಶುದ್ಧಿಕರಿಸಿ ಕೆರೆಗೆ ಬಿಡಲಾಗುವುದು ಇದರಿಂದ, ಕೆರೆಯ ನೀರು ಯಾವುದೇ ರೀತಿ ಮಲಿನವಾಗದಂತೆ ಕ್ರಮವಹಿಸಲಾಗುತ್ತಿದೆ ಎಂದು ತಿಳಿಸಿದರು.

ಸಭೆಯಲ್ಲಿ ನಗರಾಭಿವೃದ್ಧಿ ಕೋಶ ಯೋಜನಾ ನಿರ್ದೇಶಕರಾದ ಟಿ. ಎನ್ ನರಸಿಂಹಮೂರ್ತಿ, ನಗರಾಭಿವೃದ್ಧಿ ಪೌರಾಯುಕ್ತರು ಪಂಪಶ್ರೀ, ಕಾರ್ಯಪಾಲಕ ಅಭಿಯಂತರರು ಪ್ರತಾಪ್ ಉಪಸ್ಥಿತರಿದ್ದರು

# ಮಂಡ್ಯ ನಗರಸಭೆ: 123.62 ಕೋಟಿ ರೂ. ವೆಚ್ಚದ ಆಯವ್ಯಯ ಮಂಡನೆ

**ಮಂಡ್ಯ:** ನಗರಸಭೆಯ 2025–226ನೇ ಸಾಲಿನ ಪರಿಷ್ಕೃತ ಹಾಗೂ 2026–27ನೇ ಸಾಲಿನ ಅಂದಾಜು 123.62 ಕೋಟಿ ರೂ.ವೆಚ್ಚದ ಆಯವ್ಯಯ ವನ್ನು ಆಡಳಿತಾಧಿಕಾರಿಯೂ ಆದ ಜಿಲ್ಲಾಧಿಕಾರಿ ಡಾ. ಕುಮಾರ ಅವರು ಮಂಡಿಸಿದರು.

ನಗರಸಭೆಯ ಧರಣಪ್ಪ ಸಭಾಂಗಣದಲ್ಲಿ ಸೋಮವಾರ ನಡೆದ ಆಯವ್ಯಯ ಮಂಡನೆ ಸಭೆಯಲ್ಲಿ 2026–27ನೇ ಸಾಲಿಗೆ ತಮ್ಮ ಚೊಚ್ಚಲ ಬಜೆಟ್ ಮಂಡಿಸಿದ ಆಡಳಿತಾಧಿಕಾರಿ ಡಾ. ಕುಮಾರ ಅವರು, ಒಟ್ಟು 123,62,52,848 ಕೋಟಿ ರೂ.ಗಳ ಬಜೆಟ್ ಮಂಡಿಸಿ, 2,51,87,848 ರೂ. ಉಳಿತಾಯ ಬಜೆಟ್ ಮಂಡಿಸಿದಾಗ ಶಾಸಕ ಪಿ.ರವಿಕುಮಾರ್‍ಗೌಡ ಸೇರಿದಂತೆ ಎಲ್ಲ ಅಧಿಕಾರಿಗಳು ಮೇಜು ಕುಟ್ಟಿ ಅಭಿನಂದಿಸಿದರು.

ಆಯವ್ಯಯದ ಸಾರಾಂಶ: ಮಂಡ್ಯ ನಗರಸಭೆಯ 2025–26ನೇ ಸಾಲಿನ ಆರಂಭಿಕ ಶಿಲ್ಕು 22,83,29,425 ರೂ. ಹಾಗೂ 2026–27ನೇ ಸಾಲಿಗೆ ನಗರಸಭೆಯ ಸ್ವಂತ ಸಂಪನ್ಮೂಲಗಳಿಂದ ನಿರೀಕ್ಷಿತ ಆದಾಯ 29.32,07,000 ರೂ.,ಸರ್ಕಾರಕ್ಕೆ ಪಾವತಿಸ ಬೇಕಾದ ತೆರಿಗೆಗಳು ಮತ್ತು ಕರಗಳ ಬಾಬ್ತು 10,56,60,000 ರೂ. ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ನಿರೀಕ್ಷಿತ ಅನುದಾನಗಳು 68,10,23,000 ರೂ. ಸೇರಿ ಒಟ್ಟು 123,62,52,848 ರೂ.ಗಳ ಬಜೆಟ್‌ನಲ್ಲಿ 2026–27ನೇ ಸಾಲಿಗೆ ನೌಕರರ ವೇತನ, ನಿರ್ವಹಣಾ ವೆಚ್ಚಗಳು, ಬಂಡವಾಳ ಕಾಮಗಾರಿಗಳು, ಕಲ್ಯಾಣ ಕಾರ್ಯಕ್ರಮಗಳು ಮತ್ತು ಸರ್ಕಾರಕ್ಕೆ ಪಾವತಿಸಬೇಕಾದ ಕರಗಳು ಹಾಗೂ ಶಾಸನಬದ್ಧ ತೆರಿಗೆಗಳು ಸೇರಿದಂತೆ ಒಟ್ಟಾರೆ ಖರ್ಚು ಕಳೆದು 2,51,87,848 ರೂ. ಗಳ ಉಳಿತಾಯ ಬಜೆಟ್ ಮಂಡಿಸಿದರು.



ಪ್ರಮುಖ ಆದಾಯ ನಿರೀಕ್ಷೆಗಳು: ತೆರಿಗೆ ಆದಾಯಗಳು: ಆಸ್ತಿ ತೆರಿಗೆ, ದಂಡ, ಕರಗಳ ಸಂಗ್ರಹಣ ಶುಲ್ಕದಿಂದ 2090 ಲಕ್ಷ. ತೆರಿಗೆಯೇತರ ಆದಾಯಗಳು: ಅಭಿವೃದ್ಧಿ ಮತ್ತು ಬೆಟರ್ಮೆಂಟ್ ಶುಲ್ಕಗಳ ಸಂಗ್ರಹಣೆಯಿಂದ 155 ಲಕ್ಷ, ಘನ ತ್ಯಾಜ್ಯ ವಸ್ತು ನಿರ್ವಹಣೆ ಶುಲ್ಕ ಸಂಗ್ರಹಣೆಯಿಂದ 200 ಲಕ್ಷ, ಮಳಿಗೆಗಳ ಠೇವಣಿ, ಬಾಡಿಗೆ ಮತ್ತು ದಂಡ ವಸೂಲಿ ಸಂಗ್ರಹಣೆಯಿಂದ 129 ಲಕ್ಷ, ಒಳಚರಂಡಿ ಸಂಪರ್ಕ ಮತ್ತು ಬಳಕೆದಾರರ ಶುಲ್ಕ ಸಂಗ್ರಹಣೆಯಿಂದ 46.50 ಲಕ್ಷ, ಉದ್ದಿಮೆ ಪರವಾನಗಿ ಶುಲ್ಕ ಮತ್ತು ಉದ್ದಿಮೆ ಪರವಾನಗಿ ಮೇಲಿನ ದಂಡ ಸಂಗ್ರಹಣೆಯಿಂದ 52 ಲಕ್ಷ, ಅನುಪಯುಕ್ತ ವಸ್ತುಗಳ ಮಾರಾಟದಿಂದ 26 ಲಕ್ಷ, ರಸ್ತೆ ಅಗೆತ ಮತ್ತು ಪುನಃಸ್ಥಾಪನೆ ಶುಲ್ಕ ಸಂಗ್ರಹಣೆಯಿಂದ 52 ಲಕ್ಷ, ಖಾತಾ ಬದಲಾವಣೆ ಶುಲ್ಕಗಳ ಸಂಗ್ರಹಣೆಯಿಂದ 32 ಲಕ್ಷ, ನಗರಸಭೆ ವಸತಿ ಗೃಹಗಳು ಹಾಗೂ ನಗರಸಭೆ ಹಳೇ ಕಚೇರಿ ಕಟ್ಟಡ ಬಾಡಿಗೆಯಿಂದ 25 ಲಕ್ಷ. ಕಟ್ಟಡ ಪರವಾನಗಿ ಶುಲ್ಕ ಸಂಗ್ರಹಣೆಯಿಂದ 34.15 ಲಕ್ಷ, ಇತರೆ ಪ್ರಮಾಣ ಪತ್ರಗಳು, ದಂಡ ಹಾಗೂ ಶುಲ್ಕಗಳಿಂದ 27.20 ಲಕ್ಷ, ರಾಜ್ಯ ಸರ್ಕಾರದಿಂದ ಸಂಗ್ರಹಿಸಲ್ಪಟ್ಟ ಸ್ಟಾ?ಯಂಪ್ ಶುಲ್ಕದ ಸರ್ ಚಾರ್ಜ್ನಿಂದ 15 ಲಕ್ಷ, ಬ್ಯಾಂಕ್ ಖಾತೆಗಳ ಮೇಲಿನ ಬಡ್ಡಿ ಸಂಗ್ರಹಣೆಯಿಂದ 35 ಲಕ್ಷ, ಜಾಹಿರಾತು ಶುಲ್ಕದಿಂದ 5 ಲಕ್ಷ, ಟ್ಯಾಕ್ಸಿ ನಿಲ್ದಾಣ, ಖಾಸಗಿ ಬಸ್ ನಿಲ್ದಾಣ, ನೆಲ ಬಾಡಿಗೆ, ಕಸಾಯಿ ಖಾನೆ ಶುಲ್ಕ ಸಂಗ್ರಹಣೆಯಿಂದ 5.75 ಲಕ್ಷ, ಸಾರ್ವಜನಿಕ ಶೌಚಾಲಯಗಳ ನಿರ್ವಹಣೆ ಶುಲ್ಕದಿಂದ 2.47 ಲಕ್ಷ. ಇದಲ್ಲದೆ, ರಾಜ್ಯ ಸರ್ಕಾರದಿಂದ 49,19,68,000 ಹಾಗೂ ಕೇಂದ್ರ ಸರ್ಕಾರದಿಂದ 18,90,54,000 ರೂ. ನಿರೀಕ್ಷಿತ ಅನುದಾನ ಸೇರಿದೆ ಎಂದರು.

ಪ್ರಮುಖ ವೆಚ್ಚಗಳು: ನಗರಸಭೆ ವ್ಯಾಪ್ತಿಯಲ್ಲಿ ಇತರೆ ಇಲಾಖೆಗಳ ವತಿಯಿಂದ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದ್ದು, ಮುಖ್ಯಮಂತ್ರಿಗಳ ಮೂಲ ಸೌಕರ್ಯಗಳ ಅಭಿವೃದ್ಧಿ ಅನುದಾನದಲ್ಲಿ 50 ಕೋಟಿ ರೂ. ಮಂಡ್ಯ ವಿಧಾನಸಭಾ ಕ್ಷೇತ್ರಕ್ಕೆ ಮಂಜೂರಾಗಿದ್ದು, ಈ ಹಣದಲ್ಲಿ ನಗರಸಭೆಗೆ 10 ಕೋಟಿ ರೂ.ಗಳನ್ನು ಮಂಡ್ಯ ನಗರದ ಪ್ರಮುಖ ವೃತ್ತಗಳನ್ನು ಆಧುನಿಕ ಮಾದರಿಯಲ್ಲಿ ಅಭಿವೃದ್ಧಿಪಡಿಸಲು, ಮಂಡ್ಯ ನಗರದ ಬೀದಿ ಬದಿ ವ್ಯಾಪಾರಿಗಳಿಗೆ ಮಳಿಗೆಗಳನ್ನು ನಿರ್ಮಾಣ, ರಸ್ತೆಗಳ ಅಭಿವೃದ್ಧಿ ಹಾಗೂ ಕನ್ನಡ ಭವನ ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ ಎಂದು ವಿವರಿಸಿದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರ ರಸ್ತೆಯಲ್ಲಿ ಫುಟ್‌ಪಾತ್ ವ್ಯಾಪಾರಿಗಳಿಗೆ 50 ಲಕ್ಷ ವೆಚ್ಚದಲ್ಲಿ ವ್ಯಾಪಾರ ಮಳಿಗೆಗಳ ನಿರ್ಮಾಣ. ವಾರ್ಡ್ ನಂ.5ರ ಅಡ್ಡ ರಸ್ತೆಗಳ ಅಭಿವೃದ್ಧಿಗೆ 50 ಲಕ್ಷ, ವಾರ್ಡ್ ನಂ. 8ರ ಅಭಿವೃದ್ಧಿಗೆ 50 ಲಕ್ಷ, ವಾರ್ಡ್ ನಂ.9, 19, 12, ಬೆಸಗರಹಳ್ಳಿ ರಾಮಣ್ಣ ವೃತ್ತದಿಂದ ಎಂಡಿಸಿವರೆಗೆ ರಸ್ತೆ ಅಭಿವೃದ್ಧಿ, ಹೊಸಹಳ್ಳಿ ವೆಂಕಟೇಶ್ವರ್ ದೇವಸ್ಥಾನದಿಂದ ಕಾವೇರಿ ನಗರಕ್ಕೆ ಹೋಗುವ ರಸ್ತೆ ಅಭಿವೃದ್ಧಿ, ವಾರ್ಡ್ ನಂ. 26, 15, 19, 25ರಲ್ಲಿ ರಸ್ತೆಗಳು ಹಾಗೂ ಉದ್ಯಾನಗಳ ಅಭಿವೃದ್ಧಿಗೆ 4.28 ಕೋಟಿ ರೂ.ಗಳು, ಷುಗರ್ ಫ್ಯಾಕ್ಟರ್ ವೃತ್ತದ ಅಭಿವೃದ್ಧಿಗೆ 145.64 ಲಕ್ಷ, ಹೊಸಹಳ್ಳಿ ವೃತ್ತದ ಅಭಿವೃದ್ಧಿಗೆ 147.75 ಲಕ್ಷ, ಹೊಳಲು ವೃತ್ತದ ಅಭಿವೃದ್ಧಿಗೆ 48 ಲಕ್ಷ, ಜಯಚಾಮ ರಾಜೇಂದ್ರ ಒಡೆಯರ್ ವೃತ್ತದ ಅಭಿವೃದ್ಧಿಗೆ 45 ಲಕ್ಷ ರೂ. ಮೀಸಲಿರಿಸಲಾಗಿದೆ ಎಂದು ವಿವರಿಸಿದರು. ಸಭೆಯಲ್ಲಿ ಶಾಸಕ ಪಿ.ರವಿಕುಮಾರ್‍ಗೌಡ, ಪೌರಾಯುಕ್ತರಾದ ಯು.ಪಿ. ಪಂಪಾಶ್ರೀ, ಜಿಲ್ಲಾ ನಗರಾಭಿವೃದ್ಧಿ ಕೋಶ ಯೋಜನಾ ನಿರ್ದೇಶಕ ಟಿ.ಎನ್.ನರಸಿಂಹಮೂರ್ತಿ ಭಾಗವಹಿಸಿದ್ದರು.

# ‘ಆನಂದದ ಅನುಭೂತಿ’ ಶಿಬಿರ

**ಮಂಡ್ಯ:** ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ 45ನೇ ವಾರ್ಷಿಕೋತ್ಸವದ ಅಂಗವಾಗಿ ಮಾ.12ರಿಂದ 15ರವರೆಗೆ ‘ಆನಂದದ ಅನುಭೂತಿ’ ಶಿಬಿರವನ್ನು ನಗರದ ಶ್ರೀ ಯೋಗಿನಾರಾಯಣ ಸಮುದಾಯ ಭವನದಲ್ಲಿ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಆಶ್ರಮದ ಶಿಕ್ಷಕ ತ್ಯಾಗರಾಜ ತಿಳಿಸಿದರು.

ಸುದ್ದಿಗೋಷ್ಠಿ ಮಾತನಾಡಿದ ಅವರು, ಶ್ರೀ ರವಿಶಂಕರ ಗುರುದೇವ ಅವರು ಪ್ರಪಂಚದ 186 ದೇಶಗಳಲ್ಲಿ ಯಾವುದೇ ಜಾತಿ, ಮತ ಬೇದವಿಲ್ಲದೇ ಯೋಗ, ಪ್ರಾಣಾಯಾಮ, ಧ್ಯಾನ, ಸುದರ್ಶನಕ್ರಿಯಾ ಹಾಗೂ ಶಾಂತಿ ಸಂದೇಶದ ಮೂಲಕ ಒತ್ತಡ ಮುಕ್ತ, ಹಿಂಸಾಯುಕ್ತ ಸಮಾಜ ಹಾಗೂ ಎಲ್ಲರಲ್ಲೂ ಮುಗುಳ್ನಗೆ ತರಿಸುವ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಿದರು.

ಈ ನಿಟ್ಟಿನಲ್ಲಿ ಕರ್ನಾಟಕದ ಪ್ರತಿ ಮನೆ ಮನೆಗೆ ಸುಜ್ಞಾನ ನೀಡುವ ಸಲುವಾಗಿ ಮಾ.12ರಿಂದ 15ರವರೆಗೆ ಬೆಳಗ್ಗೆ 6ರಿಂದ 8ರವರೆಗೆ ಹಾಗೂ ಸಂಜೆ 6ರಿಂದ 8 ರವರೆಗೆ ಆನಂದದ ಅನುಭುತಿ ಶಿಬಿರದ ಮೂಲಕ ಪ್ರತಿನಿತ್ಯ ಸುದರ್ಶನ ಕ್ರಿಯೆ ಅಭ್ಯಾಸ ನೀಡಲಾಗುವುದು. ಇದರಿಂದ ಒತ್ತಡ, ಆತಂಕ, ಭಯ, ಖಿನ್ನತೆ, ರಕ್ತದೊತ್ತಡ, ಅಸ್ತಮ, ಸಕ್ಕರೆ ಖಾಯಿಲೆ ಸೇರಿದಂತೆ ಹಲವು ತೊಂದರೆಗಳಿಗೆ ನಿವಾರಣೆ ದೊರೆಯಲಿದೆ ಎಂದರು.

ಶಿಬಿರಕ್ಕೂ ಮುನ್ನ ಮಾ.11ರಂದು ಸಂಜೆ 6ರಿಂದ 7ರವರೆಗೆ ಯೋಗಿನಾರಾಯಣ ಸಮುದಾಯ ಭವನದಲ್ಲಿ ಉಚಿತ ಪರಿಚಯ ಭಾಷಣ ನಡೆಯಲಿದೆ ಎಂದು ಮಾಹಿತಿ ನೀಡಿದರು.

ಗೋಷ್ಠಿಯಲ್ಲಿ ಯೋಗ ಶಿಕ್ಷಕ ಸುಧಾಕರ್, ಸ್ವಯಂ ಸೇವಕರಾದ ಪದ್ಮ ಶ್ರೀನಿವಾಸ್, ಶ್ರೀಲಕ್ಷ್ಮಿ ಇದ್ದರು.




# ಆನೆ–ಮಾನವ ಸಂಘರ್ಷ ಶಾಶ್ವತ ಪರಿಹಾಕ್ಕೆ ಯತ್ನ–ಖಂಡ್ರೆ

## ನಾಗರಹೊಳೆ ವಿಭಾಗಕ್ಕೆ 20 ಕಿ.ಮೀ. ರೈಲ್ವೆ ಬ್ಯಾರಿಕೇಡ್ ಮಂಜೂರು: ಈಶ್ವರ ಖಂಡ್ರೆ

**ಬೆಂಗಳೂರು (ವಿಧಾನಪರಿಷತ್)**
ಆನೆ–ಮಾನವ ಸಂಘರ್ಷ ನಿಯಂತ್ರಿಸಲು 2025–26ನೇ ಸಾಲಿನಲ್ಲಿ ಮಡಿಕೇರಿ ವಿಭಾಗಕ್ಕೆ 7 ಕಿ.ಮೀ ಮತ್ತು ನಾಗರಹೊಳೆ ವಿಭಾಗಕ್ಕೆ 20 ಕಿ.ಮೀ. ರೈಲು ಹಳಿ ತಡೆಗೋಡೆ ಮಂಜೂರಾಗಿದ್ದು, ಶೀಘ್ರ ಕಾಮಗಾರಿ ಆರಂಭಿಸಲಾಗುವುದು ಎಂದು ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ವಿಧಾನ ಪರಿಷತ್ತ್‌ನಲ್ಲಿ ಮಂಗಳವಾರ ತಿಳಿಸಿದ್ದಾರೆ.

ಶೂನ್ಯವೇಳೆಯಲ್ಲಿ ಸುಜಾ ಕುಶಾಲಪ್ಪ ಅವರ ಪ್ರಸ್ತಾಪಕ್ಕೆ ಪ್ರತಿಕ್ರಿಯಿಸಿದ ಸಚಿವರು, ಫೆ.28ರಂದು ಕಾಡಿನಂಚಿನ ನಿವಾಸಿ 17 ವರ್ಷದ ಬಾಲಕಿ ಆನೆ ದಾಳಿಯಿಂದ ಮೃತಪಟ್ಟಿದ್ದರೆ, ಮಾ.9ರಂದು ಕಾಡಿನೊಳಗೇ ವಾಸಿಸುತ್ತಿದ್ದ 55 ವರ್ಷದ ಬುಡಕಟ್ಟು ಮಹಿಳೆ ಸಾವಿಗೀಡಾಗಿದ್ದಾರೆ ಇದು ಅತ್ಯಂತ ನೋವಿನ ಸಂಗತಿ ಎಂದರು.



ಜೀವ ಅತ್ಯಂತ ಅಮೂಲ್ಯವಾದ್ದು, ಇದಕ್ಕೆ ಬೆಲೆ ಕಟ್ಟಲು ಸಾಧ್ಯವೇ ಇಲ್ಲ. ಅರಣ್ಯ ಇಲಾಖೆ ಮಾನವ–ವನ್ಯಜೀವಿ ಸಂಘರ್ಷ ತಡೆಯಲು ಎಲ್ಲ ಕ್ರಮಗಳನ್ನು ಕೈಗೊಳ್ಳುತ್ತಿದೆ. ಆನೆ ನಿಗ್ರಹ ಕಂದಕ, ಸೌರ ವಿದ್ಯುತ್ ಬೇಲಿ ನಿರ್ವಹಣೆ ಮಾಡಲಾಗುತ್ತಿದೆ. 2 ಆನೆ ಕಾರ್ಯಪಡೆ



ಕಾರ್ಯನಿರ್ವಹಿಸುತ್ತಿದೆ. ಈಗ 2 ಪುಂಡಾನೆಗಳ ಸೆರೆಗೆ ಮುಖ್ಯ ವನ್ಯಜೀವಿ ಪರಿಪಾಲಕರು ಆದೇಶ ನೀಡಿದ್ದಾರೆ ಎಂದು ತಿಳಿಸಿದರು.

ಈ ಎರಡೂ ಪ್ರಕರಣದಲ್ಲಿ ಈಗಾಗಲೇ 5 ಲಕ್ಷ ರೂ. ಪರಿಹಾರವನ್ನು ಮೃತರ ಹತ್ತಿರದ ಬಂಧುಗಳಿಗೆ ವಿತರಿಸಲಾಗಿದ್ದು, ವಾರದೊಳಗೆ ಉಳಿಕೆ ತಲಾ 15 ಲಕ್ಷ ರೂ. ಪರಿಹಾರ ನೀಡಲಾಗುವುದು ಎಂದು ತಿಳಿಸಿದರು.

ಆನೆ–ಮಾನವ ಸಂಘರ್ಷ ನಿಯಂತ್ರಿಸಲು ಶಾಶ್ವತ ಪರಿಹಾರ ಕ್ರಮಗಳ ಬಗ್ಗೆಯೂ ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆ ಎಂದು ಈಶ್ವರ ಖಂಡ್ರೆ ತಿಳಿಸಿದರು.

# ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯ



**ಮೈಸೂರು:** 66/11 ಕೆ.ವಿ ಜ್ಯೋತಿನಗರ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಹೊಮ್ಮುವ 11 ಕೆ.ವಿ. ರಾಘವೇಂದ್ರ ಫೀಡರ್ ವ್ಯಾಪ್ತಿಯಲ್ಲಿ ಭೂಗತ ಕೇಬಲ್ ಅಳವಡಿಕೆ ಕಾಮಗಾರಿ ಕೆಲಸ ನಿಮಿತ್ತ ಮಾರ್ಚ್ 12 ರಂದು ಬೆಳಿಗ್ಗೆ 9:00 ರಿಂದ ಸಂಜೆ 6:00 ಘಂಟೆಯವರೆಗೆ ಈ ಸಂಬಂಧ ಕೆಳಕಂಡ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

**ವಿದ್ಯುತ್ ವ್ಯತ್ಯಯವಾಗಲಿರುವ ಮುಖ್ಯ ಪ್ರದೇಶಗಳು:** ಜ್ಯೋತಿನಗರ ಸ್ಕೂಲ್ ರಸ್ತೆ, ಜಿ.ಎಸ್.ಟಿ ಕ್ವಾಟ್ರಸ್, ರಾಘವೇಂದ್ರ ನಗರ, ರಾಘವೇಂದ್ರ ಬಡಾವಣೆ, ರಾಘವೇಂದ್ರ ನರ್ಮ್ ಬಡಾವಣೆ, ಶಕ್ತಿ ಗಣಪತಿ ದೇವಸ್ಥಾನದ ಹಿಂಭಾಗ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಚಾ.ವಿ.ಸ.ನಿ.ನಿ. ನ.ರಾ.ಮೊಹಲ್ಲಾ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗ್ಯಾಸ್ ಬೆಲೆ ಏರಿಕೆ ವಿರುದ್ದ ಮಂಡ್ಯದಲ್ಲಿ ಕಾಂಗ್ರೆಸ್ ಪ್ರತಿಭಟನೆ

**ಮಂಡ್ಯ :** ಕೇಂದ್ರ ಸರ್ಕಾರವು ಅಡುಗೆ ಅನಿಲ ಸಿಲಿಂಡರ್ ದರವನ್ನು ಪ್ರತಿ ಸಿಲಿಂಡರ್‌ಗೆ 60 ರೂ. ಏರಿಕೆ ಮಾಡಿದ್ದನ್ನು ಖಂಡಿಸಿ ಮಂಡ್ಯ ಜಿಲ್ಲಾ ಕಾಂಗ್ರೆಸ್ ಸಮಿತಿ ಹಾಗೂ ಮಹಿಳಾ ಕಾಂಗ್ರೆಸ್ ಕಾರ್ಯ ಕರ್ತೆಯರು ಮಂಡ್ಯ ನಗರದ ಸರ್. ಎಂ. ವಿಶ್ವೇಶ್ವರಯ್ಯ ಪ್ರತಿಮೆ ಮುಂಭಾಗ ಪ್ರತಿಭಟನೆ ನಡೆಸಿದರು.

ಪ್ರತಿಭಟನಾಕಾರರು ಕೇಂದ್ರ ಸರ್ಕಾರದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿ, ತೊಲಗಲಿ ತೊಲಗಲಿ ಕೇಂದ್ರ ಬಿಜೆಪಿ ಸರ್ಕಾರ ತೊಲಗಲಿ ಎಂದು ಘೋಷಣೆ ಗಳನ್ನು ಕೂಗಿದರು.

ಮಂಡ್ಯ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ. ಗಂಗಾಧರ್ ಮಾತನಾಡಿ,ಕೇಂದ್ರದ ನರೇಂದ್ರ ಮೋದಿ ಸರ್ಕಾರವು ಎಲ್ಲಾ ಕ್ಷೇತ್ರಗಳಲ್ಲಿ ಬೆಲೆಗಳನ್ನು ಏರಿಸಿ ಬಡ ಜನತೆಗೆ ಅತ್ಯಂತ ಕಷ್ಟ ಕಾಲದ ಆರ್ಥಿಕ ದುಃಸ್ಥಿತಿಗೆ ತಳ್ಳಿದೆ. ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ಅವಧಿಯಲ್ಲಿ ಕೇವಲ 400 ರೂಪಾಯಿ ಇದ್ದ ಎಲ್‌ಪಿಜಿ ಗ್ಯಾಸ್ ಸಿಲಿಂಡರ್ ಬೆಲೆಯನ್ನು ಏಕಾಏಕಿ 1100 ಏರಿಸಿದ್ದನ್ನು ನೆನಪಿಸಿಕೊಳ್ಳಬಹುದು. ಅದನ್ನು ಪ್ರತಿಭಟಿಸಿ ಕಾಂಗ್ರೆಸ್ ದೇಶದ ಉದ್ದಗಲಕ್ಕೂ ಬೀದಿಗಿಳಿದು ಪ್ರತಿಭಟಿಸಿದರ ಪರಿಣಾಮ ಸಿಲಿಂಡರ್ ಬೆಲೆಯಲ್ಲಿ 200 ಕಡಿಮೆ ಮಾಡುವ ನಾಟಕವಾಡಿತ್ತು. ಆದರೆ, ಈಗ ಮತ್ತೆ ವಿನಾಕಾರಣ ಪ್ರತಿ ಸಿಲೆಂಡರ್ ಬೆಲೆಯಲ್ಲಿ ಒಮ್ಮೆಲೇ 60 ಹೆಚ್ಚಿಸಿ ಬಡಜನತೆಯ ಮೇಲೆ ಅನ್ಯಾಯದ ಆರ್ಥಿಕ ಹೊರೆಯನ್ನು ಹೇರಿದೆ. ಕೂಡಲೇ ಕೇಂದ್ರ ಸರ್ಕಾರ ಗ್ಯಾಸ್ ಸಿಲಿಂಡರ್ ಬೆಲೆಯನ್ನು ಇಳಿಸಬೇಕು ಎಂದು ಆಗ್ರಹಿಸಿದರು.



ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಹೆಚ್.ಬಿ. ಶುಭದಾಯಿನಿ ಮಾತನಾಡಿ ನಿತ್ಯ ಬಳಕೆಯ ವಸ್ತುಗಳ ಬೆಲೆ ಏರಿಕೆಯಾದರೆ ಬಡವರು ಮತ್ತು ಮಧ್ಯಮ ವರ್ಗದವರು ಜೀವನ ಮಾಡುವುದು ಹೇಗೆ? ತಕ್ಷಣವೇ ಈ ಬೆಲೆ ಏರಿಕೆ ಯನ್ನು ವಾಪಸ್ ಪಡೆಯ ಬೇಕು.ಇಲ್ಲದಿದ್ದರೆ ರಾಜ್ಯದ ಮಹಿಳೆಯರು ಮತ್ತು ಜನತೆ ಬರುವ ದಿನಗಳಲ್ಲಿ ಬಿಜೆಪಿಗೆ ತಕ್ಕ ಉತ್ತರ ನೀಡಲಿದ್ದಾರೆ ಎಂದು ಎಚ್ಚರಿಸಿದರು.

ಮುಡಾ ಅಧ್ಯಕ್ಷ ಬಿ.ಪಿ.ಪ್ರಕಾಶ್ ಮಾತನಾಡಿ ಕೇಂದ್ರ ಸರ್ಕಾರವು ದಿನೇ ದಿನೇ ಗ್ಯಾಸ್ ಮತ್ತು ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡುವ ಮೂಲಕ ಜನಸಾಮಾನ್ಯರ ಮೇಲೆ ದಬ್ಬಾಳಿಕೆ ಮಾಡುತ್ತಿದೆ. ಬಡವರು ಅಡುಗೆ ಮಾಡ ದಂತಹ ಸ್ಥಿತಿಯನ್ನು ನಿರ್ಮಿಸಿದ್ದಾರೆ. ಅಚ್ಛೇ ದಿನ್ ತರುತ್ತೇವೆ ಎಂದವರು ಇಂದು ಪ್ರತಿಯೊಬ್ಬರ ಜೇಬಿಗೆ ಕತ್ತರಿ ಹಾಕುತ್ತಿದ್ದಾರೆ ಎಂದು ಕಿಡಿಕಾರಿದರು.ಪ್ರತಿಭಟನೆಯಲ್ಲಿ ಜಿಲ್ಲಾ ಕಾಂಗ್ರೆಸ್ ಕಾರ್ಯಾಧ್ಯಕ್ಷ ಎಂ.ಎಸ್.ಚಿದಂಬರ್,ಕಾಂಗ್ರೆಸ್ ಮುಖಂಡರಾದ ಚಂದಗಾಲು ವಿಜಯ್ ಕುಮಾರ್ , ಸುಂಡಹಳ್ಳಿ ಮಂಜುನಾಥ,ಅಜ್ಜಹಳ್ಳಿ ರಾಮಕೃಷ್ಣ, ಚನ್ನಪ್ಪ, ಚಿನಕುರಳಿ ರಮೇಶ್, ಎಲ್.ಕೃಷ್ಣ, ಹನ್ನಿಯಬಾನ್, ಕೃಷ್ಣೆಗೌಡ,ಅಭಿಲಾಷ್, ನಾಗಮಣಿ ಸೇರಿದಂತೆ ಜಿಲ್ಲಾ ಕಾಂಗ್ರೆಸ್ ಸಮಿತಿಯ ಪದಾಧಿಕಾರಿಗಳು ಮಹಿಳಾ ಘಟಕದ ಸದಸ್ಯರು ಮತ್ತು ಕಾರ್ಯಕರ್ತರು ಭಾಗವಹಿಸಿದರು.

# ಒಳಮೀಸಲಾತಿ ಹೋರಾಟ ಸಮಿತಿ ವತಿಯಿಂದ ಮಾ.12ರಂದು ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನೆ

**ಮಂಡ್ಯ:** ಕರ್ನಾಟಕ ಸಮಸ್ತ ಒಳಮೀಸಲಾತಿ ಹೋರಾಟಗಾರರ ನೇತೃತ್ವದಲ್ಲಿ ಒಳಮೀಸಲಾತಿ ಹೋರಾಟ ಸಮಿತಿ ವತಿಯಿಂದ ಮಾ.12ರಂದು ಬೆಳಗ್ಗೆ 10 ಗಂಟೆಗೆ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಗುವುದು ಎಂದು ಸಮಿತಿಯ ಜಿಲ್ಲಾಧ್ಯಕ್ಷ ಸಿ.ಕೆ.ಪಾಪಯ್ಯ ತಿಳಿಸಿದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಒಳಮೀಸಲಾತಿ ವಿಧೇಯಕಕ್ಕೆ ರಾಜ್ಯಪಾಲರ ಅಂಕಿತ ಪಡೆದು ಅನುಮೋದನೆ ದೊರೆತಿದೆ. ಈ ವೇಳೆ 50 ಸಾವಿರ ಹುದ್ದೆಗಳನ್ನು ಹಿಂದಿನ ಮೀಸಲಾತಿಯಂತೆ ಭರ್ತಿ ಮಾಡುವ ಸಂಪುಟ ಸಭೆಯ ತೀರ್ಮಾನ ಸಂವಿಧಾನ ಮತ್ತು ಸಾಮಾಜಿಕ ನ್ಯಾಯಕ್ಕೆ ಬಗೆದ ದ್ರೋಹ ಎಂದು ಖಂಡಿಸಿದರು.

ಸರಕಾರ ಬಂದ ಮೊದಲ ಅಧಿವೇಶನದಲ್ಲೇ ಒಳಮೀಸಲಾತಿಯ ಭರವಸೆ ನೀಡಿದ ಕಾಂಗ್ರೆಸ್ ಚಿತ್ರದುರ್ಗದ ಸಮಾವೇಶದಲ್ಲಿಯೂ ಅದೇ ಭರವಸೆ ನೀಡಿ ಎರಡು ವರ್ಷ ಕಳೆದರೂ ಒಳಮೀಸಲಾತಿ ಜಾರಿಯ ಪ್ರಯತ್ನವನ್ನೂ ಮಾಡಿರಲಿಲ್ಲ. ಅಂತಿಮವಾಗಿ ಸುಪ್ರೀಂ ತೀರ್ಪಿನ ನಂತರದ ಹೋರಾಟಕ್ಕೆ ಮಣಿದ ರಾಜ್ಯದ ಕಾಂಗ್ರೆಸ್ ಸರಕಾರ ಒಳಮೀಸಲಾತಿ ಜಾರಿಗೆ ಅಂಕಿತ ಪಡೆದಿದೆ ಎಂದು ಹೇಳಿದರು.

ಇದೀಗ 56, 432 ಹುದ್ದೆಗಳ ಭರ್ತಿಗೆ ಮುಂದಾಗಿರುವ ಸರಕಾರ ಎಸ್ಸಿ,ಎಸ್ಟಿ ಸಮುದಾಯಕ್ಕೆ ಸಿಗಬೇಕಾದ 3,387ಕ್ಕೂ ಹೆಚ್ಚಿನ ಹುದ್ದೆಗಳನ್ನು ತಪ್ಪಿಸಿ ಪರಿಶಿಷ್ಟ ಸಮುದಾಯದ ವಿರೋಧಿ ನೀತಿ ಅನುಸರಿಸುತ್ತಿದೆ. ರಾಜ್ಯದ ಸಮಾಜ ಕಲ್ಯಾಣ ಇಲಾಖೆಯ ಸಚಿವರೇ ಒಳಮೀಸಲಾತಿಗೆ ಅಡ್ಡಲಾಗಿ ನಿಂತಿದ್ದಾರೆ. ಸಾಮಾಜಿಕ ನ್ಯಾಯ ಒದಗಿಸುವ ಬದಲು ಪಕ್ಷಪಾತೀಯವಾಗಿ ಸರಕಾರ ನಡೆದುಕೊಳ್ಳುತ್ತಿದೆ. ಇದನ್ನು ಸಹಿಸದೇ ಪ್ರಜ್ಞಾವಂತ ಸಮುದಾಯ ಮಾಜ.12ರಂದು ಸರಕಾರಕ್ಕೆ ಬುದ್ದಿ ಕಲಿಸಲು ಮುಂದಾಗಿದೆ ಎಂದು ಹೇಳಿದರು.

ಈ ಕೂಡಲೇ ಒಳಮೀಸಲಾತಿ ಸಂಬಂಧ ಫೆ.27ರಂದು ಹೊರಡಿಸಿರುವ ಸಚಿವ ಸಂಪುಟ ನಿರ್ಧಾರದ ಆದೇಶ ಹಿಂಪಡೆಯಬೇಕು. ರಾಜ್ಯದ ಶೇ.56ರ ಮೀಸಲಾತಿ ಸಂರಕ್ಷಣೆಗಾಗಿ ಸರ್ವಪಕ್ಷಗಳ ನಿಯೋಗದೊಂದಿಗೆ ಕೇಂದ್ರ ಸರಕಾರಕೆಕ ಮನವಿ ಮಾಡಿ ಸಂವಿಧಾನ 9ನೇ ಅನುಸೂಚಿಯಲ್ಲಿ ಸೇರಿಸಲು ಕ್ರಮವಹಿಸಬೇಕು. ಈ ನಿಯಮವನ್ನು 2001ರ ನಂತರ ನೇರ ನೇಮಕಾತಿ, ಬಡ್ತಿ ನೇಮಕಾತಿ, ಮುಂಬಡ್ತಿ ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿಯಲ್ಲಿ ಮುಂದುವರೆಸಬೇಕು. ಎಸ್ಸಿಎಸ್ಪಿ–ಟಿಎಸ್ಪಿ ಅನುದಾನ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲಿ ಒಳಮೀಸಲಾತಿ ಸಂಪೂರ್ಣ ಜಾರಿಯಾಗಬೇಕು. ವಿಶ್ವವಿದ್ಯಾಲಯಗಳು ನೇಮಕಾತಿಯ ಒಂದು ಘಟಕ ಎಂದು ಪರಿಗಣಿಸಬೇಕು. ಅಲೆಮಾರಿ ಸಮುದಾಯಗಳಿಗೆ ಶೇ.1ರಷ್ಟು ಪ್ರತ್ಯೇಕ ಮೀಸಲಾತಿ ನೀಡಬೇಕು. ಸಮಾಜ ಕಲ್ಯಾಣ ಇಲಾಖೆಯನ್ನು ಸಮರ್ಪಕವಾಗಿ ನಿರ್ವಹಿಸದೇ ಪಕ್ಷಪಾತೀಯವಾಗಿ ನಡೆದುಕೊಳ್ಳುತ್ತಿರುವ ಸಚಿವರನ್ನು ಕೂಡಲ ಬದಲಾಯಿಸಬೇಕೆಂದು ಆಗ್ರಹಿಸಿದರು.

ಗೋಷ್ಠಿಯಲ್ಲಿ ರಾಜ್ಯ ಉಪಾಧ್ಯಕ್ಷ ಎನ್.ಆರ್. ಚಂದ್ರಶೇಖರ್, ಮಾದರ ಮಹಾಸಭಾದ ಜಿಲ್ಲಾಧ್ಯಕ್ಷ ಬಿ.ಎನ್.ಕಾಂತರಾಜು, ಮುಖಂಡರಾದ ಬಿ.ಕೃಷ್ಣ,ಸಿ. ಕೆಂಪಯ್ಯ, ಅಂಬುಜಿ ಇದ್ದರು.

# ಸಾಕ್ರೆಟಿಸ್ ಹಾಗೂ ಚಾರ್ವಾಕ.... ಒಂದು ತುಲನೆ



| ವೀಣಾ ಹೇಮಂತ್‌ಗೌಡ ಪಾಟೀಲ್



ಎಷ್ಟೋ ಬಾರಿ ನಾವು ಬದುಕಿನಲ್ಲಿ ವೈಚಾರಿಕ ತಾರತಮ್ಯ ಬೌದ್ಧಿಕ ಗ್ರಹಿಕೆಯ ವ್ಯತ್ಯಾಸ, ಪಾರಿಸರಿಕ ಜೀವನವು ಕೂಡ ಮಾಡುವ ತಿಳುವಳಿಕೆಯ ಕೊರತೆಯಿಂದ ಒದ್ದಾಡುತ್ತೇವೆ.ಬೇರೆಯವರ ವಿಭಿನ್ನ ಗ್ರಹಿಕೆಯ ಕಾರಣ ಅವರು ನಮ್ಮನ್ನು ವಿರೋಧಿಸುತ್ತಾರೆ ಎಂಬುದನ್ನು ಅರ್ಥಮಾಡಿಕೊಳ್ಳುವುದಿಲ್ಲ ಎಂಬುದಕ್ಕೆ ಸೂಕ್ತ ನಿದರ್ಶನ ಕೆಳಗಿನ ಘಟನೆಗಳು.

ಪ್ಲೇಟೋ ಎಂಬ ಸುಪ್ರಸಿದ್ಧ ತತ್ವಜ್ಞಾನಿ ಯಾರಿಗೆ ಗೊತ್ತಿಲ್ಲ? ಇಡೀ ಜಗತ್ತು ಆತನ ಹೆಸರನ್ನು ನೆನಪಿಡುವ ಮುನ್ನವೇ ಆತನ ಬದುಕನ್ನು ಬದಲಿಸಿದ, ಬದುಕಿನಲ್ಲಿ ಹೊಸ ದಿಶೆಯನ್ನು ತೋರಿದ ವ್ಯಕ್ತಿ ಆತನ ಗುರು ಸಾಕ್ರೆಟಿಸ್


ಸಾಕ್ರೆಟಿಸ್ ಒಂದೇ ಒಂದು ಪುಸ್ತಕವನ್ನು ಬರೆದಿಲ್ಲ... ಆತನ ಕುರಿತು ನಮಗೆ ಯಾವುದೇ ರೀತಿಯ ಮಾಹಿತಿಗಳು, ತತ್ವ ಜ್ಞಾನದ ಕುರಿತಾದ ಬರಹಗಳು, ಕರಡು ಪ್ರತಿಗಳು ನಮಗೆ ಇದುವರೆಗೂ ದೊರೆತಿಲ್ಲ.... ಆದರೆ ಇತಿಹಾಸದಲ್ಲಿ ಈ ಜಗತ್ತನ್ನು ಪ್ರಭಾವಿಸಿದ ಬಹುಪಾಲು ಪ್ರಜ್ಞಾವಂತರ ಸಾಲಿನಲ್ಲಿ ಆತನ ಹೆಸರು ಮಂಚೂಣಿಯಲ್ಲಿದೆ

ಬಹುತೇಕ ಜನರಿಗೆ ಗುರುವಾಗಿದ್ದ ಆತ ತರಗತಿ ಕೋಣೆಯಲ್ಲಿ ಬೋಧಿಸಲಿಲ್ಲ.... ಅಸಲಿಗೆ ಹಾಗೊಂದು ಕಟ್ಟಡವೇ ಆತನ ಬಳಿ ಇರಲಿಲ್ಲ. ಆದರೂ ಕೂಡ ವಿವಿಧ ಗಣ್ಯರು, ರಾಜಕಾರಣಿಗಳು, ಕವಿಗಳು, ಶಿಲ್ಪ ಕಾರರು ಆತನ ಬಳಿ ತಮ್ಮ ಪ್ರಶ್ನೆಗಳಿಗೆ ಉತ್ತರವನ್ನು ಪಡೆಯಲು, ಆ ಮೂಲಕ ಸಮಾಧಾನ ಹೊಂದಲು ಧಾವಿಸಿ ಬರುತ್ತಿದ್ದರು

**ನ್ಯಾಯ ಎಂದರೇನು?**

**ಧೈರ್ಯ ಎಂದರೇನು?**

**ಸದ್ಗುಣ ಎಂದರೇನು?**



ತಮ್ಮಲ್ಲಿ ಸಾಕಷ್ಟು ಜ್ಞಾನವಿದೆ ಎಂಬ ಹೆಮ್ಮೆಯಿಂದ ಸಾಕ್ರಟಿಸ್ ಅವರನ್ನು ಭೇಟಿಯಾಗುತ್ತಿದ್ದ ಬಹಳಷ್ಟು ಜನರಿಗೆ ಸಾಕ್ರೆಟಿಸ್ ನೊಂದಿಗೆ ಮಾತನಾಡಿದ ನಂತರ ತಾವು ತಿಳಿದುಕೊಂಡದ್ದು ಅತ್ಯಂತ ಅಲ್ಪ ಎಂಬುದು ಅರಿವಿಗೆ ಬರುತ್ತಿತ್ತು ಸಾಕ್ರೆಟಿಸ್ ಗೆ ಈ ಭೂಮಿಯ ಮೇಲಿರುವ ಎಲ್ಲ ವಸ್ತುಗಳ ಕುರಿತು ಅರಿವಿದೆ ಎಂಬ ಬಲವಾದ ನಂಬಿಕೆ ಬೇರೂರಲು ಇದು ಕಾರಣವಾಯಿತು. ಇಂತಹ ಸಮಯದಲ್ಲಿ ಗ್ರೀಸ್ ದೇಶದಲ್ಲೇ ಅತ್ಯಂತ ಗೌರವಾನ್ವಿತ ಕುಟುಂಬದಲ್ಲಿ ಜನಿಸಿದ ಹಾಗೂ ಅತ್ಯಂತ ಪ್ರತಿಭಾಶಾಲಿಯಾಗಿದ್ದ ಪ್ಲೇಟೋ ಸಾಕ್ರೆಟಿಸ್ ಅವರ ಸಂಪರ್ಕಕ್ಕೆ ಬಂದ.

ಮೊದಮೊದಲು ರಾಜಕೀಯದಲ್ಲಿ ಅತ್ಯಂತ ಆಸಕ್ತಿಯನ್ನು ಹೊಂದಿದ್ದ ಪ್ಲೇಟೋ ನಂತರ ಸಾಕ್ರಟಿಸ್ ಪ್ರೋತ್ಸಾಹ ಹಾಗೂ ಬೆಂಬಲದಿಂದ ಅದಕ್ಕಿಂತ ಅಮೂಲ್ಯವಾದ ಸತ್ಯದ ಅರಿವನ್ನು ತನ್ನದಾಗಿಸಿಕೊಂಡ.

ಜಾಣ್ಮೆ ಎನ್ನುವುದು ಅತ್ಯಂತ ಸರಳವಾದ ಅರಿಯವಿಕೆಯ ಮೂಲಕ ನಮ್ಮದಾಗುತ್ತದೆ ಎಂಬುದನ್ನು ಸಾಕ್ರೆಟಿಸ್ ನಿಂದ ಕಲಿತ ಪ್ಲೇಟೋ ನನಗೇನೂ ಗೊತ್ತಿಲ್ಲ ಎಂಬ ಒಂದು ಪ್ರಶ್ನೆಯ ಮೂಲಕ ಎಲ್ಲವನ್ನು ಅರಿಯುವ ಸಾಧ್ಯತೆಗಳು ನಮಗೆ ಹೆಚ್ಚು ದೊರೆಯುತ್ತದೆ ಎಂಬ ಸತ್ಯವನ್ನು ಅರಿತ. ಸಾಕ್ರೆಟಿಸ್ ರನ್ನು ಗುರುವಾಗಿ ಸ್ವೀಕರಿಸಿದ ಪ್ಲೇಟೋ, ಸಾಕ್ರೆಟಿಸ್ ಅವರು ಇತರರೊಂದಿಗೆ ಸಂಭಾಷಿಸುವ ಚರ್ಚಿಸುವ ವಿಷಯಗಳ ಕುರಿತು ಸೂಕ್ಷ್ಮ ಅವಗಾಹನೆಯನ್ನು ಬೆಳೆಸಿಕೊಂಡನಲ್ಲದೆ ಅದರ ಕುರಿತು ತನ್ನದೇ ಆದ ವೈಯಕ್ತಿಕ ಚಿಂತನೆಗಳನ್ನು ರೂಡಿಸಿಕೊಂಡ. ನಿರಂತರವಾದ ಸತ್ಯದ ಹುಡುಕಾಟದಲ್ಲಿ ತನ್ನ ಗುರುವಿಗೆ ತಕ್ಕ ಶಿಷ್ಯನೇ ಆಗಿ ಹೋದ ಪ್ಲೇಟೋ.

ಕ್ರಿಸ್ತಪೂರ್ವ 399ರ ಅಂದಿನ ಗ್ರೀಸ್ ದೇಶದಲ್ಲಿ ಎಲ್ಲವನ್ನು, ಎಲ್ಲರನ್ನೂ ಪ್ರಶ್ನಿಸುತ್ತಿದ್ದ ಸಾಕ್ರೆಟಿಸ್ ನ ಮನೋಭಾವ ಅಂದಿನ ಗ್ರೀಕರಿಗೆ ಅಷ್ಟೊಂದು ಸಮಂಜಸವಾಗಿ ತೋರಲಿಲ್ಲ. ಸಾಕ್ರೆಟಿಸ್ ನ ಮೇಲೆ ಅನವಶ್ಯಕ ಆಪಾದನೆಗಳು ಹೇರಲ್ಪಟ್ಟವು. ಆತನ ಮೇಲೆ ಹೊರಿಸಿದ ಆಪಾದನೆಗಳು ಏನು ಗೊತ್ತೇ? ಯುವ ಜನತೆಗೆ ಆಮಿಷವನ್ನು ಒಡ್ಡಿ ಅವರನ್ನು ಹಾಳು ಮಾಡುತ್ತಿರುವುದು ಹಾಗೂ ಅಂದಿನ ದಿನಗಳಲ್ಲಿ ಜನರು ಪೂಜಿಸುತ್ತಿದ್ದ ಆರಾಧಿಸುತ್ತಿದ್ದ ದೇವತೆಗಳಿಗೆ ಅಗೌರವ ತೋರುವುದು ಆತನ ಮೇಲಿದ್ದ ಮುಖ್ಯ ಆಪಾದನೆಗಳಾಗಿದ್ದವು.

ನ್ಯಾಯ ಹೇಳಲು ಕುಳಿತವರ ಮನಸ್ಸಿನಲ್ಲಿ ಆತ ಶರಣಾಗತನಾಗಲಿ ಎಂಬ ಆಶಯವಿತ್ತು. ಕರುಣೆಯಿಂದ ಆತನನ್ನು ಬಿಟ್ಟುಬಿಡಬಹುದು ಎಂಬ ಆಗ್ರಹದ ಭಾವವಿತ್ತು ಆದರೆ ಸಾಕ್ರಟಿಸ್ ಇದಾವುದಕ್ಕೂ ಮಣಿಯಲಿಲ್ಲ.

ಸಾಕ್ರಟಿಸ್ ತತ್ವಶಾಸ್ತ್ರವನ್ನು ಕೇವಲ ಹೇಳುತ್ತಿರಲಿಲ್ಲ ಬದಲಾಗಿ ಅದನ್ನು ತನ್ನ ಬದುಕಿನ ಭಾಗವಾಗಿಸಿಕೊಂಡು ಬದುಕುತ್ತಿದ್ದ. ಪ್ರಶ್ನೆ ಕೇಳುವುದು ಅಪರಾಧವಲ್ಲ, ಪ್ರಶ್ನೆ ಕೇಳುವ ಮೂಲಕ ನಾವು ನಮ್ಮ ಕರ್ತವ್ಯಗಳನ್ನು ಸರಿಯಾಗಿ ನಿರ್ವಹಿಸುತ್ತಿದ್ದೇವೆಯೋ ಇಲ್ಲವೋ ಎಂಬ ಜವಾಬ್ದಾರಿಯ ಅರಿವನ್ನು ಮೂಡಿಸಿಕೊಳ್ಳಬೇಕು.. ಪ್ರಶ್ನೆ ಕೇಳುವುದು ನಮ್ಮ ಕರ್ತವ್ಯ ಎಂಬುದು ಆತನ ಅಂಬೋಣವಾಗಿತ್ತು

ಏಕ ಪಕ್ಷೀಯವಾಗಿ ವಿಚಾರಣೆ ನಡೆದು ಅಂತಿಮವಾಗಿ ನ್ಯಾಯ ಪಾಲಕರು ಆತನಿಗೆ ಮರಣದ ಶಿಕ್ಷೆಯನ್ನು ವಿಧಿಸಿದರು. ಕಾರ್ಕೋಟಕ ಎಂದೇ ಹೆಸರಾದ ಹೆಮ್ಲಾಕ್ ವಿಷದ ಬಟ್ಟಲನ್ನು ಆತನ ಮುಂದಿಟ್ಟು ಅದನ್ನು ಕುಡಿಯಲು ಆದೇಶ ನೀಡಿದರು. ಅತ್ಯಂತ ಶಾಂತವಾಗಿ ಹಾಗೂ ಅತ್ಯಂತ ಸಮಾಧಾನ ಚಿತ್ತದಿಂದ ಸಾಕ್ರೆಟಿಸ್ ತನ್ನ ವಿಧಿ ಲಿಖಿತವನ್ನು ಒಪ್ಪಿಕೊಂಡ..... ಆದರೆ ತನ್ನ ತತ್ವಗಳಿಗೆ ಮಾತ್ರ ಬದ್ಧನಾಗಿಯೇ ಉಳಿದುಕೊಂಡ.

ತನ್ನ ಗುರು ಸಾಕ್ರೆಟಿಸ್ ತನ್ನ ಮುಂದಿಟ್ಟ ವಿಷದ ಬಟ್ಟಲಿನಲ್ಲಿದ್ದ ಹೆಮ್ಲಾಕ್ ವಿಷವನ್ನು ಕುಡಿಯುವುದನ್ನು ಪ್ಲೇಟೋ ಆರ್ದ್ರ ಕಣ್ಣುಗಳಿಂದ ನೋಡಿದ.... ಆ ನೋಟ ಮುಂದೆ ಆತನ ಇಡೀ ಬದುಕನ್ನು ನೋಡುವ ರೀತಿಯನ್ನೇ ಬದಲಾಯಿಸಿತು.

ರಾಜಕಾರಣವನ್ನು ಪ್ರವೇಶಿಸುವ ಇಚ್ಛೆಯನ್ನು ತೊರೆದ ಪ್ಲೇಟೋ ತಾನು ನಂಬಿದ ತತ್ವ ಸಿದ್ಧಾಂತಗಳಿಗೆ ತನ್ನ ಬದುಕನ್ನೇ ಬಲಿಕೊಟ್ಟ ಸಾಕ್ರೆಟಿಸ್ ನ ಬೋಧನೆಗಳು ಸಿದ್ಧಾಂತಗಳು ಹಾಗೂ ತಂತ್ರ ಶಾಸ್ತ್ರದ ವ್ಯಾಖ್ಯಾನಗಳನ್ನು ರಕ್ಷಿಸುವ ಕಾರ್ಯದಲ್ಲಿ ತನ್ನನ್ನು ತಾನು ತೊಡಗಿಸಿಕೊಂಡ.

ತತ್ವಶಾಸ್ತ್ರದ ಸಂಭಾಷಣೆಗಳಿರುವ ಒಂದು ಇಡೀ ಸರಣಿಯನ್ನು ಆರಂಭಿಸಿದ ಆತ ತನ್ನ ಗುರು ಆಡಿದ ಎಲ್ಲ ಮಾತುಗಳನ್ನು ಅತ್ಯಂತ ಪ್ರಭಾವಶಾಲಿ ಧ್ವನಿಯನ್ನಾಗಿಸಿ ಮಾತುಗಳಾಗಿಸಿ ಬೌದ್ಧಿಕ ಜಗತ್ತಿನ ಅತ್ಯುನ್ನತ ವ್ಯಕ್ತಿತ್ವವನ್ನು ಜಗತ್ತಿಗೆ ತೋರ್ಪಡಿಸಿದ

ದ ರಿಪಬ್ಲಿಕ್, ಅಪಾಲಜಿ ಹಾಗೂ ಫೀಡೊ ಎಂಬ ಸ್ಮರಣೀಯ ಕೃತಿಗಳಲ್ಲಿ ಸಾಕ್ರೆಟಿಸ್ ನ ಎಲ್ಲಾ ತಾತ್ವಿಕ ಚಿಂತನೆಗಳನ್ನು ಶತಶತಮಾನಗಳವರೆಗೆ ಜನರು ಸಾಕ್ರೆಟಿಸ್ ನ ಕುರಿತು ಮಾತನಾಡುವಂತೆ ಆತನನ್ನು ಅಮರನಾಗಿಸಿದ. ಸಾಕ್ರೆಟಿಸ್ ಇಲ್ಲದ ಪ್ಲೇಟೋ ಇಲ್ಲ.... ಆದರೆ ಪ್ಲೇಟೋ ಇಲ್ಲದೆ ಸಾಕ್ರೆಟಿಸ್ ನ ತಾತ್ವಿಕ ಚಿಂತನೆಗಳಿಗೆ ಧ್ವನಿಯೇ ಇಲ್ಲ ಎಂಬಂತಾಯಿತು. ಕಾಲ ಗರ್ಭದಲ್ಲಿ ಅಡಗಿ ಹೋಗಬೇಕಾದ ಧ್ವನಿಯನ್ನು ಪ್ಲೇಟೋ ಅಕ್ಷರಗಳಲ್ಲಿ ಹಿಡಿದಿಟ್ಟ.

ಹೌದಲ್ಲವೇ ಸ್ನೇಹಿತರೆ ಬಹಳಷ್ಟು ಬಾರಿ ಅತ್ಯಂತ ಪ್ರಭಾವಶಾಲಿ ವ್ಯಕ್ತಿ ತನ್ನ ಚಿಂತನೆಗಳನ್ನು, ಯೋಚನೆಗಳನ್ನು ಬರೆದಿಡುವುದಿಲ್ಲ...ಬದಲಾಗಿ ತಮ್ಮ ಗುರು ತೋರಿದ ಚಿಂತನೆಗಳ ಹಾದಿಯಲ್ಲಿ ಇಡೀ ಜಗತ್ತು ಸಾಗಲಿ ಎಂಬ ಕಾರಣಕ್ಕಾಗಿ ಅವರ ಶಿಷ್ಯಂದಿರು ಅವರನ್ನು ಸ್ಮರಣೀಯವಾಗಿಸುವ ನಿಟ್ಟಿನಲ್ಲಿ ಅವರ ಚಿಂತನೆಗಳನ್ನು ಕಾಪಿಡುತ್ತಾರೆ.

ಭಾರತ ಅತ್ಯಂತ ಸಹಿಷ್ಣು ರಾಷ್ಟ್ರ ಎಂಬುದಕ್ಕೆ ಮೇಲಿನ ಘಟನೆಯೊಂದಿಗೆ ನಮ್ಮ ಓರ್ವ ಜ್ಞಾನಿಯನ್ನು ತುಲನೆ ಮಾಡಿ ನೋಡೋಣ.

ನಮ್ಮಲ್ಲಿ ಓರ್ವ ಚಿಂತಕ ಇದ್ದ. ಅಪಾರ ಜ್ಞಾನವನ್ನು ಹೊಂದಿದ ಆತನ ಮಾತುಗಳು ಬಹುತೇಕ ಜನರಿಗೆ ರುಚಿಸುತ್ತಿರಲಿಲ್ಲ ಕಾರಣ ಆತ ದೇವರ ಅಸ್ತಿತ್ವವನ್ನು ಪ್ರಶ್ನಿಸುತ್ತಿದ್ದ. ದೇವರು,ದಿಂಡರು ಇಲ್ಲ ಎಂದು ಹೇಳುತ್ತಿದ್ದ ಆತ ಸ್ವರ್ಗ ನರಕ ಪಾಪ ಪುಣ್ಯ ಮುಂತಾದ ಕರ್ಮಗಳ ಕುರಿತ ಎಲ್ಲ ಸಾಮಾಜಿಕ ನೀತಿ ನಿಯಮಾವಳಿಗಳನ್ನು ಪ್ರಶ್ನಿಸುತ್ತಿದ್ದ. ಆತನೇ ಮುನಿ ಚಾರ್ವಾಕ. ಲೋಕಾಯತ ಎಂಬ ನಾಸ್ತಿಕವಾದ ಇಲ್ಲವೇ ಭೌತಿಕ ತತ್ವಶಾಸ್ತ್ರ ಆತನದಾಗಿತ್ತು.

ದೇಹದಲ್ಲಿ ಪ್ರಾಣ ಇರುವವರೆಗೆ ಆತ್ಮದ ಇರುವು ಸಾಧ್ಯ ಎಂಬುದನ್ನು ಹೇಳುತ್ತಿದ್ದ ಆತ ಸನಾತನ ಭಾರತೀಯರು ನಂಬುತ್ತಿದ್ದ ಸಾವಿನ ನಂತರದ ಬದುಕಿನ ಕುರಿತು ಪ್ರಶ್ನೆಗಳನ್ನು ಕೇಳುತ್ತಿದ್ದ.

ವೇದ ಉಪನಿಷತ್ತುಗಳು ನೀಡುವ ಜ್ಞಾನವನ್ನು ನಿಜ ಎಂದು ಭಾವಿಸದೆ ನೀನು ಪಡೆಯುವ ಜ್ಞಾನ ಎಲ್ಲಿಂದಲೇ ಬರಲಿ ಅದನ್ನು ನಿನ್ನ ಗ್ರಹಿಕೆಯ ಮೂಲಕ ಮಾತ್ರ ನಿನ್ನದಾಗಿಸಿಕೋ ಎಂದು ಆತ ಹೇಳುತ್ತಿದ್ದ.

ಬೇರೆಯವರು ಹೇಳಿದರು ಎಂಬ ಕಾರಣಕ್ಕೆ ಎಲ್ಲವನ್ನೂ ಎಲ್ಲರನ್ನೂ ಒಪ್ಪಿಕೊಳ್ಳುವ ಅವಶ್ಯಕತೆ ಇಲ್ಲ ಎಂಬುದು ಆತನ ವಾದವಾಗಿತ್ತು. ಇದ್ದಷ್ಟು ದಿನ ಚೆನ್ನಾಗಿ ಬದುಕುವ ಕುರಿತು ಹೇಳುತ್ತಿದ್ದ ಆತ ಇರುವವರೆಗೂ ಚೆನ್ನಾಗಿ ತಿಂದು ಉಂಡು ಇರಲು ಹೇಳುತ್ತಿದ್ದ. ಆತನನ್ನು ನಮ್ಮ ಭಾರತೀಯ ಸಂಸ್ಕೃತಿ ಋಷಿ ದ್ರಷ್ಟಾರ ಎಂದು ಕರೆದು ಗೌರವಿಸಿದರು.

ಜಗತ್ತಿನ ಅತ್ಯಂತ ಮೇಧಾವಿಗಳು ಎಂದು ಕರೆಸಿಕೊಂಡ ಗ್ರೀಕರು ತಮ್ಮಲ್ಲಿರುವ ವಿಭಿನ್ನ ವ್ಯಕ್ತಿತ್ವವನ್ನು ಒಪ್ಪಿಕೊಳ್ಳದೆ ಆತನಿಗೆ ವಿಷ ಕುಡಿಸಿದರೆ, ಸನಾತನಿಗಳು ಎಂದು ಕರೆಸಿಕೊಳ್ಳುವ ಭಾರತೀಯರು ಆತನ ನಾಸ್ತಿಕವಾದವನ್ನು ಗೌರವಿಸಿ ಮುನಿ ದ್ರಷ್ಟಾರ ಎಂದು ಕರೆದು ಗೌರವಿಸಿದರು.

ಸ್ನೇಹಿತರೆ, ಬೇರೆಯವರು ನಮಗಿಂತ ವಿಭಿನ್ನವಾದ ಚಿಂತನೆಗಳನ್ನು, ವಿರೋಧ ಭಾವನೆಗಳನ್ನು ಹೊಂದಿದ್ದಾರೆ ಎಂದರೆ ಅವರೇ ನಮ್ಮ ವಿರೋಧಿಗಳು ಅಲ್ಲ. ಅವರ ಗ್ರಹಿಕೆ ನಮಗಿಂತ ವಿಭಿನ್ನವಾಗಿದೆ ಎಂಬುದು ಇದರ ಅರ್ಥ ಇಂತಹ ವಿರೋಧಾಭಾಸಗಳನ್ನು ಕೂಡ ಗೌರವಿಸಿ ವ್ಯಕ್ತಿಯ ವೈಯುಕ್ತಿಕ ಚಿಂತನೆಯನ್ನು ಸಾರ್ವತ್ರಿಕವಾಗಿಸಿದೆ ಇರುವುದು ಕೂಡ ಒಂದು ಸಂಸ್ಕಾರವೇ ಸರಿ.

# ಮಹಿಳಾ ಆಯೋಗ ಮನೆ ಬಾಗಿಲಿಗೆ



ಮೈಸೂರು: ರಾಷ್ಟ್ರೀಯ ಮಹಿಳಾ ಆಯೋಗ ಮತ್ತು ಕರ್ನಾಟಕ ರಾಜ್ಯ ಮಹಿಳಾ ಆಯೋಗಗಳ ವತಿಯಿಂದ ರಾಷ್ಟ್ರವ್ಯಾಪಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಗುರುತಿಸಲು ಮಹಿಳಾ ಆಯೋಗ ನಿಮ್ಮ ಮನೆ ಬಾಗಿಲಿಗೆ ಕಾರ್ಯಕ್ರಮವನ್ನು ಮಾ.8 ರಿಂದ ಮಾ.13 ರವರೆಗೆ ಆಯೋಜಿಸಲಿದೆ.

ಮಾ.13 ರಂದು ಬೆಳಿಗ್ಗೆ 10 ಗಂಟೆಯಿಂದ ಶ್ರೀಚಾಮುಂಡೇಶ್ವರಿ ಸಭಾಂಗಣ ವಿಭಾಗೀಯ ಆಯುಕ್ತರ ಕಚೇರಿ, ಕಲಾಮಂದಿರದ ಎದುರು, ಹುಣಸೂರು ರಸ್ತೆ, ಮೈಸೂರು ಇಲ್ಲಿ ಏರ್ಪಡಿಸಲಾಗಿರುವ ಈ ಸಭೆಯಲ್ಲಿ ಕರ್ನಾಟಕ ರಾಜ್ಯ ಮಹಿಳಾ ಆಯೋಗ ಅಧ್ಯಕ್ಷ ಡಾ.ನಾಗಲಕ್ಷ್ಮಿ ಚೌದರಿ, ಜಿಲ್ಲಾಧಿಕಾರಿ, ಪೊಲೀಸ್ ಆಯುಕ್ತರು, ಜಿಪಂ ಸಿಇಓ, ಪೊಲೀಸ್ ಅಧೀಕ್ಷಕರು, ಜಿಲ್ಲಾ ವೈದ್ಯಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರ ಜಿಲ್ಲಾ, ರಾಜ್ಯ ಮಟ್ಟದಲ್ಲಿ ಸಭೆಯಲ್ಲಿ ಮಹಿಳೆಯರ ಅಹವಾಲು ಆಲಿಸಲು ಪಾಲ್ಗೊಳ್ಳುತ್ತಿದ್ದಾರೆ.

ಸಭೆಯಲ್ಲಿ ಮಹಿಳೆಯರು ನೇರವಾಗಿ ತಮ್ಮ ಅಹವಾಲುಗಳನ್ನು ನೀಡಬಹುದಾಗಿದ್ದು, ಸಭೆಯ ಪ್ರಯೋಜನವನ್ನು ಮಹಿಳೆಯರು ಪಡೆದು ಕೊಳ್ಳಬಹುದಾಗಿರುತ್ತದೆ.

# ವಿದ್ಯೆಯೇ ಬಾಳಿನ ಬೆಳಕು



| ಗಿರಿಜಾ.ಎಸ್. ದೇಶಪಾಂಡೆ. ಬೆಂಗಳೂರು.

ವಿದ್ಯೆಯೇ ಬಾಳಿನ ಬೆಳಕು ಎಂಬ ಮಾತಿನಂತೆ ಪ್ರತಿಯೊಬ್ಬ ವಿದ್ಯಾರ್ಥಿಯ ಬಾಳಿನಲ್ಲಿ ವಿದ್ಯೆ ಎಂಬುದು ಒಲಿದರೆ ,ಅದರ ಬೆಳಕನ್ನು ಚೆಲ್ಲಿದರೆ ಅವನ ಬಾಳು ಬಂಗಾರವಾದಂತೆ.ತಂದೆ ತಾಯಿ ಮಾಡಿದ ಆಸ್ತಿ ಶಾಶ್ವತವಾಗದು.ಮಾಡಿದ ಬೆಳ್ಳಿ ಬಂಗಾರ ಶಾಶ್ವತವಲ್ಲ. ಆದರೆ ವಿದ್ಯೆ ಮಾತ್ರ ಯಾರೂ ಕದಿಯದ ವಸ್ತುವಾಗಿ ನಮ್ಮ ಬಾಳಿನ ದೀಪವಾಗಿ ಉಳಿಯುತ್ತದೆ.ಶಿಕ್ಷಣವು ಮಕ್ಕಳ ಭವಿಷ್ಯ ರೂಪಿಸಲು ಮತ್ತು ಅವರ ಜೀವನಕ್ಕೆ ಉತ್ತಮ ಜ್ಞಾನ ಕೌಶಲಗಳನ್ನು ಪಡೆದುಕೊಳ್ಳುವಲ್ಲಿ ಸಹಾಯ ಮಾಡುತ್ತದೆ.ವಿದ್ಯೆ ಎಂದರೆ ಕೇವಲ ಅಕ್ಷರಜ್ಞಾನವಲ್ಲ.ಸಂಸ್ಕಾರವೂ ಹೌದು,ಸಂಸ್ಕೃತಿಯೂ ಹೌದು.ಆ ಸಂಸ್ಕೃತಿಗಾಗಿ ಪ್ರತಿಯೊಬ್ಬ ವಿದ್ಯಾರ್ಥಿಯೂ ಗಮನವಿಟ್ಟು ಓದಲೇಬೇಕು. ಮಕ್ಕಳು ಹೆತ್ತವರ ಖುಷಿಗಾಗಿ ಓದಬೇಕು.ವಿದ್ಯಾರ್ಥಿಯ ಮೇಲೆ ನಂಬಿಕೆಯಿಟ್ಟ ಶಿಕ್ಷಕರಿಗಾಗಿ ಓದಬೇಕು.ಇನ್ನೊಬ್ಬರಿಗೆ ಮಾದರಿಯಾಗಲು ಓದಬೇಕು.ಜಗತ್ತನ್ನು ಅರಿಯಲು ಓದಬೇಕು.ಪ್ರತಿಯೊಬ್ಬ ವಿದ್ಯಾರ್ಥಿ ಅವನ ಕಾಲ ಮೇಲೆ ನಿಲ್ಲಲು ಓದಬೇಕು.ವಿದ್ಯಾರ್ಥಿ ತನ್ನ ವ್ಯಕ್ತಿತ್ವ ರೂಪಿಸಿಕೊಳ್ಳಲು ಓದಬೇಕು.ಕಷ್ಟಪಟ್ಟಲ್ಲ,ಇಷ್ಟ ಪಟ್ಟು ಓದಿದಾಗಲೇ ಒಳ್ಳೆಯ ವಿದ್ಯಾರ್ಥಿಯಾಗಲು ಸಾಧ್ಯ.ಪ್ರತಿಯೊಂದು ಪುಸ್ತಕ ಹೇಳುತ್ತದೆ,ನನ್ನನ್ನು ತಲೆತಗ್ಗಿಸಿ ಓದು ನಾನು ನಿನ್ನನು ತಲೆ ಕೆಳಗೆ ತಗ್ಗಿಸದಂತೆ ನೋಡಿಕೊಳ್ಳುವೆ ಎಂದು ಹೇಳುತ್ತದೆ.

ಉಳಿದ ವಿಷಯಗಳೊಂದಿಗೆ ನಮ್ಮ ಮಾತೃಭಾಷೆಯ ಬಗ್ಗೆಯೂ ನಮ್ಮ ಮಕ್ಕಳಲ್ಲಿ ಮನವರಿಕೆ ಮಾಡಿ ಕೊಡಬೇಕಾದ ಅವಶ್ಯಕತೆ ಇದೆ.ನಾವು ಆಸಕ್ತಿ ತೋರಿದರೆ ಮಕ್ಕಳೂ ಆಸಕ್ತಿ ತೋರಿ ಪ್ರಯತ್ನ ಮಾಡುವ ಸಾಧ್ಯತೆಯಿದೆ.ಕಲಿಕೆಯೆಂಬ ಪ್ರಯಾಣದಲ್ಲಿ ಮೊದಲು ಮಕ್ಕಳಿಗೆ ಮಾಡಿಸಬೇಕಾದದ್ದು ಅಕ್ಷರಾಭ್ಯಾಸ.ವಿದ್ಯೆಯೇ ಬಾಳಿನ ಬೆಳಕು,ಅಜ್ಞಾನವೇ ಅಂಧಕಾರ.ಪ್ರತಿಯೊಬ್ಬ ವಿದ್ಯಾರ್ಥಿ ಉತ್ತಮ ಪ್ರಜೆಯಾಗಿ ಬಾಳುವದೇ ಅವನ ಜೀವನದ ಸರ್ವಶ್ರೇಷ್ಠ ಸಾಧನೆ.ತಾಯಿ,ತಾಯಿನಾಡು,ತಾಯಿಭಾಷೆ ಪ್ರೀತಿಸುವದು ,ಗೌರವಿಸುವದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.ಸೇವಾಮನೋಭಾವ ನಮ್ಮ ಗುರಿಯಾಗಿರಬೇಕು.ಪ್ರತಿಫಲಾಪೇಕ್ಷೆಯಿಲ್ಲದೇ ಏನನ್ನಾದರೂ ಸಾಧಿಸಬಲ್ಲೆವು ಎಂಬ ನಂಬಿಕೆ ಅಚಲವಾಗಿರಬೇಕು.ನಾವು ಸುಖಿಸುವದರ ಜೊತೆಗೆ ಸಾಧ್ಯವಾದಲ್ಲಿ ಸುಖವನ್ನು ಹಂಚಿ ಆನಂದಿಸಬೇಕು.ಪ್ರತಿಯೊಬ್ಬರ ಉತ್ತಮ ಸಾಧನೆಗಳು ಜನ,ಜಗ,ಮೆಚ್ಚುವಂತಿರಬೇಕು.ವಿದ್ಯೆ ಸಾಧಕನ ಸೊತ್ತೇ ಹೊರತು ಸೋಮಾರಿಯ ಸ್ವತ್ತಲ್ಲ.ವಿದ್ಯಾರ್ಥಿಗಳು ಕೇವಲ ವೇಷಭೂಷಣಗಳ ಕಡೆಗೆ ಮಾತ್ರ ಗಮನಹರಿಸದೇ ಉತ್ತಮ ಸಂಸ್ಕಾರ ರೂಢಿಸಿಕೊಂಡು ದೇಶದ ಅಭಿವೃದ್ಧಿಗೆ ಮತ್ತು ಬದಲಾವಣೆಗೆ ಮುಂದಾಗಬೇಕು.




# ಹೊದ್ದೂರಿನ ಶ್ರೀದೇವಿ ಹಾಗೂ ವೆಂಕಟರಮಣ ದೇವಸ್ಥಾನ




| ಪುಷ್ಪ ಪ್ರಸಾದ್

ಭಾರತದಲ್ಲಿ ಎಣಿಕೆಗೂ ಮೀರಿದ ಹಿಂದೂ ದೇವಾಲಯಗಳನ್ನು ನಾವು ನೋಡಬಹುದು. 1000 ಕ್ಕೂ ಹೆಚ್ಚು ವರ್ಷಗಳ ಐತೀಹ್ಯವನ್ನು ಹೊಂದಿರುವ ದೇವಾಲಯಗಳನ್ನು ನೋಡಿರಬಹುದು. ವಿಶ್ವದಲ್ಲೇ ಶ್ರೀಮಂತ ಪರಂಪರೆಗೆ ಅತ್ಯಂತ ಹೆಸರುವಾಸಿಯಾದ ದೇಶವೆಂದರೆ ಅದು ನಮ್ಮ ಹೆಮ್ಮೆಯ ಭಾರತ. ವಿವಿಧತೆಯಲ್ಲಿ ಏಕತೆಯನ್ನು ಸಾರುವ ಭಾರತವು ವಿವಿಧ ಧರ್ಮಗಳ ತವರೂರು. ಆದ್ದರಿಂದ ನಾವು ಭಾರತದಲ್ಲಿ ವಿವಿಧ ಧರ್ಮದ ಸಾವಿರಾರು ದೇವಾಲಯಗಳನ್ನು ನೋಡಬಹುದು. ನಮ್ಮ ಭಾರತದಲ್ಲಿ ವಿಭಿನ್ನ ಶೈಲಿಯ ದೇವಾಲಯಗಳನ್ನು ನೋಡಬಹುದು. ಭಾರತದಲ್ಲಿರುವುದು ಇಂದು ನಿನ್ನೆಯ ದೇವಾಲಯಗಳಲ್ಲ, ಸಾವಿರ ವರ್ಷಗಳಿಗೂ ಹಿಂದಿನ ಅನೇಕ ದೇವಾಲಯಗಳಿವೆ. 1000 ವರ್ಷಗಳಿಗೂ ಹಿಂದಿನ ಅದ್ಭುತ ಸೃಷ್ಟಿಸುವ ಭಾರತದಲ್ಲಿನ 1000 ಕ್ಕೂ ಹೆಚ್ಚು ವರ್ಷಗಳ ಐತೀಹ್ಯವುಳ್ಳ ದೇವಾಲಯಗಳಿವೆ.

ಒಮ್ಮೆ ಇತಿಹಾಸ ಪುಟಗಳನ್ನು ತೆರೆದರೆ ಕದಂಬ, ಹೊಯ್ಸಳ, ವಿಜಯನಗರ, ಕೆಳದಿ, ಕೊಡಗರ ಕಾಲದಿಂದಲೂ ಶ್ರೇಷ್ಠತೆಯಿಂದ, ಸಾಂಸ್ಕೃತಿಕ, ಸಾಹಿತ್ಯ, ಪರಂಪರೆ, ಸಂಪ್ರದಾಯಗಳಿಂದ ಕೂಡಿದ ದೇವಾಲಯಗಳನ್ನು ನಾವು ನೋಡಬಹುದು. ಅಂತಹ ಐತಿಹಾಸಿಕ ಪ್ರಸಿದ್ಧಿ ದೇವಾಲಯ ನೋಡುವ ಕುತೂಹಲ ನಿಮಗಿದೆಯೇ? ಬನ್ನಿ ಹಾಗಾದರೆ ಅಂತಹ ಒಂದು ಪ್ರಸಿದ್ಧಿ ಪಡೆದು ತೆರೆಮರೆಯಲ್ಲಿಯೇ ಉಳಿದುಕೊಂಡಿರುವ ದೇವಸ್ಥಾನದ ಬಗ್ಗೆ ತಿಳಿಯೋಣ. ಅಂತೆಯೇ ಇತಿಹಾಸ ಪ್ರಸಿದ್ಧಿಯನ್ನು ಪಡೆದಂತಹ ದೇವಾಲಯದ ಬಗ್ಗೆ ಹೇಳ್ತೀನಿ ಬನ್ನಿ. ಕೊಡಗು ಜಿಲ್ಲೆಯ ಮಡಿಕೇರಿ ತಾಲೂಕಿನ ಹೊದ್ದೂರು ಗ್ರಾಮದ ಪಾಲೆಮಾಡು ಎಂಬಲ್ಲಿ ಕುಂಬಾರರು ನೆಲೆಸಿರುವ ಸ್ಥಳದಲ್ಲಿ ಕುಂಬಾರ ಸಮೂಹದ ದೇವಾಲಯದ ಬಗ್ಗೆ ಒಂದಿಷ್ಟು ಮಾಹಿತಿಯನ್ನು ನಿಮ್ಮ ಮುಂದೆ ಹಂಚಿಕೊಳ್ಳಲು ಇಚ್ಛೆಸುತ್ತೇನೆ. ಬನ್ನಿ ಇಲ್ಲಿರುವ ದೇವಸ್ಥಾನ ಯಾವುದು? ಇದರ ವಿಶೇಷತೆ ಏನು? ಇದರ ಪುರಾಣ ಚರಿತ್ರೆಯೇನು ಎಂಬುದನ್ನು ತಿಳಿದುಕೊಳ್ಳೋಣ.



ಇಲ್ಲಿರುವ ಶ್ರೀದೇವಿ ಮತ್ತು ವೆಂಕಟರಮಣ ದೇವಾಲಯವು ತುಂಬಾ ಸುಂದರವಾಗಿದೆ. ನನಗೆ ನನ್ನ ಅಜ್ಜ–ಅಜ್ಜಿ ತಿಳಿಸಿರುವಂತೆ ಈ ದೇವಾಲಯವು ಸ್ಥಾಪನೆಯಾಗುವುದಕ್ಕೂ ಮೊದಲು ಅಂದರೆ ಇಲ್ಲಿಯ ದೇವಿ ಹಾಗೂ ವೆಂಕರಮಣ ದೇವರುಗಳು ತಿರುಪತಿಯಿಂದ ಕನ್ನಂಬಾಡಿ ಬಂದು, ಅಲ್ಲಿಂದ ಪಿರಿಯಾಪಟ್ಟಣ ಬಂದು, ಅಲ್ಲಿಂದ ನಾಲ್ಕೇರಿ ಹೆಮ್ಮಾಡು ಎಂಬ ಸ್ಥಳಕ್ಕೆ ಬಂದು, ಅಲ್ಲಿಂದ ಈ ಸ್ಥಳಕ್ಕೆ ಬಂದು ನೆಲೆಯಾಗಿರುವುದು ಎಂಬ ಪ್ರತೀತಿ ಇದೆ. ಮೊದಲು ಅಂದರೆ ಸುಮಾರು ವರ್ಷಗಳ ಹಿಂದಿನ ಕಾಲದಲ್ಲಿ ಕುಂಬಾರ ಕುಟುಂಬಸ್ಥರು ಒಂದು ಕಂಚಿನ ದೇವಿಯ ವಿಗ್ರಹವನ್ನು ತಂದು ಭತ್ತ ಕುಟ್ಟುವ ಕೊಟ್ಟಿಗೆಯೊಳಗೆ ಭತ್ತದ ರಾಟೆಯ ಹತ್ತಿರ ಇಟ್ಟು ಪೂಜಿಸುತ್ತಾ ಇದ್ದರು, ಅಂತೆಯೇ ಬರುತ್ತಾ ಬರುತ್ತಾ ಇಲ್ಲಿಯ ಕುಟುಂಬಸ್ಥರು ಸೇರಿ ದೇವಿಗೆ ಒಂದು ಗುಡಿಯನ್ನು ಕಟ್ಟಿ ಪೂಜಿಸೋಣ ಎಂದು ತೀರ್ಮಾನಕ್ಕೆ ಬರುತ್ತಾರೆ. ಹಾಗೇ ಸಣ್ಣದಾದ ಗುಡಿಯನ್ನು ಸ್ಥಾಪಿಸಿ ಪೂಜೆ ಪುನಸ್ಕಾರಗಳನ್ನು ಮಾಡುತ್ತಾ ಬಂದರು. ಇಲ್ಲಿಯ ವಿಶೇಷತೆ ಎಂದರೆ ಸುಮಾರು ವರ್ಷಗಳ ಹಿಂದೆಯೇ ಪೂಜಿಸಲ್ಪಡುವಾಗ ದೇವರು ಮೈ ಮೇಲೆ ಬಂದು ನುಡಿಯನ್ನು ಕೊಡುತಿದ್ದಿದ್ದು ತುಂಬಾ ಪ್ರಸಿದ್ದಿಯಾಗಿತ್ತಂತೆ. ತದನಂತರ ಇಲ್ಲಿಯ ಕುಟುಂಬಸ್ಥರೆಲ್ಲಾ ಸೇರಿಕೊಂಡು ದೇವರಿಗೆ ಸುಂದರವಾದ ಗುಡಿಯನ್ನು ನಿರ್ಮಿಸಬೇಕೆಂದುಕೊಂಡರು. ಅಂತೆಯೇ ದೇವಸ್ಥಾನವನ್ನು ಕಟ್ಟಲು ಇಲ್ಲಿಯ ಕುಂಬಾರ ಜನಾಂಗದ ಗುತ್ತುಗಾರ ಮನೆತನದವರು ದೇವಸ್ಥಾನ ಕಟ್ಟಲು ಸ್ಥಳವನ್ನು ದಾನವಾಗಿ ನೀಡಿದರು. ಅದೇ ಜಗದಲ್ಲಿ ನಾಗಬನವು ಇದ್ದ ಕಾರಣ ಅದರ ಪಕ್ಕದಲ್ಲಿಯೇ ದೇವಸ್ಥಾನ ನಿರ್ಮಿಸಿದರು. ಅಲ್ಲಿ ಪ್ರತಿ ಪೂಜೆ ನಡೆಯುವಾಗಲು ಮೊದಲಿಗೆ ನಾಗದೇವರಿಗೆ ಪೂಜೆ ಸಲ್ಲಿಸುವುದು ಪದ್ಧತಿ. ಈ ದೇವಾಲಯಕ್ಕೆ ಅಲ್ಲೇ ಸುತ್ತ–ಮುತ್ತಲಿನ ಕಡೆಗಳಿಂದ ನೂರಾರು ಭಕ್ತರು ಬಂದು ದೇವಿಯ ಕೃಪೆಗೆ ಪಾತ್ರರಾಗುತ್ತಾರೆ. ತಮಗೆ ಯಾವುದೇ ಕಷ್ಟ ಬಂದರು, ಮಕ್ಕಳಾಗದಿದ್ದವರು, ಮದುವೆ ಯೋಗ ಕೂಡಿ ಬರದಿದ್ದವರು ಅಥವಾ ಇನ್ನಿತರ ಯಾವುದೇ ಸಮಸ್ಯೆಗಳಿದ್ದರೂ ಕೂಡ ಈ ಸ್ಥಳಕ್ಕೆ ಬಂದು ಬೇಡಿಕೊಂಡರೆ ತಮ್ಮ ಕಷ್ಟಗಳು



ಪರಿಹಾರವಾಗುತ್ತವೆ. ಇಲ್ಲಿ ಪ್ರತಿ ತಿಂಗಳ ಸಂಕ್ರಾಂತಿಯಂದು ತಿಂಗಳ ಪೂಜೆಯನ್ನು ಸಲ್ಲಿಸುತ್ತಾರೆ. ಇನ್ನೊಂದು ವಿಶೇಷತೆ ಎಂದರೆ ಚಾಂದ್ರಮಾನ ಯುಗಾದಿಯ ಒಂಬತ್ತು ದಿನಗಳ ಮುನ್ನ ಕಟ್ಟನ್ನು ಕಟ್ಟಿ ಒಂಬತ್ತು ರಾತ್ರಿ ಇಲ್ಲಿಯ ಕುಂಬಾರ ಕುಟುಂಬಸ್ಥರೆಲ್ಲಾ ಸೇರಿ ದೇವಿ ಮಹಾತ್ಮೆ ಓದುವುದು, ಭಜನೆ ಮಾಡುವುದು ಹಾಗೂ ದಿನಕ್ಕೆ ಒಂದೊಂದು ವಿಧದಲ್ಲಿ ಪೂಜೆಯನ್ನು ನೆರವೇರಿಸಿ ಯುಗಾದಿಯ ದಿನದಂದು ವಿಜೃಂಭಣೆಯಿಂದ ಪೂಜೆಯನ್ನು ಮಾಡಿ ಯುಗಾದಿ ಹಬ್ಬವನ್ನು ಆಚರಿಸುತ್ತಾರೆ ಹಾಗೂ ಅದೇ ದಿನದ ಸಂಜೆ ದೇವಿಯ ಮೂರ್ತಿಯನ್ನು ತಲೆಯಲ್ಲಿ ಹೊತ್ತು ಪೂಜಾ ವಿಧಾನಗಳಿಂದ ಬಲಮುರಿಯಲ್ಲಿರುವ ಕಾವೇರಿ ನದಿಗೆ ತೆರಳಿ ದೇವರ ಸ್ನಾನಗೈದು ಶುದ್ಧ ಮಾಡಿ ಪುನಃ ಪೂಜಾಧಿ ವಿಧಗಳಿಂದ ಮೆರವಣಿಗೆ ಮೂಲಕ ಮರಳಿ ದೇವಸ್ಥಾನಕ್ಕೆ ಬರುವುದು ಹಿಂದಿನ ಕಾಲದಿಂದಲೂ ನಡೆದುಕೊಂಡು ಬಂದ ಪದಗದತಿಯಾಗಿದೆ. ಈ ದಿನದಂದು ಮಧ್ಯಾಹ್ನ ಬಂದ ಭಕ್ತಾಧಿಗಳಿಗೆ ಅನ್ನ ಸಂತರ್ಪಣೆಯನ್ನು ಕೂಡ ಇಲ್ಲಿಯ ಕುಟುಂಬಸ್ಥರೆ ನೆರವೇರಿಸುತ್ತಾರೆ. ಈ ದಿನಗಳ ಸಂದರ್ಭದಲ್ಲಿ ಈ ಪ್ರದೇಶದಲ್ಲೇ ಧೂಮಪಾನ, ಮದ್ಯ–ಮಾಂಸಗಳನ್ನು ಮಾಡುವುದೆಲ್ಲವನ್ನು ವ್ರತ ಆಚರಣೆಯಂತೆಯೇ ದೂರವಿಡುತ್ತಾರೆ. ಇಲ್ಲಿಯ ಕೆಲವು ಪಾತ್ರಿಗಳ ಮೈ ಮೇಲೆ ದೇವರು ಬರುವುದು ಈಗಲೂ ಇದೆ. ವೆಂಕರಮಣ, ದೇವಿ ಹಾಗೂ ನಾಗ ದೇವರುಗಳು ಮೈ ಮೇಲೆ ಬರುತ್ತಿದ್ದು, ಆ ದೇವರುಗಳು ಕೊಟ್ಟಂತಹ ನುಡಿಗಳು ಸತ್ಯವಾಗಿರುತ್ತವೆ. ಇಲ್ಲಿ ಯಾರು ಏನೇ ಕೇಳಿಕೊಂಡರು ನೆರವೇರುತ್ತದೆ. ಅಂತೆಯೇ ಇಲ್ಲಿ ಸರಕಾರದಿಂದ ಯಾವುದೇ ಕೊಡುಗೆಗಳು ಲಭಿಸಿಲ್ಲ. ಇಲ್ಲಿಯ ಕುಂಬಾರ ಕುಟುಂಬಸ್ಥರೆ ಸೇರಿಕೊಂಡು ಹಣ ಒಟ್ಟು ಮಾಡಿ ದೇವರ ಸೇವೆಯನ್ನು ಮಾಡುತ್ತಾ, ಬರುವ ಭಕ್ತಾದಿಗಳಿಗೆ ಪ್ರಸಾದವನ್ನು ಹಾಗೂ ಅನ್ನ ಸಂತರ್ಪಣೆಯನ್ನು ನೆರವೇರಿಸುತ್ತಾರೆ. ಇಲ್ಲಿಯ ಕುಟುಂಬಸ್ಥರಾಗಲಿ, ಜನಾಂಗದವರಾಗಲಿ ಯಾರಿಂದಲೂ ಯಾವುದೇ ಫಲಾಪೇಕ್ಷೆಗಳನ್ನು ಭಯಸುವುದಿಲ್ಲ, ತಾವು ದುಡಿದ ಹಣದಿಂದಲೇ ದೇವರ ಎಲ್ಲಾ ಕಾರ್ಯಕ್ರಮಗಳನ್ನು ಮಾಡುತ್ತಾರೆ. ಇಲ್ಲಿ ಭಕ್ತರಿಂದ ಬಂದತಹ ಕಾಣಿಕೆಗಳನ್ನು ದೇವರ ಕಾರ್ಯಕ್ಕಾಗಿಯೇ ಉಪಯೋಗಿಸುತ್ತಾರೆ. ಇಂತಹ ಪುರಾತನ ದೇವಾಲಯವು ಅದ್ಭುತ ಇತಿಹಾಸವನ್ನು ಸೃಷ್ಟಿಸಿದೆ. ಐತಿಹ್ಯ ಕಾಲದಿಂದಲೂ ನಡೆದು ಬಂದಂತ ಇಲ್ಲಿನ ದೇವಾಲಯದ ಸೇವಾ ಕಾರ್ಯಗಳು ಈ ಊರಿಗೆ ಆದರ್ಶವಾಗಿ ಬೆಳೆದು ಅಭಿವೃದ್ಧಿಯತ್ತ ಸಾಗುತ್ತಿದೆ. ಇಲ್ಲಿಯ ವಾತಾವರಣವನ್ನು ನೋಡಿ ಎರೆಡು ದಿನ ಇದ್ದು ಹೋಗೋಣ ಎಂದುಕೊಂಡು ಬಂದರೆ ಇಲ್ಲಿನ ಸ್ಥಳ, ವಾತಾವರಣ, ಜನತೆಯ ಸಾಮರಸ್ಯ, ಶಾಂತಿ, ಚಟುವಟಿಕೆಗಳಿಗೆ ತಲೆಬಾಗಿ ಇಲ್ಲೇ ಖಾಯಂ ಆಗಿ ಇದ್ದುಬಿಡೋಣ ಅನ್ನಿಸುತ್ತೆ. ಇತಿಹಾಸದಿಂದಲೂ ರತ್ನದ ಮುತ್ತಿನಂತೆ ಹೊಳೆಯುತ್ತಿರುವ ಇಲ್ಲಿಯ ಮಣ್ಣಿನ ಫಲವತ್ತತೆಯನ್ನು, ಇಲ್ಲಿಯ ಜನತೆಯನ್ನು ಕಾಯುವ ದೇವರಿಗೆ ಸದಾ ಋಣಿಯಾಗಿರಲೇ ಬೇಕು. ಸುಖ, ಶಾಂತಿ, ನೆಮ್ಮದಿ, ಸಮೃದ್ಧಿಯಿಂದ ವೃದ್ಧಿಸಿ ಈ ದೇವಿ ಹಾಗೂ ವೆಂಕಟರಮಣ ಮತ್ತು ನಾಗ ದೇವರುಗಳು ಜನತೆಯನ್ನು ಕಾಯುತ್ತ ಹರಸುತ್ತಿದ್ದಾರೆ.

ಇತ್ತೀಚಿಗೆ ಈ ದೇವಾಲಯದ ಜೀರ್ಣೋದ್ದಾರ ಕಾರ್ಯಕ್ರಮವು ಕೇರಳದ ಹೆಸರಾಂತ ಪಾತ್ರಿಗಳ ಮುಖಾಂತರ ಮಾಡಿಸಲಾಗಿದೆ. ಈ ದೇವಸ್ಥಾನ ವೀಕ್ಷಿಸಲು ದೇಶ ವಿದೇಶಗಳಿಂದ ಜನರು ಹರಿದು ಬರುವಂತಾಗಲಿ ಹಾಗೂ ಎಲ್ಲಾರಿಗೂ ಇಲ್ಲಿಯ ಹೆಸರಾಂತ ದೇವರುಗಳು ಸರ್ವಮಂಗಳವನ್ನು ಕರುಣಿಸಲಿ ಎಂದು ದೇವರಲ್ಲಿ ಬೇಡಿಕೊಳ್ಳುತ್ತೇನೆ. ಇಲ್ಲಿಯ ಸುಪ್ರಸಿದ್ಧ ದೇವಾಲಯವು ಇನ್ನಷ್ಟು ಬೆಳೆದು ಸದಾ ಇಲ್ಲಿಯ ಜನತೆಯನ್ನು ಕಾಪಾಡಲಿ.

ಈ ಸ್ಥಳಕ್ಕೆ ಹೋಗಬೇಕಾದ ಮಾರ್ಗವೆಂದರೆ ಮೊದಲು ಮಡಿಕೇರಿ ನಗರಕ್ಕೆ ಬಂದು ಅಲ್ಲಿಂದ ಮುಕ್ಕಾಲು ಘಂಟೆಯ ಪ್ರಯಾಣದಲ್ಲಿ ಮೂರ್ನಾಡು ರಸ್ತೆ ಮೂಲಕ ಹೊದ್ದೂರು ಗ್ರಾಮ ತಲುಪಿ ಅಲ್ಲಿಂದ 20 ನಿಮಿಷಗಳ ಕಾಲ ಮುಂದೆ ಹೋದರೆ ಪಾಲೆಮಾಡು ಎಂಬ ಸ್ಥಳದಲ್ಲಿ ಕುಂಬಾರರು ವಾಸಿಸುವ ಸ್ಥಳದಲ್ಲಿ ಶ್ರೀದೇವಿ ಹಾಗೂ ವೆಂಕಟರಮಣ ದೇವಸ್ಥಾನವು ಸಿಗುವುದು.

ಬನ್ನಿ ಸ್ನೇಹಿತರೇ ಇನ್ನೇಕೆ ತಡ?? ಈಗಾಗಲೇ ಯುಗಾದಿ ಹಬ್ಬದ ಪೂಜೆಗಳು ಶುರುವಾಗಿವೆ, ಯುಗಾದಿ ಹಬ್ಬಕ್ಕೆ ನಿಮ್ಮ ಪ್ರಯಾಣ ಈ ದೇವಸ್ಥಾನ ಕಡೆ ಇರಲಿ.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,